AXIS BANK

# ಅತ್ಯಂತ ಮಹತ್ವದ ನಿಯಮಗಳು ಮತ್ತು ಷರತ್ತುಗಳು

ಅತ್ಯಂತ ಮಹತ್ವದ ನಿಯಮಗಳು ಮತ್ತು ಷರತ್ತುಗಳು ಮತ್ತು ಇಲ್ಲಿರುವ ಎಲ್ಲ ಮಾಹಿತಿಯು ಎಲ್ಲ ಕ್ರೆಡಿಟ್ ಕಾರ್ಡುದಾರರು / ಕ್ರೆಡಿಟ್ ಕಾರ್ಡ್‌ಗಳ ಅರ್ಜಿದಾರರು / ಬ್ಯಾಂಕ್ ಗ್ರಾಹಕರು / ಬ್ಯಾಂಕಿನ ಕ್ರೆಡಿಟ್ ಕಾರ್ಡ್ ಉತ್ಪನ್ನದಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸುವ ಸಾರ್ವಜನಿಕ ಸದಸ್ಯರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಅನ್ವಯಿಸುತ್ತವೆ. MITC ಯು ಬದಲಾವಣೆಗೆ ಒಳಪಟ್ಟಿರುತ್ತದೆ. ಹೇಳಲಾದ MITC ಬ್ಯಾಂಕ್‌ನ ಕಾರ್ಡ್‌ದಾರ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳೊಂದಿಗೆ ಹೆಚ್ಚುವರಿಯಾಗಿರುತ್ತದೆ ಮತ್ತು ಅವುಗಳ ಜೊತೆಗೇ ಓದಿಕೊಳ್ಳಬೇಕು.

## A) ಶುಲ್ಕಗಳ ತಪಶೀಲು

### 1. ಸೇರ್ಪಡೆ, ವಾರ್ಷಿಕ & ಹೆಚ್ಚುವರಿ ಕಾರ್ಡ್ ಶುಲ್ಕ

| ಕ್ರೆಡಿಟ್ ಕಾರ್ಡ್ ಪ್ರಕಾರ | ಸೇರ್ಪಡೆ ಶುಲ್ಕ (ರೂ.) (ಕಾರ್ಡ್ ಸಕ್ರಿಯಗೊಳಿಸಿದ ಮೇಲೆ ವಿಧಿಸಲಾಗುತ್ತದೆ)* | ವಾರ್ಷಿಕ ಶುಲ್ಕ 2ನೇ ವರ್ಷದಿಂದ (ರೂ.)* | ಹೆಚ್ಚುವರಿ ಕಾರ್ಡ್ |
|---|---|---|---|
| ಎಕ್ಸಿಸ್ ಬ್ಯಾಂಕ್ INFINITE ಕ್ರೆಡಿಟ್ ಕಾರ್ಡ್ | ಶೂನ್ಯ | ಶೂನ್ಯ | ಶೂನ್ಯ |
| ಎಕ್ಸಿಸ್ ಬ್ಯಾಂಕ್ BUZZ ಕ್ರೆಡಿಟ್ ಕಾರ್ಡ್ | 750 | 750 | ಶೂನ್ಯ |
| ಇಂಡಿಯನ್ ಆಯಿಲ್ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ | 500 | 500 | ಶೂನ್ಯ |
| ಫ್ಲಿಪ್‌ಕಾರ್ಟ್ ಎಕ್ಸಿಸ್ ಬ್ಯಾಂಕ್ ಸೂಪರ್ ಎಲೈಟ್ (FLIPKART AXIS BANK SUPER ELITE) ಕ್ರೆಡಿಟ್ ಕಾರ್ಡ್ | 500 | 500 | ಶೂನ್ಯ |
| ಫ್ಲಿಪ್‌ಕಾರ್ಟ್ ಎಕ್ಸಿಸ್ ಬ್ಯಾಂಕ್ (FLIPKART AXIS BANK) ಕ್ರೆಡಿಟ್ ಕಾರ್ಡ್ | 500 | 500 | ಶೂನ್ಯ |
| ಎಕ್ಸಿಸ್ ಬ್ಯಾಂಕ್ ಫ್ರೀಚಾರ್ಜ್ (AXIS BANK FREECHARGE) ಕ್ರೆಡಿಟ್ ಕಾರ್ಡ್ | 250 | 250 | ಶೂನ್ಯ |
| ಏರ್‌ಟೆಲ್ ಎಕ್ಸಿಸ್ ಬ್ಯಾಂಕ್ (AIRTEL AXIS BANK) ಕ್ರೆಡಿಟ್ ಕಾರ್ಡ್ | 500 | 500 (ಹಿಂದಿನ ವರ್ಷದಲ್ಲಿ ರೂ. 2,00,000 ಖರ್ಚು ಮಾಡಿದ್ದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಸ್ಯಾಮ್‌ಸಂಗ್ ಎಕ್ಸಿಸ್ ಬ್ಯಾಂಕ್ ಸಿಗ್ನೇಚರ್ | 500 | 500 (ಹಿಂದಿನ ವರ್ಷದಲ್ಲಿ ರೂ. 2,00,000 ಖರ್ಚು | ಶೂನ್ಯ |

| | | | |
|---|---|---|---|
| (SIGNATURE) ಕ್ರೆಡಿಟ್ ಕಾರ್ಡ್ | | ಮಾಡಿದ್ದರೆ ಮನ್ನಾ ಮಾಡಲಾಗುವುದು) | |
| ಸ್ಯಾಮ್‌ಸಂಗ್ ಎಕ್ಸಿಸ್ ಬ್ಯಾಂಕ್ ಇನ್‌ಫೈನೈಟ್ (INFINITE) ಕ್ರೆಡಿಟ್ ಕಾರ್ಡ್ | 5000 | 5000 (ಹಿಂದಿನ ವರ್ಷದಲ್ಲಿ ರೂ. 7,00,000 ಖರ್ಚು ಮಾಡಿದ್ದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಎಕ್ಸಿಸ್ ಬ್ಯಾಂಕ್ ಫ್ರೀಚಾರ್ಜ್ ಪ್ಲಸ್ (AXIS BANK FREECHARGE PLUS) ಕ್ರೆಡಿಟ್ ಕಾರ್ಡ್ | 350 | 350 (ಹಿಂದಿನ ವರ್ಷದಲ್ಲಿ ರೂ. 50000 ಖರ್ಚು ಮಾಡಿದ್ದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಏಸ್ (ACE) ಕ್ರೆಡಿಟ್ ಕಾರ್ಡ್ | 499 (ಕಾರ್ಡ್ ವ್ಯವಸ್ಥೆಗೊಳಿಸಿದ 45 ದಿನಗಳ ಒಳಗಾಗಿ ರೂ. 10000 ಖರ್ಚು ಮಾಡಿದರೆ ಮನ್ನಾ ಮಾಡಲಾಗುವುದು) | 499 (ಹಿಂದಿನ ವರ್ಷದಲ್ಲಿ ರೂ. 2,00,000 ಖರ್ಚು ಮಾಡಿದ್ದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಸ್ಪೈಸ್‌ಜೆಟ್ ಎಕ್ಸಿಸ್ ಬ್ಯಾಂಕ್ ವೋಯೇಜ್ (SPICEJET AXIS BANK VOYAGE) ಕ್ರೆಡಿಟ್ ಕಾರ್ಡ್ | 750 | 750 | ಶೂನ್ಯ |
| ಸ್ಪೈಸ್‌ಜೆಟ್ ಎಕ್ಸಿಸ್ ಬ್ಯಾಂಕ್ ವೋಯೇಜ್ ಬ್ಲ್ಯಾಕ್ (SPICEJET AXIS BANK VOYAGE BLACK) ಕ್ರೆಡಿಟ್ ಕಾರ್ಡ್ | 2,000 | 2,000 | ಶೂನ್ಯ |
| ಸೆಲೆಕ್ಟ್ ಕ್ರೆಡಿಟ್ (SELECT) ಕಾರ್ಡ್ | 3,000 (ಬರ್ಗಂಡಿ ಖಾತೆದಾರರಿಗೆ ಶೂನ್ಯ) | 3,000 (ಬರ್ಗಂಡಿ ಖಾತೆದಾರರಿಗೆ ಶೂನ್ಯ) | ಶೂನ್ಯ |
| ಎಕ್ಸಿಸ್ ಬ್ಯಾಂಕ್ ಅಟ್ಲಾಸ್ (AXIS BANK ATLAS) ಕ್ರೆಡಿಟ್ ಕಾರ್ಡ್ | 5,000 | 5,000 | ಶೂನ್ಯ |
| ಬರ್ಗಂಡಿ ಪ್ರೈವೇಟ್ (BURGUNDY PRIVATE) ಕ್ರೆಡಿಟ್ ಕಾರ್ಡ್ | 50,000 (ಬರ್ಗಂಡಿ ಪ್ರೈವೇಟ್ ಖಾತೆದಾರರಿಗೆ ಶೂನ್ಯ) | 50,000 (ಬರ್ಗಂಡಿ ಪ್ರೈವೇಟ್ ಖಾತೆದಾರರಿಗೆ ಶೂನ್ಯ) | ಶೂನ್ಯ |
| ರಿಸರ್ವ್ (RESERVE) ಕ್ರೆಡಿಟ್ ಕಾರ್ಡ್ | 50,000 | 50,000 (ಹಿಂದಿನ ವರ್ಷದಲ್ಲಿ INR 35,00,000 ಅರ್ಹ | ಶೂನ್ಯ |

| | | | |
|---|---|---|---|
| | | ಖರ್ಚುಗಳ* ಮೇಲೆ ಮನ್ನಾ ಮಾಡಲಾಗುತ್ತದೆ) | |
| ಮ್ಯಾಗ್ನಸ್ (MAGNUS) ಕ್ರೆಡಿಟ್ ಕಾರ್ಡ್ | 12,500 | 12,500 (ಹಿಂದಿನ ವರ್ಷದಲ್ಲಿ INR 25,00,000 ಅರ್ಹ ಖರ್ಚುಗಳ* ಮೇಲೆ ಮನ್ನಾ ಮಾಡಲಾಗುವುದು) | ಶೂನ್ಯ |
| ಮ್ಯಾಗ್ನಸ್ ಫಾರ್ ಬರ್ಗಂಡಿ (MAGNUS FOR BURGUNDY) ಕ್ರೆಡಿಟ್ ಕಾರ್ಡ್# | 30,000# | 30,000# (ಹಿಂದಿನ ವರ್ಷದಲ್ಲಿ INR 30,00,000 ಅರ್ಹ ಖರ್ಚುಗಳ* ಮೇಲೆ ಮನ್ನಾ ಮಾಡಲಾಗುವುದು) | ಶೂನ್ಯ# |
| ಎಕ್ಸಿಸ್ ಬ್ಯಾಂಕ್ ವಿಸ್ತಾರಾ ಇನ್‌ಫೈನೈಟ್ (AXIS BANK VISTARA INFINIT) ಕ್ರೆಡಿಟ್ ಕಾರ್ಡ್ | 10,000 | 10,000 | ಶೂನ್ಯ |
| ಎಕ್ಸಿಸ್ ಬ್ಯಾಂಕ್ ವಿಸ್ತಾರಾ ಸಿಗ್ನೇಚರ್ (AXIS BANK VISTARA SIGNATURE) ಕ್ರೆಡಿಟ್ ಕಾರ್ಡ್ | 3,000 | 3,000 | ಶೂನ್ಯ |
| ಎಕ್ಸಿಸ್ ಬ್ಯಾಂಕ್ ವಿಸ್ತಾರಾ (AXIS BANK VISTARA) ಕ್ರೆಡಿಟ್ ಕಾರ್ಡ್ | 1,500 | 1,500 | ಶೂನ್ಯ |
| ಪ್ರಿವಿಲೇಜ್ (PRIVILEGE) ಕ್ರೆಡಿಟ್ ಕಾರ್ಡ್ | 1,500 | 1,500 | ಶೂನ್ಯ |
| ಮೈಲ್ಸ್ & ಮೋರ್ (MILES & MORE) ಎಕ್ಸಿಸ್ ಬ್ಯಾಂಕ್ ವರ್ಲ್ಡ್ ಸೆಲೆಕ್ಟ್ ಕ್ರೆಡಿಟ್ ಕಾರ್ಡ್ | 10,000 | 4,500 | ಶೂನ್ಯ |
| ಮೈಲ್ಸ್ & ಮೋರ್ (MILES & MORE) ಎಕ್ಸಿಸ್ ಬ್ಯಾಂಕ್ ವರ್ಲ್ಡ್ ಕ್ರೆಡಿಟ್ ಕಾರ್ಡ್ | 3,500 | 3,500 | ಶೂನ್ಯ |
| ನಿಯೋ (NEO) ಕ್ರೆಡಿಟ್ ಕಾರ್ಡ್ | 250 | 250 | ಶೂನ್ಯ |
| ಔರಾ (AURA) ಕ್ರೆಡಿಟ್ ಕಾರ್ಡ್ | 749 | 749 | ಶೂನ್ಯ |

| | | | |
|---|---|---|---|
| ಎಲ್ಐಸಿ (LIC) ಕ್ರೆಡಿಟ್ ಕಾರ್ಡ್ | ಶೂನ್ಯ | ಶೂನ್ಯ | ಶೂನ್ಯ |
| ಸಿಗ್ನೇಚರ್ (SIGNATURE) ಕ್ರೆಡಿಟ್ ಕಾರ್ಡ್ ಪ್ರಯಾಣ ಪ್ರಯೋಜನಗಳ ಜೊತೆಗೆ | 1,500 | 1,000 (ಹಿಂದಿನ ವರ್ಷದಲ್ಲಿ ರೂ. 2.4 ಲಕ್ಷಗಳ ವೆಚ್ಚದ ಮಿತಿಯನ್ನು ಸಾಧಿಸಿದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಮೈ ವಿಂಗ್ಸ್ (MY WINGS) ಕ್ರೆಡಿಟ್ ಕಾರ್ಡ್ | 1,200 | 500 | ಶೂನ್ಯ |
| ಮೈ ಚಾಯ್ಸ್ (MY CHOICE) ಕ್ರೆಡಿಟ್ ಕಾರ್ಡ್ | 250 (ಇಮೇಜ್ ಕಾರ್ಡ್‌ಗೆ ಹೆಚ್ಚುವರಿಯಾಗಿ ರೂ. 150 ಶುಲ್ಕ) | 250 | ಶೂನ್ಯ |
| ಮೈ ಝೋನ್ (MY ZONE) ಕ್ರೆಡಿಟ್ ಕಾರ್ಡ್ | 500 | 500 | ಶೂನ್ಯ |
| ಪ್ಲಾಟಿನಂ (PLATINUM) ಕ್ರೆಡಿಟ್ ಕಾರ್ಡ್ | 500 (ಕಾರ್ಡ್ ವ್ಯವಸ್ಥೆಗೊಳಿಸಿದ 45 ದಿನಗಳ ಒಳಗಾಗಿ ರೂ. 5,000 ಖರ್ಚು ಮಾಡಿದರೆ ಮನ್ನಾ ಮಾಡಲಾಗುವುದು) | 200 (ಹಿಂದಿನ ವರ್ಷದಲ್ಲಿ ರೂ. 1,00,000 ಖರ್ಚು ಮಾಡಿದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಟೈಟಾನಿಯಂ (TITANIUM) ಕ್ರೆಡಿಟ್ ಕಾರ್ಡ್ | 250 (ಕಾರ್ಡ್ ವ್ಯವಸ್ಥೆಗೊಳಿಸಿದ 45 ದಿನಗಳ ಒಳಗಾಗಿ ರೂ. 2,500 ಖರ್ಚು ಮಾಡಿದರೆ ಮನ್ನಾ ಮಾಡಲಾಗುವುದು) | 100 (ಹಿಂದಿನ ವರ್ಷದಲ್ಲಿ ರೂ. 50,000 ಖರ್ಚು ಮಾಡಿದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಪ್ರೈಡ್ ಪ್ಲಾಟಿನಂ (PRIDE PLATINUM) ಕ್ರೆಡಿಟ್ ಕಾರ್ಡ್ | ಶೂನ್ಯ | 250 (ಹಿಂದಿನ ವರ್ಷದಲ್ಲಿ ರೂ. 20,000 ಖರ್ಚು ಮಾಡಿದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಪ್ರೈಡ್ ಸಿಗ್ನೇಚರ್ (PRIDE SIGNATURE) ಕ್ರೆಡಿಟ್ ಕಾರ್ಡ್ | ಶೂನ್ಯ | 500 (ಹಿಂದಿನ ವರ್ಷದಲ್ಲಿ ರೂ. 40,000 ಖರ್ಚು ಮಾಡಿದರೆ ಮನ್ನಾ ಮಾಡಲಾಗುವುದು) | ಶೂನ್ಯ |

| | | | |
|---|---|---|---|
| ರಿವಾರ್ಡ್ಸ್ (REWARDS) ಕ್ರೆಡಿಟ್ ಕಾರ್ಡ್ | 1000 | 1000 (ಹಿಂದಿನ ವರ್ಷದಲ್ಲಿ ರೂ. 2,00,000 ಖರ್ಚು ಮಾಡಿದರೆ ಮನ್ನಾ ಮಾಡಲಾಗುವುದು) | ಶೂನ್ಯ |
| ಕ್ವಿಕ್ (KWIK) ಕ್ರೆಡಿಟ್ ಕಾರ್ಡ್ | ಶೂನ್ಯ | ಶೂನ್ಯ | ಶೂನ್ಯ |
| ಫೈಬ್ (FIBE) ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ | ಶೂನ್ಯ | ಶೂನ್ಯ | ಶೂನ್ಯ |

ಗಮನಿಸಿ - ಬಾಡಿಗೆ ವಹಿವಾಟುಗಳು )MCC 6513) ಮತ್ತು ವ್ಯಾಲೆಟ್ ಲೋಡ್ ವಹಿವಾಟುಗಳು )MCC 6540) ವಾರ್ಷಿಕ ಶುಲ್ಕ ಮನ್ನಾ ಪಡೆಯಲು ಎಣಿಸಿದ ಖರ್ಚುಗಳಿಗೆ ಅರ್ಹತೆ ಹೊಂದಿರುವುದಿಲ್ಲ.

*ರಿಸರ್ವ್ ಮತ್ತು ಮ್ಯಾಗ್ನಸ್ ಕ್ರೆಡಿಟ್ ಕಾರ್ಡ್‌ಗಾಗಿ, ಬಾಡಿಗೆ ವಹಿವಾಟುಗಳು )MCC 6513), ವ್ಯಾಲೆಟ್ ಲೋಡ್ ವಹಿವಾಟುಗಳು )MCC 6540), ಯುಟಿಲಿಟಿ ವಹಿವಾಟುಗಳು )MCC 4814, 4816, 4899, 4900), ಸರ್ಕಾರಿ ಸಂಸ್ಥೆಗಳ ವಹಿವಾಟುಗಳು )MCC 9222, 9311, 9399, 9402), EMI ಪರಿವರ್ತನೆಗಳು, ನಗದು ಹಿಂಪಡೆಯುವಿಕೆ, ವಾಪಸಾತಿಗಳು ಮತ್ತು ಶುಲ್ಕ ಮತ್ತು ವೆಚ್ಚಗಳು ಇವುಗಳೆಲ್ಲ ವಾರ್ಷಿಕ ಶುಲ್ಕ ಮನ್ನಾ ಮಿತಿ ಲೆಕ್ಕಾಚಾರಕ್ಕೆ ಅರ್ಹವಾಗುವುದಿಲ್ಲ.

#ಅಗತ್ಯವಿರುವ ವೈಯಕ್ತಿಕ ಬರ್ಗಂಡಿ ಸಂಬಂಧವನ್ನು ನಿರ್ವಹಿಸುವ ಬರ್ಗಂಡಿ ಗ್ರಾಹಕರಿಗೆ ಮಾತ್ರ ಅನ್ವಯಿಸುತ್ತದೆ. ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ, https://www.axisbank.com/Magnus. ಬರ್ಗಂಡಿಗಾಗಿ ಮ್ಯಾಗ್ನಸ್ ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸುವ ಮೂಲಕ, ಅಗತ್ಯವಾದ ಬರ್ಗಂಡಿ 'ಒಟ್ಟು ಸಂಬಂಧ ಮೌಲ್ಯ' ಮಾನದಂಡವನ್ನು ಗ್ರಾಹಕರು ನಿರ್ವಹಿಸದಿದ್ದರೆ ಮ್ಯಾಗ್ನಸ್ ಕ್ರೆಡಿಟ್ ಕಾರ್ಡ್ ಫಾರ್ ಬರ್ಗಂಡಿಯನ್ನು ಹೊಸ ಮ್ಯಾಗ್ನಸ್ ಕ್ರೆಡಿಟ್ ಕಾರ್ಡ್‌ನಿಂದ ಬದಲಾಯಿಸುವ ಬ್ಯಾಂಕಿನ ನೀತಿಯನ್ನು ನೀವು ಒಪ್ಪುತ್ತೀರಿ. ಹೊಸ ಮ್ಯಾಗ್ನಸ್ ಕ್ರೆಡಿಟ್ ಕಾರ್ಡ್ ಸೇರ್ಪಡೆ ಮತ್ತು ವಾರ್ಷಿಕ ಶುಲ್ಕ ರೂ. 12,500++ ಅನ್ನು ಅನುಭವಿಸುತ್ತದೆ.

**2. ಹಣಕಾಸು/ಬಡ್ಡಿ ಶುಲ್ಕ (ಜೂನ್ 12, 2021ರಿಂದ ಜಾರಿಗೆ ಬರುತ್ತದೆ)**

| ಎಕ್ಸಿಸ್ ಬ್ಯಾಂಕ್ ಕಾರ್ಡ್ ವೈವಿಧ್ಯ | ವಿಸ್ತೃತ ಸಾಲದ ಮೇಲಿನ ಅವಧಿ ಮೀರಿ ಬಾಕಿ ಉಳಿದ ಬಡ್ಡಿ | | ನಗದು ಮುಂಗಡಗಳ ಮೇಲಿನ ಬಡ್ಡಿ | |
|---|---|---|---|---|
| | ಮಾಸಿಕ ದರ | ವಾರ್ಷಿಕ ದರ | ಮಾಸಿಕ ದರ | ವಾರ್ಷಿಕ ದರ |

| | | | | |
|---|---|---|---|---|
| ಬರ್ಗಂಡಿ ಪ್ರೈವೇಟ್ (BURGUNDY PRIVATE) ಕ್ರೆಡಿಟ್ ಕಾರ್ಡ್ | ಮಾಸಿಕ 1.5% | ವಾರ್ಷಿಕ 19.56% | ಮಾಸಿಕ 1.5% | ವಾರ್ಷಿಕ 19.56% |
| ಪ್ರೈಡ್ ಪ್ಲಾಟಿನಂ (PRIDE PLATINUM) ಕ್ರೆಡಿಟ್ ಕಾರ್ಡ್, ಪ್ರೈಡ್ ಸಿಗ್ನೇಚರ್ (PRIDE SIGNATURE) ಕ್ರೆಡಿಟ್ ಕಾರ್ಡ್ | ಮಾಸಿಕ 2.95% | ವಾರ್ಷಿಕ 41.75% | ಮಾಸಿಕ 2.95% | ವಾರ್ಷಿಕ 41.75% |
| ಪ್ರಿವಿಲೆಜ್ (PRIVILEGE) ಕ್ರೆಡಿಟ್ ಕಾರ್ಡ್/ ಸೆಲೆಕ್ಟ್ (SELECT) ಕ್ರೆಡಿಟ್ ಕಾರ್ಡ್/ಎಕ್ಸಿಸ್ ಬ್ಯಾಂಕ್ ಅಟ್ಲಾಸ್ (AXIS BANK ATLAS) ಕ್ರೆಡಿಟ್ ಕಾರ್ಡ್/ ಮೈಲ್ಸ್ & ಮೋರ್ (MILES & MORE) ಎಕ್ಸಿಸ್ ಬ್ಯಾಂಕ್ ವರ್ಲ್ಡ್ ಸೆಲೆಕ್ಟ್ ಕಾರ್ಡ್/ ಮೈಲ್ಸ್ & ಮೋರ್ (MILES & MORE) ಎಕ್ಸಿಸ್ ಬ್ಯಾಂಕ್ ವರ್ಲ್ಡ್ ಕಾರ್ಡ್/ ಮೈ ಝೋನ್ (MY ZONE) ಕ್ರೆಡಿಟ್ ಕಾರ್ಡ್ / ಮೈ ಚಾಯ್ಸ್ (MY CHOICE) ಕ್ರೆಡಿಟ್ ಕಾರ್ಡ್ /ಮೈ ವಿಂಗ್ಸ್ (MY WINGS) ಕ್ರೆಡಿಟ್ ಕಾರ್ಡ್/ ಎಕ್ಸಿಸ್ ಬ್ಯಾಂಕ್ ವಿಸ್ತಾರಾ ಸಿಗ್ನೇಚರ್ (AXIS BANK VISTARA SIGNATUR) ಕ್ರೆಡಿಟ್ ಕಾರ್ಡ್/ಎಕ್ಸಿಸ್ ಬ್ಯಾಂಕ್ ವಿಸ್ತಾರಾ (AXIS BANK VISTARA) ಕ್ರೆಡಿಟ್ ಕಾರ್ಡ್ / ಪ್ಲಾಟಿನಂ (PLATINUM) ಕ್ರೆಡಿಟ್ ಕಾರ್ಡ್ / ಟೈಟಾನಿಯಂ (TITANIUM) ಕ್ರೆಡಿಟ್ ಕಾರ್ಡ್/ ನಿಯೋ (NEO) ಕ್ರೆಡಿಟ್ ಕಾರ್ಡ್ / ಎಕ್ಸಿಸ್ ಬ್ಯಾಂಕ್ ಬಜ್ (AXIS BANK BUZZ) ಕ್ರೆಡಿಟ್ ಕಾರ್ಡ್/ವೀಸಾ ಗೋಲ್ಡ್ (VISA GOLD) ಕ್ರೆಡಿಟ್ ಕಾರ್ಡ್/ವೀಸಾ ಸಿಲ್ವರ್ (VISA SILVER) ಕ್ರೆಡಿಟ್ ಕಾರ್ಡ್/ ಇಂಡಿಯನ್ ಆಯಿಲ್ ಎಕ್ಸಿಸ್ ಬ್ಯಾಂಕ್ (INDIAN OIL AXIS BANK) ಕ್ರೆಡಿಟ್ ಕಾರ್ಡ್ / ಎಕ್ಸಿಸ್ ಬ್ಯಾಂಕ್ ವಿಸ್ತಾರಾ ಇನ್ಫೈನೈಟ್ (AXIS BANK VISTARA INFINITE) ಕ್ರೆಡಿಟ್ ಕಾರ್ಡ್ / ಔರಾ (AURA) ಕ್ರೆಡಿಟ್ ಕಾರ್ಡ್ / ಎಲ್ಐಸಿ (LIC) ಕ್ರೆಡಿಟ್ ಕಾರ್ಡ್‌ಗಳು / ರಿವಾರ್ಡ್ಸ್ | ಮಾಸಿಕ 3.6% | ವಾರ್ಷಿಕ 52.86% | ಮಾಸಿಕ 3.6% | ವಾರ್ಷಿಕ 52.86% |

| | | | | |
|---|---|---|---|---|
| (REWARDS) ಕ್ರೆಡಿಟ್ ಕಾರ್ಡ್/ ಕ್ವಿಕ್ (KWIK) ಕ್ರೆಡಿಟ್ ಕಾರ್ಡ್ | | | | |
| ರಿಸರ್ವ್ (RESERVE) ಕ್ರೆಡಿಟ್ ಕಾರ್ಡ್ / ಮ್ಯಾಗ್ನಸ್ (MAGNUS) ಕ್ರೆಡಿಟ್ ಕಾರ್ಡ್ / ಮ್ಯಾಗ್ನಸ್ ಫಾರ್ ಬರ್ಗಂಡಿ (MAGNUS FOR BURGUNDY) ಕ್ರೆಡಿಟ್ ಕಾರ್ಡ್ | ಮಾಸಿಕ 3.0% | ವಾರ್ಷಿಕ 42.58% | ಮಾಸಿಕ 3.0% | ವಾರ್ಷಿಕ 42.58% |
| ಫ್ಲಿಪ್‌ಕಾರ್ಟ್ ಎಕ್ಸಿಸ್ ಬ್ಯಾಂಕ್ (FLIPKART AXIS BANK) ಕ್ರೆಡಿಟ್ ಕಾರ್ಡ್ / ಫ್ಲಿಪ್‌ಕಾರ್ಡ್ ಎಕ್ಸಿಸ್ ಬ್ಯಾಂಕ್ ಸೂಪರ್ ಎಲೈಟ್ (FLIPKART AXIS BANK SUPER ELITE) ಕ್ರೆಡಿಟ್ ಕಾರ್ಡ್/ ಎಕ್ಸಿಸ್ ಬ್ಯಾಂಕ್ ಫ್ರೀಚಾರ್ಜ್ (AXIS BANK FREECHARGE) ಕ್ರೆಡಿಟ್ ಕಾರ್ಡ್/ ಎಕ್ಸಿಸ್ ಬ್ಯಾಂಕ್ ಫ್ರೀಚಾರ್ಜ್ ಪ್ಲಸ್ (AXIS BANK FREECHARGE PLUS) ಕ್ರೆಡಿಟ್ ಕಾರ್ಡ್/ ಏಸ್ (ACE) ಕ್ರೆಡಿಟ್ ಕಾರ್ಡ್/ ಏರ್‌ಟೆಲ್ ಎಕ್ಸಿಸ್ ಬ್ಯಾಂಕ್ (AIRTEL AXIS BANK) ಕ್ರೆಡಿಟ್ ಕಾರ್ಡ್/ಸ್ಪೈಸ್‌ಜೆಟ್ ಎಕ್ಸಿಸ್ ಬ್ಯಾಂಕ್ ವೋಯೇಜ್ (SPICEJET AXIS BANK VOYAGE) ಕ್ರೆಡಿಟ್ ಕಾರ್ಡ್/ ಸ್ಪೈಸ್‌ಜೆಟ್ ಎಕ್ಸಿಸ್ ಬ್ಯಾಂಕ್ ವೋಯೇಜ್ ಬ್ಲ್ಯಾಕ್ (SPICEJET AXIS BANK VOYAGE BLACK) ಕ್ರೆಡಿಟ್ ಕಾರ್ಡ್/ ಸ್ಯಾಮ್ಸಂಗ್ ಎಕ್ಸಿಸ್ ಬ್ಯಾಂಕ್ ಸಿಗ್ನೇಚರ್ (SIGNATURE) ಕ್ರೆಡಿಟ್ ಕಾರ್ಡ್ / ಸ್ಯಾಮ್ಸಂಗ್ ಎಕ್ಸಿಸ್ ಬ್ಯಾಂಕ್ ಇನ್‌ಫೈನೈಟ್ (INFINITE) ಕ್ರೆಡಿಟ್ ಕಾರ್ಡ್/ ಫೈಬ್ ಎಕ್ಸಿಸ್ ಬ್ಯಾಂಕ್ (FIBE AXIS BANK) ಕ್ರೆಡಿಟ್ ಕಾರ್ಡ್ | ಮಾಸಿಕ 3.6% | ವಾರ್ಷಿಕ 52.86% | ಮಾಸಿಕ 3.6% | ವಾರ್ಷಿಕ 52.86% |
| ಸೆಕ್ಯೂರ್ಡ್ ಗೋಲ್ಡ್ (SECURED GOLD) ಕ್ರೆಡಿಟ್ ಕಾರ್ಡ್ / ಸೆಕ್ಯೂರ್ಡ್ ಸಿಲ್ವರ್ (SECURED SILVER) ಕ್ರೆಡಿಟ್ ಕಾರ್ಡ್/ ಪ್ಲಾಟಿನಂ ಸೆಕ್ಯೂರ್ಡ್ (PLATINUM | ಮಾಸಿಕ 3.4% | ವಾರ್ಷಿಕ 49.36% | ಮಾಸಿಕ 3.4% | ವಾರ್ಷಿಕ 49.36% |

| | | | | |
|---|---|---|---|---|
| SECURED) ಕ್ರೆಡಿಟ್ ಕಾರ್ಡ್ / ಇನ್‌ಸ್ಟಾ ಈಸಿ (INSTA EASY) ಕ್ರೆಡಿಟ್ ಕಾರ್ಡ್ / ಮೈ ಝೋನ್ ಈಸಿ (MY ZONE EASY) ಕ್ರೆಡಿಟ್ ಕಾರ್ಡ್ / ಪ್ರಿವಿಲೆಜ್ ಈಸಿ (PRIVILEGE EASY) ಕ್ರೆಡಿಟ್ ಕಾರ್ಡ್ / ಎಕ್ಸಿಸ್ ಬ್ಯಾಂಕ್ ಫ್ಲಿಪ್‌ಕಾರ್ಟ್ ಸೆಕ್ಯೂರ್ಡ್ (AXIS BANK FLIPKART SECURED) ಕ್ರೆಡಿಟ್ ಕಾರ್ಡ್ / ಇಂಡಿಯನ್ ಆಯಿಲ್ ಎಕ್ಸಿಸ್ ಬ್ಯಾಂಕ್ ಈಸಿ (INDIAN OIL AXIS BANK EASY) ಕ್ರೆಡಿಟ್ ಕಾರ್ಡ್ | | | | |

**ಹಣಕಾಸು/ಬಡ್ಡಿ ಶುಲ್ಕದ ವಿವರಗಳು:**

1) ಬಡ್ಡಿಯನ್ನು ವಿಧಿಸಲಾಗುವುದು;
    - ಬಾಕಿ ಇರುವ ಒಟ್ಟು ಮೊತ್ತವನ್ನು ಪಾವತಿಯ ನಿಗದಿತ ದಿನಾಂಕದಂದು ಪಾವತಿಸದಿದ್ದರೆ, ಬಾಕಿ ಇರುವ ಒಟ್ಟು ಮೊತ್ತದ ಮೇಲೆ ಮತ್ತು ಹಿಂದಿನ ಬಾಕಿ ಮೊತ್ತವನ್ನು ಪೂರ್ಣವಾಗಿ ಪಾವತಿಸುವವರೆಗೆ ಎಲ್ಲ ಹೊಸ ವಹಿವಾಟುಗಳ ಮೇಲೆ (ವಹಿವಾಟು ದಿನಾಂಕದಿಂದ) ಬಡ್ಡಿಯನ್ನು ವಿಧಿಸಲಾಗುತ್ತದೆ.
    - ಹಿಂಪಡೆಯುವ ದಿನಾಂಕದಿಂದ ಪಾವತಿಯ ದಿನಾಂಕದವರೆಗೆ ಎಲ್ಲ ನಗದು ಮುಂಗಡಗಳ ಮೇಲೆ.
    - ಪಾವತಿಯ ಕೊನೆಯ ದಿನಾಂಕದ ಬಳಿಕವೂ ಬಾಕಿ ಇರುವ ಕನಿಷ್ಠ ಮೊತ್ತವನ್ನು ಪಾವತಿಸದಿದ್ದರೆ, ವಿಳಂಬ ಪಾವತಿ ಶುಲ್ಕ / ಬಡ್ಡಿಯನ್ನು ವಿಧಿಸಲಾಗುತ್ತದೆ.
    - ಇತರ ಕ್ರೆಡಿಟ್ ಕಾರ್ಡ್ ಖಾತೆಗಳಿಂದ ಶಿಲ್ಕು ವರ್ಗಾವಣೆ ಮಾಡಿದ ಸಂದರ್ಭದಲ್ಲಿ, ವರ್ಗಾವಣೆಗೊಂಡ ಮೊತ್ತದ ಮೇಲೆ ಬ್ಯಾಂಕರ್ಸ್ ಚೆಕ್ / NEFT ನೀಡಿದ ದಿನಾಂಕದಿಂದ ಮತ್ತು ನಿಮ್ಮ ಕಾರ್ಡ್ ಖಾತೆಯಲ್ಲಿ ಬಾಕಿ ಇರುವ ಯಾವುದೇ ಖರೀದಿ ಮೊತ್ತದ ಮೇಲೆ ಹಣಕಾಸು ಶುಲ್ಕಗಳು ತಕ್ಷಣವೇ ಸೇರತೊಡಗುತ್ತವೆ

ಮೇಲಿನ ಹಣಕಾಸು ಶುಲ್ಕಗಳು ಕಾರ್ಡ್ ಖಾತೆಯನ್ನು ಮುಚ್ಚಿದ ಬಳಿಕವೂ, ಕಾರ್ಡ್‌ನಲ್ಲಿನ ಬಾಕಿ ಮೊತ್ತವನ್ನು ಸಂಪೂರ್ಣವಾಗಿ ತೀರಿಸುವವರೆಗೂ ಪಾವತಿಸಲಾಗುವುದು.

**2)** ಇತರ ಶುಲ್ಕಗಳು ಮತ್ತು ವೆಚ್ಚಗಳು

| | |
|---|---|
| ಹಣ ಹಿಂಪಡೆಯುವ ಶುಲ್ಕಗಳು** | ನಗದು ಮೊತ್ತದ 2.5% (ಕನಿಷ್ಠ 500 ರೂ.); BURGUNDY PRIVATE ಕ್ರೆಡಿಟ್ ಕಾರ್ಡ್, RESERVE ಕ್ರೆಡಿಟ್ ಕಾರ್ಡ್, MAGNUS ಕ್ರೆಡಿಟ್ ಕಾರ್ಡ್ ಮತ್ತು MAGNUS FOR BURGUNDY ಕ್ರೆಡಿಟ್ ಕಾರ್ಡ್‌ಗಳಿಗೆ ಮನ್ನಾ ಮಾಡಲಾಗಿದೆ |
| ಶಾಖೆಗಳಲ್ಲಿ ನಗದು ಪಾವತಿಗಾಗಿ ಶುಲ್ಕಗಳು (ನಗದು ಪಾವತಿಗಾಗಿ ದೈನಂದಿನ ಮಿತಿ 50,000 ರೂ.) | 100 ರೂ.; BURGUNDY PRIVATE ಕ್ರೆಡಿಟ್ ಕಾರ್ಡ್ ಮತ್ತು INSTA EASY ಕ್ರೆಡಿಟ್ ಕಾರ್ಡ್‌ಗಳಿಗೆ ಮನ್ನಾ ಮಾಡಲಾಗಿದೆ |
| ಸ್ಟೇಟ್‌ಮೆಂಟ್‌ನ ನಕಲು ಪ್ರತಿಯ ಶುಲ್ಕ | ಮನ್ನಾ ಮಾಡಲಾಗಿದೆ |
| BURGUNDY PRIVATE ಕ್ರೆಡಿಟ್ ಕಾರ್ಡ್‌ಗೆ ವಿಳಂಬ ಪಾವತಿ ಶುಲ್ಕ | ಮನ್ನಾ ಮಾಡಲಾಗಿದೆ |
| ಎಲ್ಲ ಇತರ ಕ್ರೆಡಿಟ್ ಕಾರ್ಡ್‌ಗಳಿಗೆ ವಿಳಂಬ ಪಾವತಿ ಶುಲ್ಕ | ಒಟ್ಟು ಬಾಕಿ ಪಾವತಿಯು 500 ರೂ.ವರೆಗೆ ಇದ್ದರೆ ಯಾವುದೇ ಶುಲ್ಕವಿಲ್ಲ. |
| | ಒಟ್ಟು ಬಾಕಿ ಪಾವತಿಯು 501 ರೂ. ಇಂದ 5,000 ರೂ. ವರೆಗೆ ಇದ್ದರೆ ಶುಲ್ಕ 500 ರೂ. |
| | ಒಟ್ಟು ಬಾಕಿ ಪಾವತಿಯು 5001 ರೂ.ಗಳಿಂದ 10,000 ರೂ. ವರೆಗೆ ಇದ್ದರೆ ಶುಲ್ಕ 750 ರೂ. |
| | ಒಟ್ಟು ಬಾಕಿ ಪಾವತಿಯು 10,000 ರೂ. ಗಿಂತ ಹೆಚ್ಚಿದ್ದರೆ ಶುಲ್ಕ 1,200 ರೂ. |
| ಇತರ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳಿಗೆ ಮಿತಿ-ಮೀರಿದ ದಂಡ*** | ಮಿತಿ-ಮೀರಿದ ಮೊತ್ತದ 2.5% ಅನ್ನು (ಕನಿಷ್ಠ 500 ರೂ.) BURGUNDY PRIVATE ಕ್ರೆಡಿಟ್ ಕಾರ್ಡ್‌ಗಳಿಗೆ ಮನ್ನಾ ಮಾಡಲಾಗುತ್ತದೆ |
| ಚಾರ್ಜ್ ಸ್ಲಿಪ್ ರಿಟ್ರೀವಲ್ ಶುಲ್ಕ ಅಥವಾ ವಿನಂತಿಯ ನಕಲು ಪ್ರತಿಯ ಶುಲ್ಕ | ಮನ್ನಾ ಮಾಡಲಾಗಿದೆ |
| ಔಟ್‌ಸ್ಟೇಶನ್ ಚೆಕ್ ಶುಲ್ಕ | ಮನ್ನಾ ಮಾಡಲಾಗಿದೆ |
| ಚೆಕ್ ವಾಪಸಾತಿ ಅಥವಾ ಅಮಾನ್ಯದ ಶುಲ್ಕ ಶುಲ್ಕ ಅಥವಾ ಆಟೋ ಡೆಬಿಟ್ ರಿವರ್ಸಲ್ (ಬ್ಯಾಂಕ್ ಖಾತೆಯಲ್ಲಿ ಹಣ ಇಲ್ಲದಿರುವುದು) | ಕನಿಷ್ಠ 450 ರೂ., ಗರಿಷ್ಠ 1,500 ರೂ. ಗಳ ಮಿತಿಗೆ ಒಳಪಟ್ಟಂತೆ, ಪಾವತಿ ಮೊತ್ತದ 2% ಅನ್ನು BURGUNDY PRIVATE ಕ್ರೆಡಿಟ್ ಕಾರ್ಡ್‌ಗಳಿಗೆ ಮನ್ನಾ ಮಾಡಲಾಗುತ್ತದೆ |
| ರೈಲಿನ ಟಿಕೆಟ್‌ಗಳ ಖರೀದಿ ಅಥವಾ ರದ್ದತಿಯ ಮೇಲೆ ಸರ್‌ಚಾರ್ಜ್ | IRCTC / ಭಾರತೀಯ ರೈಲ್ವೆ ಸೂಚಿಸಿದಂತೆ |

| | |
|---|---|
| ಇಂಧನ ವಹಿವಾಟಿನ ಮೇಲೆ ಸರ್‌ಚಾರ್ಜ್ | ವಹಿವಾಟಿನ ಮೊತ್ತದ 1%<br>(ರೂ. 400 ರಿಂದ ರೂ. 4,000 ರೂ. ನಡುವಿನ ಇಂಧನ ವಹಿವಾಟುಗಳಿಗಾಗಿ ಮರುಪಾವತಿ ಮಾಡಲಾಗುತ್ತದೆ)<br>ಪ್ರತಿ ಸ್ಟೇಟ್‌ಮೆಂಟ್ ಸೈಕಲ್‌ಗೆ 400 ರೂ. ವರೆಗಿನ ಗರಿಷ್ಠ ಪ್ರಯೋಜನಗಳು; ACE ಕ್ರೆಡಿಟ್ ಕಾರ್ಡ್, SAMSUNG ಎಕ್ಸಿಸ್ ಬ್ಯಾಂಕ್ SIGNATURE ಕ್ರೆಡಿಟ್ ಕಾರ್ಡ್ ಮತ್ತು AIRTEL ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗೆ 500 ರೂ. ವರೆಗೆ; PRIDE PLATINUM ಕ್ರೆಡಿಟ್ ಕಾರ್ಡ್ ಮತ್ತು ಎಕ್ಸಿಸ್ ಬ್ಯಾಂಕ್ AURA ಕ್ರೆಡಿಟ್ ಕಾರ್ಡ್‌ಗೆ ಮಾತ್ರ 250 ರೂ. ವರೆಗೆ. MY CHOICE ಕ್ರೆಡಿಟ್ ಕಾರ್ಡ್, NEO ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ BUZZ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ VISTARA ಕ್ರೆಡಿಟ್ ಕಾರ್ಡ್ ಮತ್ತು ಎಕ್ಸಿಸ್ ಬ್ಯಾಂಕ್ VISTARA SIGNATURE ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ FREECHARGE ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ FREECHARGE PLUS ಕ್ರೆಡಿಟ್ ಕಾರ್ಡ್‌ಗೆ ಮರುಪಾವತಿ ಅನ್ವಯಿಸುವುದಿಲ್ಲ;<br>ವಹಿವಾಟಿನ ಮೊತ್ತದ 1% (ರೂ. 400ರಿಂದ ರೂ. 5,000ರ ನಡುವಿನ ಇಂಧನ ವಹಿವಾಟುಗಳಿಗೆ ಮರುಪಾವತಿಸಲಾಗುತ್ತದೆ. Samsung ಎಕ್ಸಿಸ್ ಬ್ಯಾಂಕ್ INFINITE ಕ್ರೆಡಿಟ್ ಕಾರ್ಡ್‌ಗಾಗಿ ಪ್ರತಿ ಸ್ಟೇಟ್‌ಮೆಂಟ್ ಸೈಕಲ್‌ಗೆ 500 ರೂ. ವರೆಗೆ ಗರಿಷ್ಠ ಪ್ರಯೋಜನಗಳು);<br>ವಹಿವಾಟಿನ ಮೊತ್ತದ 1% (ರೂ. 400 ರಿಂದ ರೂ. 5,000 ರ ನಡುವಿನ ಇಂಧನ ವಹಿವಾಟುಗಳಿಗೆ ಮರುಪಾವತಿಸಲಾಗುತ್ತದೆ. REWARDS ಕ್ರೆಡಿಟ್ ಕಾರ್ಡ್‌ಗಾಗಿ ಪ್ರತಿ ಸ್ಟೇಟ್‌ಮೆಂಟ್ ಸೈಕಲ್‌ಗೆ 400 ರೂ. ವರೆಗೆ ಗರಿಷ್ಠ ಪ್ರಯೋಜನಗಳು.<br><br>**ದಯವಿಟ್ಟು ಗಮನಿಸಿ-**<br>• ಇಂಧನ ವಹಿವಾಟುಗಳ ಮೇಲೆ, ಕಾರ್ಡ್ ನೀಡಿದ ಬ್ಯಾಂಕ್‌ನಿಂದ ಇಂಧನದ ಸರ್‌ಚಾರ್ಜ್ ಅನ್ನು ವಿಧಿಸಲಾಗುವುದಿಲ್ಲ<br>• ಕೆಲವು ಇಂಧನ ವಹಿವಾಟುಗಳಲ್ಲಿ, ಇಂಧನದ ಸರ್‌ಚಾರ್ಜ್ ಅನ್ನು 1% + GST ಬದಲಿಗೆ INR 10 + GST ಯಂತೆ ವಿಧಿಸಬಹುದು. |

| | |
|---|---|
| | ಗ್ರಾಹಕರಿಗೆ ಒದಗಿಸಲಾದ ಇಂಧನದ ಸರ್‌ಚಾರ್ಜ್ ಮನ್ನಾವು, ವಿಧಿಸಲಾದ ಸರ್‌ಚಾರ್ಜ್‌ಗೆ ಸಂಬಂಧಪಡದೆ, ಕ್ರೆಡಿಟ್ ಕಾರ್ಡ್‌ನಲ್ಲಿನ ಆಯಾ ಮೌಲ್ಯದ ಯೋಜನೆ/ವೈಶಿಷ್ಟ್ಯದ ಪ್ರಕಾರ ಇರುತ್ತದೆ.<br>• ಇಂಧನ ಸರ್‌ಚಾರ್ಜ್ ಮೇಲೆ ವಿಧಿಸಲಾದ ತೆರಿಗೆಗಳನ್ನು (ಯಾವುದಾದರೂ ಇದ್ದರೆ) ಮನ್ನಾ ಮಾಡಲಾಗುವುದಿಲ್ಲ ಮತ್ತು ಅದನ್ನು ಕಾರ್ಡುದಾರರು ಭರಿಸಬೇಕಾಗುತ್ತದೆ |
| ಎಡ್ಜ್ ರಿವಾರ್ಡ್ ಪಾಯಿಂಟ್‌ಗಳ ರಿಡೆಂಪ್ಶನ್ ಶುಲ್ಕ | 300ಕ್ಕಿಂತ ಕಡಿಮೆ ರಿವಾರ್ಡ್ ಪಾಯಿಂಟ್‌ಗಳನ್ನು ರಿಡೀಮ್ ಮಾಡಿಕೊಂಡಿದ್ದರೆ ಶೂನ್ಯ ಶುಲ್ಕ |
| | ರಿಡೀಮ್ ಮಾಡಿದ ರಿವಾರ್ಡ್ ಪಾಯಿಂಟ್‌ಗಳು 300 ಮತ್ತು 10,000ರ ನಡುವೆ ಇದ್ದರೆ 49 ರೂ. |
| | ರಿಡೀಮ್ ಮಾಡಿದ ರಿವಾರ್ಡ್ ಪಾಯಿಂಟ್‌ಗಳು 10,000ಕ್ಕಿಂತ ಹೆಚ್ಚಿದ್ದರೆ 99 ರೂ. |
| | SELECT ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ATLAS ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ SIGNATURE ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ INFINITE ಕ್ರೆಡಿಟ್ ಕಾರ್ಡ್, PRIVILEGE ಕ್ರೆಡಿಟ್ ಕಾರ್ಡ್, MAGNUS ಕ್ರೆಡಿಟ್ ಕಾರ್ಡ್, MAGNUS FOR BURGUNDY ಕ್ರೆಡಿಟ್ ಕಾರ್ಡ್, RESERVE ಕ್ರೆಡಿಟ್ ಕಾರ್ಡ್, BURGUNDY PRIVATE ಕ್ರೆಡಿಟ್ ಕಾರ್ಡ್, ಸ್ಯಾಮ್‌ಸಂಗ್ ಎಕ್ಸಿಸ್ ಬ್ಯಾಂಕ್ INFINITE ಕ್ರೆಡಿಟ್ ಕಾರ್ಡ್, REWARDS ಕ್ರೆಡಿಟ್ ಕಾರ್ಡ್, PRIORITY PLATINUM ಡೆಬಿಟ್ ಕಾರ್ಡ್, BURGUNDY ಡೆಬಿಟ್ ಕಾರ್ಡ್, BURGUNDY PRIVATE ಡೆಬಿಟ್ ಕಾರ್ಡ್, RUPAY PLATINUM NRO ಡೆಬಿಟ್ ಕಾರ್ಡ್, BURGUNDY NRO ಡೆಬಿಟ್ ಕಾರ್ಡ್ ಅಥವಾ BURGUNDY PRIVATE NRO ಹೊಂದಿರುವವರಿಗೆ ಮನ್ನಾ ಮಾಡಲಾಗುತ್ತದೆ |
| ವಿದೇಶಿ ಕರೆನ್ಸಿ<br>ವಹಿವಾಟು ಶುಲ್ಕ**** | MAGNUS ಕ್ರೆಡಿಟ್ ಕಾರ್ಡ್ ಮತ್ತು MAGNUS BURGUNDY ಕ್ರೆಡಿಟ್ ಕಾರ್ಡ್‌ಗಳಿಗೆ ವಹಿವಾಟಿನ ಮೌಲ್ಯದ 2%;<br>RESERVE ಕ್ರೆಡಿಟ್ ಕಾರ್ಡ್‌ಗಳಿಗೆ ವಹಿವಾಟಿನ ಮೌಲ್ಯದ 1.5%;<br>BURGUNDY PRIVATE ಕ್ರೆಡಿಟ್ ಕಾರ್ಡ್‌ಗೆ ಶೂನ್ಯ; |

| | |
|---|---|
| | ಎಲ್ಲ ಇತರ ಕಾರ್ಡ್‌ಗಳಿಗೆ ವಹಿವಾಟಿನ ಮೌಲ್ಯದ 3.50% |
| ಡೈನಾಮಿಕ್ ಕರೆನ್ಸಿ ಕನ್‌ವರ್ಷನ್ ಮಾರ್ಕ್‌ಅಪ್ ***** (2023ರ ಮಾರ್ಚ್ 5ನೇ ತಾರೀಕಿನಿಂದ ಅನ್ವಯವಾಗುತ್ತದೆ) | ಅಂತಾರಾಷ್ಟ್ರೀಯ ಸ್ಥಳದಲ್ಲಿ ಭಾರತೀಯ ಕರೆನ್ಸಿಯಲ್ಲಿ ನಡೆಸುವ ಪ್ರತಿ ಅಂತಾರಾಷ್ಟ್ರೀಯ ವಹಿವಾಟಿನ ಮೇಲೆ ಅಥವಾ ವಿದೇಶಿ ರಾಷ್ಟ್ರದಲ್ಲಿ ನೋಂದಾಯಿಸಿಕೊಂಡು ಭಾರತದಲ್ಲಿ ವ್ಯಾಪಾರ ನಡೆಸುತ್ತಿರುವ ವರ್ತಕರೊಂದಿಗೆ ಭಾರತೀಯ ಕರೆನ್ಸಿಯಲ್ಲಿ ನಡೆಸಿದ ಪ್ರತಿ ವಹಿವಾಟುಗಳಿಗೆ 1% ಜೊತೆಗೆ ತೆರಿಗೆ ಅನ್ವಯವಾಗುತ್ತದೆ.<br>BURGUNDY PRIVATE ಕ್ರೆಡಿಟ್ ಕಾರ್ಡ್‌ಗೆ ಶೂನ್ಯ; |
| ಬಾಡಿಗೆ ವಹಿವಾಟು ಶುಲ್ಕ****** (2023 ರ ಮಾರ್ಚ್ 5ನೇ ತಾರೀಕಿನಿಂದ ಅನ್ವಯವಾಗುತ್ತದೆ) | ಪ್ರತಿ ವಹಿವಾಟಿಗೆ INR 1,500 ಗಳ ಗರಿಷ್ಠ ಮಿತಿಯೊಂದಿಗೆ 1% ಶುಲ್ಕವು ಪ್ರತಿ ಬಾಡಿಗೆ ವಹಿವಾಟಿನ ಮೇಲೆ ಅನ್ವಯಿಸುತ್ತದೆ. ಭಾರತ ಸರ್ಕಾರವು ಸೂಚಿಸಿದಂತೆ ತೆರಿಗೆಗಳು ಅನ್ವಯವಾಗುತ್ತವೆ. |
| ವಹಿವಾಟುಗಳಿಗಾಗಿ ಮೊಬೈಲ್ ಸಂದೇಶಗಳು | ಮನ್ನಾ ಮಾಡಲಾಗಿದೆ |
| ಹಾಟ್ ಲಿಸ್ಟಿಂಗ್ ಶುಲ್ಕಗಳು | ಮನ್ನಾ ಮಾಡಲಾಗಿದೆ |
| ಶಿಲ್ಕು ಪರಿಶೀಲನೆ | ಮನ್ನಾ ಮಾಡಲಾಗಿದೆ |
| ರಿಪ್ಲೇಸ್‌ಮೆಂಟ್ ಶುಲ್ಕ | ಮನ್ನಾ ಮಾಡಲಾಗಿದೆ |

ಸೂಚನೆ: i) ಭಾರತ ಸರ್ಕಾರವು ಸೂಚಿಸಿದಂತೆ, ಎಲ್ಲ ಶುಲ್ಕಗಳು, ಬಡ್ಡಿ ಮತ್ತು ಇತರ ಶುಲ್ಕಗಳ ಮೇಲೆ GST ಅನ್ವಯಿಸುತ್ತದೆ ಮತ್ತು ಭಾರತ ಸರ್ಕಾರದ ಸಂಬಂಧಿತ ನಿಯಮಗಳ ಅನುಸಾರ ಬದಲಾವಣೆಗೆ ಒಳಪಟ್ಟಿರುತ್ತದೆ.
ii) ಗ್ರಾಹಕರಿಗೆ ಕನಿಷ್ಠ ಒಂದು ತಿಂಗಳ ಮೊದಲೇ ಸ್ಪಷ್ಟವಾದ ಸೂಚನೆ ನೀಡುವುದರೊಂದಿಗೆ, ಬ್ಯಾಂಕ್ ತಾನು ಸೂಕ್ತ ಎಂದು ಭಾವಿಸುವ ರೀತಿಯಲ್ಲಿ, ಕಾಲಕಾಲಕ್ಕೆ ಯಾವುದೇ ಚಾರ್ಜ್‌ಗಳು ಅಥವಾ ಶುಲ್ಕಗಳನ್ನು ಬದಲಾಯಿಸುವ ಅಥವಾ ಯಾವುದೇ ಹೊಸ ಚಾರ್ಜ್‌ಗಳು ಅಥವಾ ಶುಲ್ಕಗಳನ್ನು ಪರಿಚಯಿಸುವ ಹಕ್ಕನ್ನು ಉಳಿಸಿಕೊಂಡಿದೆ.

***ವಿಳಂಬ ಪಾವತಿ ಶುಲ್ಕ:** ಪಾವತಿಯ ಅಂತಿಮ ದಿನಾಂಕದೊಳಗೆ ಯಾವುದೇ ಪಾವತಿಯನ್ನು ಸ್ವೀಕರಿಸದಿದ್ದರೆ ಅಥವಾ ಕನಿಷ್ಠ ಬಾಕಿ ಮೊತ್ತಕ್ಕಿಂತ ಕಡಿಮೆ ಮೊತ್ತದ ಪಾವತಿಯನ್ನು ಸ್ವೀಕರಿಸಿದರೆ, ವಿಳಂಬ ಪಾವತಿ ಶುಲ್ಕವನ್ನು ಕಾರ್ಡುದಾರರಿಗೆ ವಿಧಿಸಲಾಗುತ್ತದೆ. ವಿಳಂಬ ಪಾವತಿ ಶುಲ್ಕವನ್ನು ತಪ್ಪಿಸಲು,

ಪಾವತಿಯ ಅಂತಿಮ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಖಾತೆಗೆ ಸಮರ್ಪಕ ಹಣವನ್ನು ಜಮಾ ಮಾಡಬೇಕಾಗುತ್ತದೆ.

**ಗಮನಿಸಿ:** ಜನವರಿ 20, 2023ರಿಂದ ಅನ್ವಯವಾಗುವಂತೆ ವಿಳಂಬ ಪಾವತಿ ಶುಲ್ಕವನ್ನು ಬಾಕಿ ಇರುವ ಮೊತ್ತಕ್ಕೆ ಮಾತ್ರ ವಿಧಿಸಲಾಗುತ್ತದೆ (ಅಂತಿಮ ದಿನಾಂಕದ ಮೊದಲು ಸ್ವೀಕರಿಸಿದ ಯಾವುದೇ ಪಾವತಿಗಳನ್ನು ಕಳೆದು) ಮತ್ತು ಒಟ್ಟು ಮೊತ್ತದ ಮೇಲೆ ವಿಧಿಸಲಾಗುವುದಿಲ್ಲ.

****ನಗದು ಹಿಂಪಡೆಯುವಿಕೆ ಶುಲ್ಕ:** ATM(ಗಳು)ನಲ್ಲಿ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನ ಹೊಂದಾಣಿಕೆಗೆ ಅನುಗುಣವಾಗಿ, ಕ್ರೆಡಿಟ್ ಕಾರ್ಡ್ ಅರ್ಜಿಯ ಸಮಯದಲ್ಲಿ ಆಯ್ಕೆ ಮಾಡಿದ ಅವರ ಬಳಕೆಯ ಆದ್ಯತೆಯನ್ನು ಅವಲಂಬಿಸಿ, ಭಾರತದಲ್ಲಿನ ಅಥವಾ ಸಾಗರೋತ್ತರ ATM ಗಳಿಂದ ಹಣವನ್ನು ಹಿಂಪಡೆಯಲು ಕಾರ್ಡುದಾರರು ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಳಸಬಹುದು. ಮೇಲೆ ತಿಳಿಸಿದ ಶುಲ್ಕಗಳ ಪ್ರಕಾರ ಅಂತಹ ಹಿಂಪಡೆಯುವಿಕೆಗಳ ಮೇಲೆ ವಹಿವಾಟು ಶುಲ್ಕವನ್ನು ವಿಧಿಸಲಾಗುತ್ತದೆ ಮತ್ತು ಮುಂದಿನ ಸ್ಟೇಟ್‌ಮೆಂಟ್‌ನಲ್ಲಿ ಕಾರ್ಡುದಾರರಿಗೆ ಬಿಲ್ ಮಾಡಲಾಗುತ್ತದೆ. ಈ ಶುಲ್ಕಗಳು ಕೇವಲ ಬ್ಯಾಂಕ್ ಶುಲ್ಕಗಳಾಗಿರುತ್ತವೆ. ಕೆಲವು ATMಗಳು ನಗದು ಹಿಂಪಡೆತದ ಶುಲ್ಕವನ್ನು ವಿಧಿಸುತ್ತವೆ, ಅದು ಬ್ಯಾಂಕ್‌ಗೆ ಸಂಬಂಧಿಸಿರುವುದಿಲ್ಲ.

***** ಮಿತಿ-ಮೀರಿದ ಶುಲ್ಕ:** ಕಾರ್ಡುದಾರರು ಪ್ರಯತ್ನಿಸಿದ, ಕ್ರೆಡಿಟ್ ಮಿತಿಯನ್ನು ಮೀರುವಂತಹ ಕ್ರೆಡಿಟ್ ಮೊತ್ತದ ಕೆಲವು ವಹಿವಾಟುಗಳನ್ನು ಬ್ಯಾಂಕ್ ಅನುಮೋದಿಸಬಹುದು, ಇದಕ್ಕಾಗಿ ಮಿತಿಯನ್ನು ಮೀರಿದ ಮೊತ್ತದ ಮೇಲೆ 2.5% ರಷ್ಟು ಮಿತಿ-ಮೀರಿದ ಶುಲ್ಕವನ್ನು (ಕನಿಷ್ಠ 500 ರೂ.ಗೆ ಒಳಪಟ್ಟು) ವಿಧಿಸಲಾಗುತ್ತದೆ. ಶುಲ್ಕಗಳು ಅಥವಾ ಬಡ್ಡಿ ವಿಧಿಸುವಿಕೆಯ ಕಾರಣದಿಂದಾಗಿ ಮಿತಿ-ಮೀರಿದ ಸ್ಥಿತಿಯು ಸಂಭವಿಸಬಹುದು. ಮಿತಿ-ಮೀರಿದ ಸೌಲಭ್ಯಕ್ಕೆ ಒಪ್ಪುವ ಕಾರ್ಡುದಾರರಿಂದ ಬ್ಯಾಂಕ್ ಸ್ಪಷ್ಟ ಒಪ್ಪಿಗೆಯನ್ನು ತೆಗೆದುಕೊಳ್ಳುತ್ತದೆ. ಆದರೂ, ಕಾರ್ಡುದಾರರಿಂದ ಸ್ಪಷ್ಟವಾದ ಒಪ್ಪಿಗೆಯನ್ನು ಸ್ವೀಕರಿಸಿಲ್ಲದಿದ್ದರೂ, ಬಳಕೆಯು ಮಂಜೂರಾದ ಕ್ರೆಡಿಟ್ ಮಿತಿಯನ್ನು ಮೀರಬಹುದಾದ ಸನ್ನಿವೇಶಗಳು ಸಂಭವಿಸಬಹುದು.

******ವಿದೇಶಿ ಕರೆನ್ಸಿಯಲ್ಲಿನ ಶುಲ್ಕಗಳು:** ಭಾರತೀಯ ಕರೆನ್ಸಿಯನ್ನು ಹೊರತುಪಡಿಸಿ ಬೇರೆ ಕರೆನ್ಸಿಯಲ್ಲಿ ವಹಿವಾಟನ್ನು ನಡೆಸಿದರೆ, ಆ ವಹಿವಾಟನ್ನು ಭಾರತೀಯ ರೂಪಾಯಿಗೆ ಪರಿವರ್ತಿಸಲಾಗುತ್ತದೆ. ವಹಿವಾಟು ನಡೆಸಿದ ದಿನಾಂಕವು ಯಾವುದಾಗಿದ್ದರೂ, ಪರಿವರ್ತನೆಯು ಎಕ್ಸಿಸ್ ಬ್ಯಾಂಕ್‌ನೊಂದಿಗೆ ವಹಿವಾಟು ಇತ್ಯರ್ಥವಾದ ದಿನಾಂಕದಂದು ನಡೆಯುತ್ತದೆ. ವಹಿವಾಟು US ಡಾಲರ್‌ಗಳಲ್ಲಿ ಇಲ್ಲದಿದ್ದರೆ, ವಿಧಿಸಲಾದ ಮೊತ್ತವನ್ನು US ಡಾಲರ್‌ಗಳಿಗೆ ಪರಿವರ್ತಿಸಿ, ನಂತರ US ಡಾಲರ್ ಮೊತ್ತವನ್ನು ಭಾರತೀಯ ರೂಪಾಯಿಗಳಿಗೆ ಪರಿವರ್ತಿಸುವ ಮೂಲಕ US ಡಾಲರ್‌ಗಳನ್ನು ಬಳಸಿಕೊಂಡು ಪರಿವರ್ತನೆ ಮಾಡಲಾಗುತ್ತದೆ. ಅನ್ವಯವಾಗುವ ಕಾನೂನಿನ ಪ್ರಕಾರ ನಿರ್ದಿಷ್ಟ ದರದ ಅಗತ್ಯವಿಲ್ಲದಿದ್ದರೆ, US ಡಾಲರ್‌ನಿಂದ ಭಾರತೀಯ ರೂಪಾಯಿಗಳಿಗೆ ಪರಿವರ್ತನೆ ದರವು ಸಂದರ್ಭಾನುಸಾರ, ಇತ್ಯರ್ಥದ ದಿನಾಂಕದಂದು, VISA / ಮಾಸ್ಟರ್‌ಕಾರ್ಡ್ ಒದಗಿಸಿದ ದರಗಳಲ್ಲಿದ್ದು, ಕರೆನ್ಸಿ ಪರಿವರ್ತನೆಯ ಅಂಶದ ಮೌಲ್ಯಮಾಪನದ (ಪ್ರಸ್ತುತ 3.50%) ಮುಖಾಂತರ ಅಂತಹ ವಹಿವಾಟುಗಳ ಮೇಲೆ ದರವನ್ನು ಹೆಚ್ಚಿಸಬಹುದು.

ಗ್ರಾಹಕರು ನಡೆಸಿದ ಅಂತಹ ವಿದೇಶಿ ವಹಿವಾಟಿನ ಮರುಪಾವತಿಯು ಹೆಚ್ಚುವರಿ 3.5% ಶುಲ್ಕವನ್ನೂ ಹೊಂದಿರುತ್ತದೆ.

*******ಡೈನಾಮಿಕ್ ಕರೆನ್ಸಿ ಕನ್‌ವರ್ಷನ್ ಮಾರ್ಕ್-ಅಪ್:** DCC ಯ ಮುಖಾಂತರ, ಗ್ರಾಹಕರು ಭಾರತೀಯ ಕರೆನ್ಸಿಯನ್ನು ಬಳಸಿಕೊಂಡು ಅಂತಾರಾಷ್ಟ್ರೀಯ ವಹಿವಾಟನ್ನು ನಡೆಸಬಹುದು. ಆದರೂ, ಸಾಗರೋತ್ತರ ವ್ಯಾಪಾರಿಗೆ INR ನಲ್ಲಿ ಪಾವತಿ ಮಾಡುವಾಗ, ವಹಿವಾಟಿನ ಮೊತ್ತದ ಮೇಲೆ 1% DCC ಮಾರ್ಕ್-ಅಪ್ ಶುಲ್ಕ ಮತ್ತು ತೆರಿಗೆಗಳನ್ನು ವಿಧಿಸಲಾಗುತ್ತದೆ. POS ಮೂಲಕ ಅಥವಾ ಆನ್‌ಲೈನ್‌ನಲ್ಲಿ, ಅಂತಾರಾಷ್ಟ್ರೀಯ ಸ್ಥಳದಲ್ಲಿ ಅಥವಾ ವಿದೇಶಿ ರಾಷ್ಟ್ರದಲ್ಲಿ ನೋಂದಾಯಿಸಿ ಭಾರತದಲ್ಲಿರುವ ವ್ಯಾಪಾರಿಯೊಂದಿಗೆ ಮಾಡಿದ ಅಂತಾರಾಷ್ಟ್ರೀಯ ವಹಿವಾಟುಗಳಿಗೆ DCC ಅನ್ವಯಿಸುತ್ತದೆ. ಉದಾಹರಣೆ - ನೀವು ಅಂತರಾಷ್ಟ್ರೀಯ ದೇಶದ ಅಂಗಡಿಯಲ್ಲಿ ಖರೀದಿ ಮಾಡಿದರೆ ಮತ್ತು POS ಯಂತ್ರದಲ್ಲಿ ನಿಮ್ಮ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಳಸಿ INR ನಲ್ಲಿ ಪಾವತಿ ಮಾಡಿದರೆ, ವಹಿವಾಟಿನ ಮೊತ್ತದ ಮೇಲೆ 1% DCC ಮಾರ್ಕ್-ಅಪ್ ಶುಲ್ಕದ ಜೊತೆಗೆ ತೆರಿಗೆಗಳನ್ನು ವಿಧಿಸಲಾಗುತ್ತದೆ. ಅದೇ ರೀತಿ, ನೀವು ವಿದೇಶದಲ್ಲಿ ನೋಂದಾಯಿತ ವ್ಯಾಪಾರಿಯಿಂದ ಭಾರತದಲ್ಲಿ ಖರೀದಿಯನ್ನು ಮಾಡಿದರೆ ಮತ್ತು ನಿಮ್ಮ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಳಸಿ INR ನಲ್ಲಿ ಪಾವತಿ ಮಾಡಿದರೆ, ವಹಿವಾಟಿನ ಮೊತ್ತದ ಮೇಲೆ 1% DCC ಮಾರ್ಕ್-ಅಪ್ ಶುಲ್ಕದ ಜೊತೆಗೆ ತೆರಿಗೆಗಳನ್ನು ವಿಧಿಸಲಾಗುತ್ತದೆ.

********ಬಾಡಿಗೆ ವಹಿವಾಟು ಶುಲ್ಕ:** MCC 6513 ಮೂಲಕ ಗುರುತಿಸಲಾದ ಪ್ರತಿ ಬಾಡಿಗೆ ಪಾವತಿಗೆ, ವಹಿವಾಟಿನ ಮೊತ್ತದ ಮೇಲೆ ಪ್ರತಿ ವಹಿವಾಟಿಗೆ ಗರಿಷ್ಠ INR 1500 ಕ್ಕೆ ಮಿತಿಗೊಳಿಸಿದಂತೆ 1% ಬಾಡಿಗೆ ಸರ್‌ಚಾರ್ಜ್ ಶುಲ್ಕವನ್ನು ವಿಧಿಸಲಾಗುತ್ತದೆ. ಭಾರತ ಸರ್ಕಾರವು ಸೂಚಿಸಿದಂತೆ ತೆರಿಗೆಗಳು ಅನ್ವಯವಾಗುತ್ತವೆ. ಉದಾಹರಣೆಗೆ - ನಿಮ್ಮ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ಬಳಸಿಕೊಂಡು ಥರ್ಡ್ ಪಾರ್ಟಿ ರೆಂಟ್ ಪೇಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ನೀವು INR 20,000 ಪಾವತಿಸಿದರೆ, ವಹಿವಾಟಿನ ಮೊತ್ತದ 1% ಅಂದರೆ INR 200 ಮತ್ತು ಅದರ ಜೊತೆಗೆ ಸರ್‌ಚಾರ್ಜ್ ಆಗಿ ತೆರಿಗೆಗಳನ್ನು ವಿಧಿಸಲಾಗುತ್ತದೆ. ಒಂದು ವೇಳೆ, ನಿಮ್ಮ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ಬಳಸಿಕೊಂಡು ಥರ್ಡ್ ಪಾರ್ಟಿ ರೆಂಟ್ ಪೇಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ನೀವು INR 2,00,000 ಪಾವತಿಸಿದರೆ, ಬಾಡಿಗೆ ಸರ್‌ಚಾರ್ಜ್ ಶುಲ್ಕವನ್ನು INR 1,50

**A) ಬಡ್ಡಿ ಲೆಕ್ಕಾಚಾರದ ಉದಾಹರಣೆ:**

ನೀವು ಹಿಂದಿನ ಎಲ್ಲ ಬಾಕಿಗಳನ್ನು ಸಂಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಯಾವುದೇ ಬಾಕಿ ಮೊತ್ತವನ್ನು ಹೊಂದಿಲ್ಲ ಮತ್ತು ನಿಮ್ಮ ಮಾಸಿಕ ಸ್ಟೇಟ್‌ಮೆಂಟ್ ಅನ್ನು ಪ್ರತಿ ತಿಂಗಳ 20ನೇ ತಾರೀಕಿನಂದು ಸಿದ್ಧಪಡಿಸಲಾಗುತ್ತದೆ ಎಂದು ಊಹಿಸಿಕೊಳ್ಳಿ.
ನೀವು ಸೆಪ್ಟೆಂಬರ್ 12ರಂದು 25000 ರೂ.ಗಳ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಿದ್ದೀರಿ ಮತ್ತು ಸೆಪ್ಟೆಂಬರ್ 15ರಂದು ATM ನಿಂದ 5,000 ರೂ. ನಗದನ್ನು ಹಿಂಪಡೆದಿದ್ದೀರಿ.

| ದಿನಾಂಕ | ವಹಿವಾಟಿನ ಪ್ರಕಾರ | ಮೊತ್ತ | ವಿವರಣೆ |
|---|---|---|---|
| ಸೆಪ್ಟೆಂಬರ್ 12ನೇ ತಾರೀಕು | ಖರೀದಿ | ರೂ. 25,000 Dr | ಕ್ರೆಡಿಟ್ ಕಾರ್ಡ್‌ನಲ್ಲಿ ಮಾಡಿದ ಖರೀದಿ |
| ಸೆಪ್ಟೆಂಬರ್ 15ನೇ ತಾರೀಕು | ಹಣ ಹಿಂಪಡೆತ | ರೂ. 5,000 Dr | ಕ್ರೆಡಿಟ್ ಕಾರ್ಡ್‌ನಲ್ಲಿ ಹಿಂಪಡೆದ ನಗದು |
| ಸೆಪ್ಟೆಂಬರ್ 15ನೇ ತಾರೀಕು | ನಗದು ವಹಿವಾಟಿನ ಶುಲ್ಕ | ರೂ. 500 Dr | 5000*2.5% = ರೂ. 125 ಕಡಿಮೆ ಅಂದರೆ ರೂ. 500 |
| ಸೆಪ್ಟೆಂಬರ್ 20ನೇ ತಾರೀಕು | ಬಡ್ಡಿ | ರೂ. 35.50 Dr | ನಗದು ಹಿಂಪಡೆದಿದ್ದು ರೂ. 5,000* 6 ದಿನಗಳು* 3.6%*12 ತಿಂಗಳು/365 ದಿನಗಳು = ರೂ. 35.50 |
| ಸೆಪ್ಟೆಂಬರ್ 20 ನೇ ತಾರೀಕು | ಬಡ್ಡಿಯ ಮೇಲಿನ GST | ರೂ. 6.39 Dr | 35.50*18% = ರೂ. 6.39 |
| ಸೆಪ್ಟೆಂಬರ್ 20 ನೇ ತಾರೀಕು | ಶುಲ್ಕದ ಮೇಲಿನ GST | ರೂ. 90.00 Dr | 500*18% = ರೂ.90 |
| ಅಂತ್ಯದ ಶಿಲ್ಕು | | ರೂ. 30,631.89 Dr | ಒಟ್ಟು ಬಾಕಿಯಿರುವ ಪಾವತಿ |

ನಿಮ್ಮ ಸೆಪ್ಟೆಂಬರ್ 20ನೇ ತಾರೀಕಿನ ಸ್ಟೇಟ್‌ಮೆಂಟ್‌ಗೆ ಪಾವತಿ ಮಾಡಲು ಅಂತಿಮ ದಿನಾಂಕ ಅಕ್ಟೋಬರ್ 10 ಆಗಿದೆ. ನೀವು ಅಕ್ಟೋಬರ್ 10ರಂದು 5000 ರೂ. ಪಾವತಿಸಿದರೆ ಮತ್ತು ಅಕ್ಟೋಬರ್ 11ರಂದು 10,000 ರೂ. ಹೊಸ ಖರೀದಿಯನ್ನು ಮಾಡಿದರೆ, ಅಕ್ಟೋಬರ್ 20ರಂದು ಸಿದ್ಧಪಡಿಸಲಾದ ನಿಮ್ಮ ಮಾಸಿಕ ಸ್ಟೇಟ್‌ಮೆಂಟ್ ಈ ಕೆಳಗಿನ ನಮೂದುಗಳನ್ನು ಹೊಂದಿರುತ್ತದೆ:

| ದಿನಾಂಕ | ವಹಿವಾಟಿನ ಪ್ರಕಾರ | ಮೊತ್ತ | ವಿವರಣೆ |
|---|---|---|---|
| ಆರಂಭಿಕ ಶಿಲ್ಕು | | ರೂ. 30,631.89 Dr | ಹಿಂದಿನ ಸ್ಟೇಟ್‌ಮೆಂಟ್‌ನಿಂದ ಶಿಲ್ಕನ್ನು ಮುಂದಕ್ಕೆ ತೆಗೆದುಕೊಳ್ಳಲಾಗಿದೆ |
| ಅಕ್ಟೋಬರ್ 10ನೇ ತಾರೀಕು | ಪಾವತಿ | ರೂ. 5,000 Cr | ಹಿಂದಿನ ಸ್ಟೇಟ್‌ಮೆಂಟ್‌ನ ಬಾಕಿಗಳಿಗೆ ಪಾವತಿ |
| ಅಕ್ಟೋಬರ್ 11ನೇ ತಾರೀಕು | ಖರೀದಿಗಳು | ರೂ. 10,000 Dr | ಕ್ರೆಡಿಟ್ ಕಾರ್ಡ್‌ನಲ್ಲಿ ಮಾಡಿದ ಖರೀದಿಗಳು |

| | | | |
|---|---|---|---|
| ಅಕ್ಟೋಬರ್ 20ನೇ ತಾರೀಕು | ಬಡ್ಡಿ | ರೂ. 1421.57 Dr | ಕೆಳಗೆ ನೀಡಲಾದ 1421.57 ರೂ.ಗಳ ವಿಭಜನೆ |

ಬ್ಯಾಂಕ್ ವಿಧಿಸುವ ಶುಲ್ಕಗಳು ಮತ್ತು ಚಾರ್ಜ್‌ಗಳು ಬಡ್ಡಿ ಲೆಕ್ಕಾಚಾರದಲ್ಲಿ ಒಳಗೊಂಡಿಲ್ಲ. ಆದ್ದರಿಂದ, ನಗದು ವಹಿವಾಟು ಶುಲ್ಕದ ಮೇಲೆ ಮತ್ತು ಈ ಶುಲ್ಕದ ಮೇಲಿನ GST ಮೇಲೆ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

a) ಸೆಪ್ಟೆಂಬರ್ 12ರಿಂದ ಅಕ್ಟೋಬರ್ 9ರವರೆಗೆ (28 ದಿನಗಳು) ಪ್ರತಿ ತಿಂಗಳಿಗೆ @ 3.6% ನಂತೆ 25000 ರೂ. ಮೇಲೆ ಬಡ್ಡಿ [ರೂ. 25,000 x 3.6% x 28 ದಿನಗಳು' x 12 ತಿಂಗಳು / 365 ದಿನಗಳು = ರೂ. 828.49].

b) ಅಕ್ಟೋಬರ್ 10ರಿಂದ ಅಕ್ಟೋಬರ್ 20ರವರೆಗೆ (11 ದಿನಗಳು) ಪ್ರತಿ ತಿಂಗಳಿಗೆ @ 3.6% ನಂತೆ 20000 ರೂ. ಮೇಲೆ ಬಡ್ಡಿ [ರೂ. 20,000 x 3.6% x 11 ದಿನಗಳು x 12 ತಿಂಗಳು / 365 ದಿನಗಳು = ರೂ. 260.38].

c) ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 20 ರವರೆಗೆ (36 ದಿನಗಳು) ಪ್ರತಿ ತಿಂಗಳಿಗೆ @ 3.6% ನಂತೆ 5000 ರೂ. ಮೇಲೆ ಬಡ್ಡಿ [5000 x 3.6% x 36 ದಿನಗಳು' x 12 ತಿಂಗಳು / 365 ದಿನಗಳು = ರೂ. 213.04].

d) ಅಕ್ಟೋಬರ್ 11ರಿಂದ ಅಕ್ಟೋಬರ್ 20ರವರೆಗೆ (10 ದಿನಗಳು) ಪ್ರತಿ ತಿಂಗಳಿಗೆ @ 3.6% ದಂತೆ 10,000 ರೂ. ಮೇಲೆ ಬಡ್ಡಿ [ರೂ. 10,000 x 3.6% x 10 ದಿನಗಳು' x 12 ತಿಂಗಳು / 365 ದಿನಗಳು = 118.36].

e) ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 20ರವರೆಗೆ (31 ದಿನಗಳು) ಪ್ರತಿ ತಿಂಗಳಿಗೆ @ 3.6% ರಂತೆ 35.50 ರೂ. (ಬಡ್ಡಿ + ಹಿಂದಿನ ಸ್ಟೇಟ್‌ಮೆಂಟ್‌ನಲ್ಲಿ ವಿಧಿಸಲಾದ ತೆರಿಗೆ) ಮೇಲಿನ ಬಡ್ಡಿ [ರೂ. 35.50 x 3.6% x 31 ದಿನಗಳು x 12 ತಿಂಗಳು / 365 ದಿನಗಳು = ರೂ.1.30].

| | | | |
|---|---|---|---|
| ಅಕ್ಟೋಬರ್ 20ನೇ ತಾರೀಕು | GST | ರೂ. 255.88 Dr | ರೂ. 1,421.57*18% = ರೂ. 255.88 |
| ಮುಕ್ತಾಯದ ಶಿಲ್ಕು | | **ರೂ**. 37,304.05 Dr | ಒಟ್ಟು ಬಾಕಿ ಮೊತ್ತ |

ಬಡ್ಡಿ ಲೆಕ್ಕಾಚಾರದ ವಿಧಾನದಲ್ಲಿ ಬದಲಾವಣೆ

01-04-2023ರಿಂದ ಅನ್ವಯವಾಗುವಂತೆ, ಬಡ್ಡಿ ಮೊತ್ತವನ್ನು ಲೆಕ್ಕಾಚಾರ ಮಾಡುವ ವಿಧಾನದಲ್ಲಿ ಬದಲಾವಣೆಯಾಗುತ್ತದೆ. ಗ್ರಾಹಕರು ರಿವಾಲ್ವಿಂಗ್ ಸೌಲಭ್ಯವನ್ನು (ರಿವಾಲ್ವಿಂಗ್ ಕ್ರೆಡಿಟ್ ಹೊಂದಿದ್ದು, ಹಿಂದಿನ ತಿಂಗಳಲ್ಲಿ ಬಾಕಿ ಇರುವ ಒಟ್ಟು ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ಪಾವತಿಸಿದವರು) ಬಳಸುವ ಸಮಯದಲ್ಲಿ ನಡೆಸಲಾದ ಎಲ್ಲ ವಹಿವಾಟುಗಳ ಮೇಲೆ ಬಡ್ಡಿಯನ್ನು ವಿಧಿಸಲಾಗುತ್ತದೆ.
ಅದನ್ನು ಅರ್ಥ ಮಾಡಿಕೊಳ್ಳಲು ಒಂದು ದೃಷ್ಟಾಂತವನ್ನು ಕೆಳಗೆ ನೀಡಲಾಗಿದೆ:

- ಸ್ಟೇಟ್‌ಮೆಂಟ್ ಸೈಕಲ್ – ಪ್ರತಿ ತಿಂಗಳ 16ರಿಂದ 15ನೇ ದಿನಾಂಕದ ವರೆಗೆ
- ಸ್ಟೇಟ್‌ಮೆಂಟ್ ಸಿದ್ಧಪಡಿಸುವ ದಿನಾಂಕ – ಪ್ರತಿ ತಿಂಗಳ 16 ನೇ ತಾರೀಕು

- ಪಾವತಿಯ ಅಂತಿಮ ದಿನಾಂಕ - ಪ್ರತಿ ತಿಂಗಳ 4ನೇ ತಾರೀಕು
- ಪಾವತಿಯ ಅಂತಿಮ ದಿನಾಂಕ (3 ಗ್ರೇಸ್ ದಿನಗಳನ್ನು ಒಳಗೊಂಡಂತೆ) - ಪ್ರತಿ ತಿಂಗಳ 7ನೇ ತಾರೀಕು
- ಬಡ್ಡಿ ದರ - ಪ್ರತಿ ತಿಂಗಳಿಗೆ 3.6%

ಸೈಕಲ್ 1: ಮೇ 16ರಿಂದ ಜೂನ್ 15 ರವರೆಗೆ

ಮೇ 20ರಂದು ಮಾಡಿದ ಖರೀದಿ: INR 10,000

ಸ್ಟೇಟ್‌ಮೆಂಟ್ ಸೈಕಲ್‌ನಲ್ಲಿ ಬೇರೆ ಯಾವುದೇ ಖರೀದಿಗಳಿಲ್ಲ

ಜೂನ್ 16ರಂದು INR 10,000 ಮೊತ್ತಕ್ಕೆ ಸ್ಟೇಟ್‌ಮೆಂಟ್ ಸಿದ್ಧಪಡಿಸಲಾಗಿದ್ದು, ಪಾವತಿಯ ಕೊನೆಯ ದಿನಾಂಕ ಜುಲೈ 4 ಆಗಿದೆ.

ಒಟ್ಟು ಬಾಕಿ ಮೊತ್ತ (TAD): INR 10,000

ಕನಿಷ್ಠ ಬಾಕಿ ಮೊತ್ತ (MAD): INR 200

ಸೈಕಲ್ 2: ಜೂನ್ 16ರಿಂದ ಜುಲೈ 15ರವರೆಗೆ

ಜೂನ್ 20ರಂದು ಮಾಡಲಾದ ಕನಿಷ್ಠ ಬಾಕಿ ಮೊತ್ತದ ಪಾವತಿ: INR 500

ಜೂನ್ 25ರಂದು ರೂ. 3,000 ಗಳ ಹೊಸ ವಹಿವಾಟನ್ನು ಮಾಡಲಾಗಿದೆ

ಜುಲೈ 16ರಂದು (ಸ್ಟೇಟ್‌ಮೆಂಟ್ ಸಿದ್ಧಪಡಿಸಿದ ದಿನಾಂಕ), ಈ ಕೆಳಗಿನ ಅಂಶಗಳನ್ನು ಒಳಗೊಂಡು ಬಡ್ಡಿಯನ್ನು ವಿಧಿಸಲಾಗುತ್ತದೆ:

1. ಮೇ 20ರಿಂದ ಜೂನ್ 20ರವರೆಗೆ INR 10,000 ಬಾಕಿಯ ಮೇಲಿನ ಬಡ್ಡಿ:

INR 10,000*30 ದಿನಗಳು*3.6%*12/365 = INR 355.07

2. ಜೂನ್ 21ರಿಂದ ಜುಲೈ 15ರವರೆಗೆ INR 9,800 ಬಾಕಿಯ ಮೇಲಿನ ಬಡ್ಡಿ:

INR 9,800*25 ದಿನಗಳು*3.6%*12/365 = INR 289.97

3. ಜೂನ್ 25ರಿಂದ ಜುಲೈ 15ರವರೆಗೆ INR 3,000 ಬಾಕಿಯ ಮೇಲಿನ ಬಡ್ಡಿ:

INR 3,000*21 ದಿನಗಳು*3.6%*12/365 = INR 74.56

4. ಒಟ್ಟು ಬಡ್ಡಿಯ ಮೇಲೆ 18% GST:

18% *(355.07+289.97+74.56) = INR 129.53

- ಒಟ್ಟು ಶುಲ್ಕಗಳು (355.07+289.97+74.56+129.53): INR 849.13
- ಜುಲೈ 16ರಂತೆ ಬಾಕಿ: 12800 + 849.13 = INR 13,649.13.
- 2ನೇ ಸೈಕಲ್‌ನ ಅಂತ್ಯದಲ್ಲಿ ಸ್ಟೇಟ್‌ಮೆಂಟ್ ಸಿದ್ಧಪಡಿಸಲಾಗಿದ್ದು, ಬಾಕಿ ಇರುವ ಒಟ್ಟು ಮೊತ್ತವು INR 13649.13 ಆಗಿರುತ್ತದೆ
- ಕನಿಷ್ಠ ಬಾಕಿ ಮೊತ್ತ = ಶುಲ್ಕಗಳು + ಬಾಕಿ ಉಳಿದಿರುವುದರ 2%:

12,800 ರಲ್ಲಿ 2% + 13,649.13 = INR 13905.13.

ಸೈಕಲ್ 3: ಜುಲೈ 16ರಿಂದ ಆಗಸ್ಟ್ 15ರವರೆಗೆ

ಜುಲೈ 20ರಂದು ಮಾಡಲಾದ ಒಟ್ಟು ಬಾಕಿ ಮೊತ್ತದ ಪಾವತಿ

INR 13,905.13 ಪಾವತಿಸಲಾಗಿದೆ. ಬಾಕಿ ಉಳಿದಿರುವ ಮೊತ್ತ ಶೂನ್ಯ.

ಸೈಕಲ್‌ನ ಅವಧಿಯಲ್ಲಿ ಯಾವುದೇ ಇತರ ಖರೀದಿಗಳಿಲ್ಲ.

ಆಗಸ್ಟ್ 16ರಂದು (ಸ್ಟೇಟ್‌ಮೆಂಟ್ ಸಿದ್ಧಪಡಿಸಿದ ದಿನಾಂಕದಂದು) ವಹಿವಾಟುಗಳು ಮತ್ತು ಪಾವತಿಯ ನಡುವಿನ ದಿನಾಂಕಗಳಲ್ಲಿನ ವ್ಯತ್ಯಾಸಕ್ಕಾಗಿ ಈ ಕೆಳಗಿನ ಬಡ್ಡಿ ಅಂಶಗಳನ್ನು ಸೇರಿಸಲಾಗುತ್ತದೆ.

1. ಜುಲೈ 16ರಿಂದ ಜುಲೈ 20ರವರೆಗಿನ INR 9,800 ಬಾಕಿಯ ಮೇಲಿನ ಬಡ್ಡಿ:

INR 9,800 * 5 ದಿನಗಳು * 3.6% * 12/365 = INR 56.21

2. ಒಟ್ಟು ಬಡ್ಡಿಯ ಮೇಲೆ 18% GST:

18% * 57.99 = INR 10.43

• ಒಟ್ಟು ಶುಲ್ಕಗಳು = (57.99 + 10.43) = INR 68.42

• INR 57.99 ಬಡ್ಡಿ ಮತ್ತು INR 10.43 GST ಯನ್ನು ಆಗಸ್ಟ್ 16ರಂದು ಸ್ಟೇಟ್‌ಮೆಂಟ್‌ಗೆ ಸೇರಿಸಲಾಗಿದೆ.

• ಪಾವತಿಯ ಅಂತಿಮ ದಿನಾಂಕದೊಳಗೆ INR 68.42 ಅನ್ನು ಪಾವತಿಸಿದ ಮೇಲೆ, ಹಿಂದಿನ ವಹಿವಾಟುಗಳಿಗೆ ಯಾವುದೇ ಹೆಚ್ಚಿನ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

ಕನಿಷ್ಠ ಬಾಕಿ ಮೊತ್ತದ (**MAD)** ಲೆಕ್ಕಾಚಾರದ ವಿಧಾನದಲ್ಲಿ ಬದಲಾವಣೆಗಳು

ಎಕ್ಸಿಸ್ ಬ್ಯಾಂಕ್‌ನ ಎಲ್ಲ ಕ್ರೆಡಿಟ್ ಕಾರ್ಡ್‌ಗಳ ಮೇಲೆ ನವೆಂಬರ್ 10, 2023ರಿಂದ ಅನ್ವಯವಾಗುವಂತೆ ಕನಿಷ್ಠ ಬಾಕಿ ಮೊತ್ತದ (MAD) ಲೆಕ್ಕಾಚಾರದ ವಿಧಾನವನ್ನು ಪರಿಷ್ಕರಿಸಲಾಗುತ್ತದೆ.

ಚಾಲ್ತಿಯಲ್ಲಿರುವ MAD ಲೆಕ್ಕಾಚಾರದ ವಿಧಾನ:

MAD = 5% (ಖರೀದಿಗಳು/ ನಗದು ಹಿಂಪಡೆತ) + 100% (ಬಡ್ಡಿ/ಹಣಕಾಸು ಶುಲ್ಕ, ಎಲ್ಲ ಶುಲ್ಕಗಳು, ಸಾಲಗಳು, ತೆರಿಗೆಗಳು)

ಪರಿಷ್ಕೃತ MAD ಲೆಕ್ಕಾಚಾರದ ವಿಧಾನ (ನವೆಂಬರ್ 10, 2023ರಿಂದ ಅನ್ವಯವಾಗುವಂತೆ):

MAD = 2% (ಖರೀದಿಗಳು/ ನಗದು ಹಿಂಪಡೆತ) + 100% (ಬಡ್ಡಿ/ಹಣಕಾಸು ಶುಲ್ಕ, ಎಲ್ಲ ಶುಲ್ಕಗಳು, ಸಾಲಗಳು, ತೆರಿಗೆಗಳು)

ಕನಿಷ್ಠ ಬಾಕಿ ಮೊತ್ತದ (MAD) ಲೆಕ್ಕಾಚಾರಕ್ಕಾಗಿ ದೃಷ್ಟಾಂತ:

ನೀವು ಹಿಂದಿನ ಎಲ್ಲ ಬಾಕಿಗಳನ್ನು ಸಂಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಯಾವುದೇ ಬಾಕಿ ಮೊತ್ತವಿಲ್ಲ ಮತ್ತು ನಿಮ್ಮ ಮಾಸಿಕ ಸ್ಟೇಟ್‌ಮೆಂಟ್ ಅನ್ನು ಪ್ರತಿ ತಿಂಗಳ 15 ನೇ ತಾರೀಖಿನಂದು ಸಿದ್ಧಪಡಿಸಲಾಗುತ್ತದೆ ಎಂದು ಊಹಿಸಿಕೊಳ್ಳಿ.

**ಹಿಂದಿನ MAD ಲೆಕ್ಕಾಚಾರದ ವಿಧಾನ:**

MAD = 5% (ಖರೀದಿಗಳು/ನಗದು ಹಿಂಪಡೆಯುವಿಕೆಗಳು) + 100% (ಬಡ್ಡಿ/ಹಣಕಾಸು ಶುಲ್ಕ, ಎಲ್ಲ ಶುಲ್ಕಗಳು, ಸಾಲಗಳು, ತೆರಿಗೆಗಳು)

**ಪರಿಷ್ಕೃತ MAD ಲೆಕ್ಕಾಚಾರದ ವಿಧಾನ (ನವೆಂಬರ್ 10, 2023ರಿಂದ ಅನ್ವಯವಾಗುತ್ತದೆ):**

MAD = 2% (ಖರೀದಿಗಳು/ನಗದು ಹಿಂಪಡೆಯುವಿಕೆಗಳು) + 100% (ಬಡ್ಡಿ/ಹಣಕಾಸು ಶುಲ್ಕ, ಎಲ್ಲ ಶುಲ್ಕಗಳು, ಸಾಲಗಳು, ತೆರಿಗೆಗಳು)

**ಕನಿಷ್ಠ ಬಾಕಿ ಮೊತ್ತದ (MAD) ಲೆಕ್ಕಾಚಾರಕ್ಕಾಗಿ ದೃಷ್ಟಾಂತ:**

ನೀವು ಹಿಂದಿನ ಎಲ್ಲ ಬಾಕಿಗಳನ್ನು ಸಂಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಯಾವುದೇ ಬಾಕಿ ಮೊತ್ತವಿಲ್ಲ ಹಾಗೂ ನಿಮ್ಮ ಮಾಸಿಕ ಸ್ಟೇಟ್‌ಮೆಂಟ್ ಅನ್ನು ಪ್ರತಿ ತಿಂಗಳ 15ನೇ ತಾರೀಕಿನಂದು ಸಿದ್ಧಪಡಿಸಲಾಗುತ್ತದೆ ಎಂದು ಊಹಿಸಿಕೊಳ್ಳಿ.

| | | | | MAD ಲೆಕ್ಕಾಚಾರದ ಹಿಂದಿನ ವಿಧಾನ | | MAD ಲೆಕ್ಕಾಚಾರದ ಪರಿಷ್ಕೃತ ವಿಧಾನ | |
|---|---|---|---|---|---|---|---|
| ಕ್ರ.ಸಂ. | ವಹಿವಾಟು ದಿನಾಂಕ | ಪ್ರಕಾರ | Cr/ Db | MAD ಕೊಡುಗೆ | ಮೊತ್ತ | MAD ಕೊಡುಗೆ | ಮೊತ್ತ |
| a | ಸೆಪ್ಟೆಂಬರ್ 25 | ಖರೀದಿ | Db | 5% | 5000 | 2% | 5000 |
| b | ಅಕ್ಟೋಬರ್ 1 | ಪ್ರವೇಶ ಶುಲ್ಕ | Db | 100% | 1000 | 100% | 1000 |
| c | ಅಕ್ಟೋಬರ್ 1 | ಪ್ರವೇಶ ಶುಲ್ಕದ ಮೇಲಿನ GST | Db | 100% | 180 | 100% | 180 |
| d | ಅಕ್ಟೋಬರ್ 1 | ಹಣ ಹಿಂಪಡೆಯುವಿಕೆ | Db | 5% | 2000 | 2% | 2000 |
| e | ಅಕ್ಟೋಬರ್ 1 | ಹಣ ಹಿಂಪಡೆಯುವಿಕೆ ಶುಲ್ಕ | Db | 100% | 100 | 100% | 100 |
| f | ಅಕ್ಟೋಬರ್ 1 | GST | Db | 100% | 18 | 100% | 18 |
| g | ಅಕ್ಟೋಬರ್ 15 | ಹಣ ಹಿಂಪಡೆಯುವಿಕೆ ಮೇಲಿನ ಬಡ್ಡಿ | Db | 100% | 35.5 | 100% | 35.5 |
| h | ಅಕ್ಟೋಬರ್ 15 | ಬಡ್ಡಿಯ ಮೇಲಿನ GST | Db | 100% | 6.4 | 100% | 6.4 |
| **ಒಟ್ಟು ಬಾಕಿ** | | | | | **8339.89** | | **8339.89** |
| **ಕನಿಷ್ಠ ಬಾಕಿ ಮೊತ್ತ (MAD)** | | | | | **1689.90** | | **1479.90** |

ಹಿಂದಿನ ವಿಧಾನದ ಆಧಾರದ ಮೇಲೆ, ಕನಿಷ್ಠ ಬಾಕಿ ಮೊತ್ತವನ್ನು (MAD) ಈ ಕೆಳಗಿನಂತೆ ಲೆಕ್ಕಹಾಕಲಾಗುತ್ತದೆ:

MAD = ಖರೀದಿ ಮತ್ತು ನಗದು ಹಿಂಪಡೆತದ 5% + ಸೇರುವ ಶುಲ್ಕ, ನಗದು ಹಿಂಪಡೆತದ ಶುಲ್ಕ, ನಗದು ಹಿಂಪಡೆತದ ಮೇಲಿನ ಬಡ್ಡಿ, GST ಮತ್ತು ಬಡ್ಡಿಯ ಮೇಲಿನ GST ಗಳ 100%

MAD = 5%*(5000+2000) + 100%*(1000+180+100+18+35.5+6.4) = 1689.90
ಕನಿಷ್ಠ ಬಾಕಿ ಮೊತ್ತ ರೂ. 1689.90 ಆಗುತ್ತದೆ

**ನವೆಂಬರ್ 10ರಿಂದ ಅನ್ವಯವಾಗುವಂತೆ ಪರಿಷ್ಕೃತ ಕನಿಷ್ಠ ಬಾಕಿ ಮೊತ್ತವನ್ನು (MAD) ಈ ಕೆಳಗಿನಂತೆ ಲೆಕ್ಕಹಾಕಲಾಗುತ್ತದೆ:**

MAD = ಖರೀದಿ ಮತ್ತು ನಗದು ಹಿಂಪಡೆಯುವಿಕೆಯ 2% + ಪ್ರವೇಶ ಶುಲ್ಕಗಳು, ನಗದು ಹಿಂಪಡೆಯುವಿಕೆ ಶುಲ್ಕ, ನಗದು ಹಿಂಪಡೆಯುವಿಕೆ ಮೇಲಿನ ಬಡ್ಡಿ, GST ಮತ್ತು ಬಡ್ಡಿಯ ಮೇಲಿನ GST ಗಳ 100%

MAD = 2%*(5000+2000) + 100%*(1000+180+100+18+35.5+6.4) = 1479.90

ಕನಿಷ್ಠ ಬಾಕಿ ಮೊತ್ತ ರೂ. 1479.90 ಆಗುತ್ತದೆ.

ನೀವು ₹ 5,000 ಖರ್ಚು ಮಾಡಿದರೆ ಮತ್ತು ಪ್ರತಿ ತಿಂಗಳು ಕನಿಷ್ಠ ಬಾಕಿ ಮೊತ್ತವನ್ನು ಮಾತ್ರ (ಕನಿಷ್ಠ ₹ 100ರ ಪಾವತಿಗೆ ಒಳಪಟ್ಟು) ಮರುಪಾವತಿಸಿದರೆ, ಒಟ್ಟು ಮೊತ್ತವನ್ನು ಮರುಪಾವತಿಸಲು ನಿಮಗೆ ~7 ವರ್ಷಗಳವರೆಗೆ ಸಮಯ ಬೇಕಾಗುತ್ತದೆ. ಆದ್ದರಿಂದ ನಿಮಗೆ ಹಣ ತುಂಬುವ ಅವಕಾಶ ಇದ್ದಾಗಲೆಲ್ಲ, ಸಂಪೂರ್ಣ ಬಾಕಿ ಮೊತ್ತವನ್ನು ಅಥವಾ ನಿಮ್ಮ ಕನಿಷ್ಠ ಬಾಕಿ ಮೊತ್ತಕ್ಕಿಂತ ಗಣನೀಯವಾದ ಹೆಚ್ಚಿನ ಮೊತ್ತವನ್ನು ಮರುಪಾವತಿಸಲು ನಾವು ಸೂಚಿಸುತ್ತೇವೆ.

**ನಿಯಮಗಳು ಮತ್ತು ಷರತ್ತುಗಳು - EMI/ಸಾಲದ ಅವಧಿಪೂರ್ವ ಮರುಪಾವತಿ**

ನವೆಂಬರ್ 10, 2023ರಿಂದ ಅನ್ವಯವಾಗುವಂತೆ, ಸಾಲ ಸೌಲಭ್ಯದ ಸಮಯದಲ್ಲಿ/ಸಾಲದ ಅವಧಿಯಲ್ಲಿ ಕಾರ್ಡುದಾರರು ಸಾಲ ಸೌಲಭ್ಯ/ಸಾಲವನ್ನು ಅವಧಿಗೆ ಮೊದಲೇ ಮರುಪಾವತಿ ಮಾಡಿದ್ದರೆ, ಕೊನೆಯ ಬಿಲ್ಲಿಂಗ್ ದಿನಾಂಕದಿಂದ ಸಾಲ ಸೌಲಭ್ಯ/ಸಾಲದ ಮುಕ್ತಾಯದ ದಿನಾಂಕದವರೆಗೆ ಬಾಕಿ ಇರುವ ಒಟ್ಟು ಮೊತ್ತವನ್ನು (ಅಸಲು ಬಾಕಿ, ಅವಧಿಪೂರ್ವ ಮರುಪಾವತಿ ಶುಲ್ಕ ಮತ್ತು ಮುಕ್ತಾಯದ ದಿನಾಂಕದವರೆಗೆ ಒಳಗೊಳ್ಳುವ ದಿನಗಳಿಗೆ ಸಾಲದ ಮೇಲಿನ ಬಡ್ಡಿ ಸೇರಿದಂತೆ) ಬ್ಯಾಂಕ್‌ಗೆ ಮರುಪಾವತಿಸಲು ಕಾರ್ಡುದಾರರು ಜವಾಬ್ದಾರರಾಗಿರುತ್ತಾರೆ. ಅಂತಹ ಸಂದರ್ಭದಲ್ಲಿ, ಬಡ್ಡಿ ವಿಧಿಸುವಿಕೆಗಾಗಿ ಕಾರ್ಡ್ ಸ್ಟೇಟ್‌ಮೆಂಟ್‌ನಲ್ಲಿ ಈ ಕೆಳಗಿನವುಗಳು ನಮೂದಾಗಿರುತ್ತವೆ:

· A = ಉಳಿದಿರುವ ಸಂಪೂರ್ಣ ಸಾಲದ ಅವಧಿಗೆ ಬಡ್ಡಿಯನ್ನು ಡೆಬಿಟ್ ಮಾಡಲಾಗುತ್ತದೆ (ಅಂದರೆ, ಕೊನೆಯ ಬಿಲ್ಲಿಂಗ್ ದಿನಾಂಕದಿಂದ ಸೌಲಭ್ಯದ ಅವಧಿ ಮುಗಿಯುವ ದಿನಾಂಕದವರೆಗೆ)

· B = ಅವಧಿಗೂ ಮೊದಲೇ ಸಾಲ ತೀರಿಸಿದ ಮೇಲೆ ಉಳಿದ ಅವಧಿಗೆ ಸಂಬಂಧಿಸಿದ ಬಡ್ಡಿಯನ್ನು (ಅಂದರೆ, ಅವಧಿಪೂರ್ವ ಮುಕ್ತಾಯದ ದಿನಾಂಕದಿಂದ ಸೌಲಭ್ಯದ ಅವಧಿಯ ಮುಕ್ತಾಯದ ದಿನಾಂಕದವರೆಗೆ) ಕಾರ್ಡ್ ಖಾತೆಗೆ ಜಮಾ ಮಾಡಲಾಗುತ್ತದೆ.

ಪರಿಣಾಮಕಾರಿಯಾಗಿ, ನಿವ್ವಳ ಬಡ್ಡಿಯನ್ನು ಅಂದರೆ, (A-B) ಅನ್ನು ಕೊನೆಯ ಬಿಲ್ಲಿಂಗ್ ದಿನಾಂಕದಿಂದ ಸಾಲದ ಅವಧಿಪೂರ್ವ ಮುಕ್ತಾಯದ ದಿನಾಂಕದವರೆಗೆ ಇರುವ ದಿನಗಳಿಗೆ ಗ್ರಾಹಕರಿಗೆ ಬಿಲ್ ಮಾಡಲಾಗುತ್ತದೆ.

**ದೃಷ್ಟಾಂತ:** ನೀವು ಹಿಂದಿನ ಎಲ್ಲ ಬಾಕಿಗಳನ್ನು ಸಂಪೂರ್ಣವಾಗಿ ಪಾವತಿಸಿದ್ದೀರಿ ಮತ್ತು ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ಯಾವುದೇ ಬಾಕಿಯನ್ನು ಹೊಂದಿಲ್ಲ ಮತ್ತು ನಿಮ್ಮ ಮಾಸಿಕ ಸ್ಟೇಟ್‌ಮೆಂಟ್ ಅನ್ನು ಪ್ರತಿ ತಿಂಗಳ 25ನೇ ತಾರೀಕಿನಂದು ಸಿದ್ಧಪಡಿಸಲಾಗುತ್ತದೆ ಎಂದು ಊಹಿಸಿಕೊಳ್ಳಿ. ನೀವು 3 ಮೇ'23ರಂದು 6 ತಿಂಗಳ ಅವಧಿಗೆ ROI 14% ರಂತೆ INR 5,000ದ ಬಾಕಿಯನ್ನು EMI ಆಗಿ (BoE) ತೆಗೆದುಕೊಂಡಿದ್ದೀರಿ. ಜುಲೈ'23ರವರೆಗೆ 2 EMI ಗಳನ್ನು ಪಾವತಿಸಿದ್ದೀರಿ ಮತ್ತು ನೀವು 17 ಜುಲೈ'23ರಂದು ಅವಧಿಪೂರ್ವ ಮುಕ್ತಾಯಕ್ಕೆ ವಿನಂತಿಸಿದ್ದೀರಿ.

| ದಿನಾಂಕ | ವಹಿವಾಟಿನ ಪ್ರಕಾರ | **ಮೊತ್ತ (ರೂ.)** | **ವಿವರಣೆ** |
|---|---|---|---|
| 3 ಮೇ'23 | ಪಡೆದುಕೊಂಡ BOE (EMI ನಲ್ಲಿರುವ ಬಾಕಿ) | Rs.5,000 | ಕ್ರೆಡಿಟ್ ಕಾರ್ಡ್‌ನಲ್ಲಿ ಪಡೆದುಕೊಂಡ BOE (EMI ನಲ್ಲಿರುವ ಬಾಕಿ) |
| 2 ಜೂನ್'23 | 1 ನೇ EMI ಮೊತ್ತ | Rs.867.69 Dr | ರೂ. 867.69 (ಅಸಲು= ರೂ. 809.36, ಬಡ್ಡಿ = ರೂ. 58.33) ಮೊತ್ತದ EMI ಅನ್ನು ಕಡಿತಗೊಳಿಸಲಾಗಿದೆ |
| 2 ಜೂನ್'23 | ಬಡ್ಡಿಯ ಮೇಲಿನ GST | Rs 10.50 Dr | ಬಡ್ಡಿಯ ಮೇಲೆ @18% GST 58.33*18% = ರೂ. 10.50 |
| 2 ಜುಲೈ'23 | 2 ನೇ EMI ಮೊತ್ತ | Rs.867.69 Dr | ರೂ. 867.69 (ಅಸಲು = ರೂ. 818.80, ಬಡ್ಡಿ = ರೂ. 48.89) ಮೊತ್ತದ EMI ಅನ್ನು ಕಡಿತಗೊಳಿಸಲಾಗಿದೆ |

| | | | |
|---|---|---|---|
| 2 ಜುಲೈ'23 | ಬಡ್ಡಿಯ ಮೇಲಿನ GST | Rs. 8.80 Dr | ಬಡ್ಡಿಯ ಮೇಲೆ @18% GST 48.89*18% = ರೂ. 8.80 |
| 17 ಜುಲೈ'23 | BOE ದ ಅವಧಿಪೂರ್ವ ಮುಕ್ತಾಯ<br># 3 ರಿಂದ 6 ನೇ EMI ಗಳಿಗೆ ಬಡ್ಡಿ ಡೆಬಿಟ್ | Rs.159.08 Dr | 17 ಜುಲೈ'23ರಂದು ಅವಧಿಪೂರ್ವ ಮರುಪಾವತಿಯ ವಿನಂತಿ. ಉಳಿದ ಅವಧಿಯ ಬಡ್ಡಿಯ ಡೆಬಿಟ್ (3 ಜುಲೈ'23ರಿಂದ 2 ನವೆಂಬರ್'23)<br>3371.84*14%*123 ದಿನಗಳು/365 ದಿನಗಳು=159.08<br>(ರೂ. 3371.84 ಬಾಕಿ ಉಳಿದಿರುವ ಅಸಲು ಆಗಿದೆ) |
| 17 ಜುಲೈ'23 | ಮೇಲೆ ತಿಳಿಸಿದ ಬಡ್ಡಿಯ ಮೇಲಿನ GST | Rs. 28.63 Dr | 159.08*18% = Rs. 28.63 |
| 17 ಜುಲೈ'23 | ಕಂತಿನ ಬಡ್ಡಿ ಹಿಂತಿರುಗಿಸುವಿಕೆ | Rs.140.97 Cr | ಬಳಕೆಯಾಗದ ಅವಧಿಯ ಬಡ್ಡಿಯ ಹಿಂತಿರುಗಿಸುವಿಕೆ (17 ಜುಲೈ'23ರಿಂದ 2 ನವೆಂಬರ್'23)<br>3371.84*14%*109 ದಿನಗಳು/365 ದಿನಗಳು= ರೂ. 140.97<br>(ರೂ. 3371.84 ಅಸಲು ಬಾಕಿ ಉಳಿದಿದೆ) |
| 17 ಜುಲೈ'23 | GST ಹಿಂತಿರುಗಿಸುವಿಕೆ | Rs.25.37 Cr | 140.97*18%= Rs. 25.37 |
| | ಪರಿಣಾಮಕಾರಿ ನಿವ್ವಳ ಬಡ್ಡಿ | Rs. 18.11 | ಕೊನೆಯ ಬಿಲ್ಲಿಂಗ್ ದಿನಾಂಕದಿಂದ ಸಾಲವನ್ನು ಮುಕ್ತಾಯ ಮಾಡುವ ದಿನಾಂಕದವರೆಗಿನ ಬಡ್ಡಿ |
| | ಪರಿಣಾಮಕಾರಿ ನಿವ್ವಳ GST | Rs.3.26 | ಮೇಲಿನ ಪರಿಣಾಮಕಾರಿ ನಿವ್ವಳ ಬಡ್ಡಿಯ ಮೇಲೆ GST |

ಮೇಲಿನ ಬದಲಾವಣೆಗಳು ಕ್ರೆಡಿಟ್ ಕಾರ್ಡ್‌ನಲ್ಲಿನ ತ್ವರಿತ ಸಾಲ, ಬಾಕಿಯನ್ನು EMI ಗೆ ಪರಿವರ್ತಿಸುವುದು, ವ್ಯಾಪಾರ ಸ್ಥಳದಲ್ಲಿನ ಖರೀದಿಗಳ ವಹಿವಾಟನ್ನು EMI ಗೆ ಪರಿವರ್ತಿಸುವುದು (ಮರ್ಚೆಂಟ್ EMI) ಅಥವಾ ಪೋಸ್ಟ್ ಫ್ಯಾಕ್ಟೋ (ವಹಿವಾಟಿನ EMI) ಗಳಿಗೆ ಎಲ್ಲ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳ ಮೇಲೆ ಅನ್ವಯಿಸುತ್ತದೆ. ಸಾಲದ ಅವಧಿಪೂರ್ವ ಮುಕ್ತಾಯಕ್ಕೆ ಸಂಬಂಧಿಸಿದಂತೆ ಎಲ್ಲ ಇತರ ಶುಲ್ಕಗಳನ್ನು ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಷರತ್ತುಗಳ ಪ್ರಕಾರವೇ ವಿಧಿಸಲಾಗುತ್ತವೆ.

ದಯವಿಟ್ಟು ಕೆಳಗಿನ ವಿವರವಾದ ನಿಯಮಗಳು ಮತ್ತು ಷರತ್ತುಗಳನ್ನು ನೋಡಿ:

- ಕ್ರೆಡಿಟ್ ಕಾರ್ಡ್‌ನಲ್ಲಿರುವ ಸಾಲ - https://www.axisbank.com/retail/cards/credit-card/useful-links/card-services

- ಬಾಕಿಯನ್ನು EMI ಗೆ ಪರಿವರ್ತಿಸುವುದು - https://www.axisbank.com/retail/cards/credit-card/useful-links/card-services
- ವಹಿವಾಟನ್ನು EMI ಗೆ ಪರಿವರ್ತಿಸುವುದು - https://www.axisbank.com/retail/cards/credit-card/useful-links/card-services
- ಮರ್ಚೆಂಟ್ EMI (MEMI) - https://www.axisbank.com/retail/cards/credit-card/useful-links/card-services

**B) ಕ್ರೆಡಿಟ್ ಮತ್ತು ನಗದು ಹಿಂಪಡೆತ / ಮುಂಗಡ ಶುಲ್ಕಗಳು**

- **ಕ್ರೆಡಿಟ್ ಮಿತಿ:** ಇದು ಕಾರ್ಡುದಾರರಿಗೆ ನಿಗದಿಪಡಿಸಲಾದ ಮಿತಿಯಾಗಿದೆ. ಎಲ್ಲ ವಹಿವಾಟುಗಳು, ಶುಲ್ಕಗಳು ಮತ್ತು ವೆಚ್ಚಗಳು ಸೇರಿದಂತೆ ಒಟ್ಟು ಬಾಕಿಯು ಈ ಮಿತಿಯನ್ನು ಮೀರಬಾರದು.

- **ನಗದು ಮಿತಿ:** ಇದು ಕಾರ್ಡುದಾರರಿಗೆ ನಿಗದಿಪಡಿಸಲಾದ ನಗದು ಮುಂಗಡ ಮಿತಿಯಾಗಿದೆ. ಈ ಮಿತಿಯು ಕ್ರೆಡಿಟ್ ಮಿತಿಗಿಂತ ಕಡಿಮೆಯಿರುತ್ತದೆ ಮತ್ತು ಒಟ್ಟಾರೆ ಕ್ರೆಡಿಟ್ ಮಿತಿಯ ಉಪವಿಭಾಗವಾಗವಾಗಿರುತ್ತದೆ.

  ATMಗಳಿಂದ ಹಿಂಪಡೆಯಲಾದ ನಗದಿನ ಮೇಲೆ ವಹಿವಾಟು ಶುಲ್ಕವನ್ನು ವಿಧಿಸಲಾಗುತ್ತದೆ. ಅಲ್ಲದೆ, ನಗದು ವಹಿವಾಟುಗಳಿಗೆ ಯಾವಾಗಲೂ ವಹಿವಾಟಿನ ದಿನಾಂಕದಿಂದ ಬಡ್ಡಿ ಸಂಚಿತವಾಗುತ್ತವೆ. ಇವು ರಿಟೇಲ್ ಖರೀದಿಗಳಿಗಿಂತ ಭಿನ್ನವಾಗಿದ್ದು, ರಿಟೇಲ್ ಖರೀದಿಗಳಲ್ಲಿ ಬಡ್ಡಿ ಸಂಚಯವು, ಪಾವತಿಯ ದಿನಾಂಕದಂದು ಮಾಡಬೇಕಾದ 100% ಬಾಕಿ ಮೊತ್ತದ ಪಾವತಿಯ ಮೇಲೆ ಅವಲಂಬಿತವಾಗಿರುತ್ತದೆ.

- **ಲಭ್ಯವಿರುವ ಕ್ರೆಡಿಟ್ ಮಿತಿ:** ಯಾವುದೇ ಸಮಯದಲ್ಲಿ, ಲಭ್ಯವಿರುವ ಕ್ರೆಡಿಟ್ ಮಿತಿ ಎಂಬುದು ನಿಗದಿಪಡಿಸಿದ ಕ್ರೆಡಿಟ್ ಮಿತಿ ಮತ್ತು ಆ ಸಮಯದಲ್ಲಿ ಕಾರ್ಡ್‌ನಲ್ಲಿ ಬಾಕಿ ಉಳಿದಿರುವ ಮೊತ್ತದ ನಡುವಿನ ವ್ಯತ್ಯಾಸವಾಗಿದೆ. ಆ್ಯಡ್-ಆನ್ ಕಾರ್ಡ್ ಹೋಲ್ಡರ್(ಗಳು) ಪ್ರಾಥಮಿಕ ಕಾರ್ಡುದಾರರಿಗೆ ನಿಯೋಜಿಸಲಾದ ಈ ಕ್ರೆಡಿಟ್ ಮಿತಿಯನ್ನು ಹಂಚಿಕೊಳ್ಳುತ್ತಾರೆ

- **ಲಭ್ಯವಿರುವ ನಗದು ಮಿತಿ:** ಯಾವುದೇ ಸಮಯದಲ್ಲಿ ಲಭ್ಯವಿರುವ ನಗದು ಮಿತಿ ಎಂಬುದು ನಿಗದಿಪಡಿಸಿದ ನಗದು ಮಿತಿ ಮತ್ತು ಆ ಸಮಯದಲ್ಲಿ ಕಾರ್ಡ್‌ನಲ್ಲಿ ಬಾಕಿ ಇರುವ ನಗದು ಮೊತ್ತದ ನಡುವಿನ ವ್ಯತ್ಯಾಸವಾಗಿದೆ.

- **ಅಂತಾರಾಷ್ಟ್ರೀಯ ಮಿತಿ:** ಅಂತಾರಾಷ್ಟ್ರೀಯ ಮಿತಿ ಎಂಬುದು ಗ್ರಾಹಕರಿಗೆ ಅಂತಾರಾಷ್ಟ್ರೀಯ ಬಳಕೆಗಾಗಿ ನಿಗದಿಪಡಿಸಿದ ಮಿತಿಯಾಗಿದೆ. ಕ್ರೆಡಿಟ್ ಕಾರ್ಡ್ ಅರ್ಜಿಯ ಸಮಯದಲ್ಲಿ ಅಂತಾರಾಷ್ಟ್ರೀಯ ಬಳಕೆಯನ್ನು ಆಯ್ಕೆ ಮಾಡಿದ ಗ್ರಾಹಕರಿಗೆ ಮಾತ್ರ ಇದು ಅನ್ವಯಿಸುತ್ತದೆ. ಇದು ನಿಮ್ಮ ಸ್ವಾಗತ ಕಿಟ್‌ನಲ್ಲಿ ಉಲ್ಲೇಖಿಸಲಾದ ಅಂತಾರಾಷ್ಟ್ರೀಯ ಮಿತಿಯ ಪ್ರಕಾರ ಇರುತ್ತದೆ.

- ಕ್ರೆಡಿಟ್, ನಗದು ಮತ್ತು ಅಂತಾರಾಷ್ಟ್ರೀಯ (ಯಾವುದಾದರೂ ಇದ್ದರೆ) ಮಿತಿಯು ಪ್ರತಿ ಕಾರ್ಡುದಾರರಿಗೆ ವಿಭಿನ್ನವಾಗಿರುತ್ತದೆ.

ಇದನ್ನು ಕಾರ್ಡ್‌ನ ವಿತರಣೆಯ ಸಮಯದಲ್ಲಿ ನೀಡುವ ಸ್ವಾಗತ ಪತ್ರದಲ್ಲಿ ಕಾರ್ಡುದಾರರಿಗೆ ತಿಳಿಸಲಾಗುತ್ತದೆ ಮತ್ತು ಕಾರ್ಡುದಾರರಿಗೆ ಕಳುಹಿಸುವ ಮಾಸಿಕ ಸ್ಟೇಟ್‌ಮೆಂಟ್‌ನಲ್ಲೂ ಕಾಣಿಸಲಾಗುತ್ತದೆ. ಪ್ರತಿ ಮಾಸಿಕ ಸ್ಟೇಟ್‌ಮೆಂಟ್ ಸಿದ್ಧಪಡಿಸುವ ಸಮಯದಲ್ಲಿ ಲಭ್ಯವಿರುವ ಕ್ರೆಡಿಟ್ ಮಿತಿಯನ್ನು ಸದರಿ ಸ್ಟೇಟ್‌ಮೆಂಟ್‌ನ ಭಾಗವಾಗಿ ಒದಗಿಸಲಾಗುತ್ತದೆ.

**ಬಹು ಕಾರ್ಡ್‌ಗಳು-ಮಿತಿ ಹಂಚಿಕೆ:** ಎಕ್ಸಿಸ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ, ಕಾರ್ಡುದಾರರು ಪ್ರಸ್ತುತ ಹೊಂದಿರುವ ಕಾರ್ಡ್ ಪ್ರಕಾರಕ್ಕಿಂತ ಭಿನ್ನವಾಗಿರುವ ಕಾರ್ಡ್ ಪ್ರಕಾರವನ್ನು ಒದಗಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಯಾವುದೇ ಸಮಯದಲ್ಲಿ ಯಾವುದೇ ಕ್ರೆಡಿಟ್ ಕಾರ್ಡ್‌ನಲ್ಲಿನ ಕ್ರೆಡಿಟ್ ಮಿತಿಗಳು ಮತ್ತು ನಗದು ಮಿತಿಗಳು ಎಕ್ಸಿಸ್ ಬ್ಯಾಂಕ್‌ನ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತವೆ. ನಿಮ್ಮ ಎಲ್ಲ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳಲ್ಲಿ ಕ್ರೆಡಿಟ್ ಮಿತಿಯನ್ನು ಹಂಚಿಕೊಳ್ಳಲಾಗುತ್ತದೆ. ನಿಮ್ಮ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನಲ್ಲಿ ಪ್ರತ್ಯೇಕವಾಗಿರುವ ವಿವಿಧ ಕ್ರೆಡಿಟ್ ಮಿತಿಗಳನ್ನು ಪರಿಗಣಿಸದೆ, ಸಂಯೋಜಿತ ಬಳಕೆಯನ್ನು ಹಂಚಿಕೆಯ ಮಿತಿಗೆ ನಿರ್ಬಂಧಿಸಲಾಗುತ್ತದೆ. ವೈಯಕ್ತಿಕ ಕಾರ್ಡ್ ಮಟ್ಟದಲ್ಲಿ ಕ್ರೆಡಿಟ್ ಮಿತಿಗಳನ್ನು ಅಥವಾ ಗ್ರಾಹಕರ ಮಟ್ಟದಲ್ಲಿ ಹಂಚಿಕೆಯ ಮಿತಿಯನ್ನು ಚಾಲ್ತಿಯಲ್ಲಿರುವ ಬ್ಯಾಂಕ್‌ನ ಆಂತರಿಕ ಮಾರ್ಗಸೂಚಿಗಳ ಆಧಾರದ ಮೇಲೆ ಸ್ವಂತ ವಿವೇಚನೆಯಿಂದ ನಿರ್ಧರಿಸಲಾಗುತ್ತದೆ. ಕ್ರೆಡಿಟ್ ಕಾರ್ಡ್ ಹೊಂದಿರುವವರು, ನಿಗದಿಪಡಿಸಲಾದ ಕ್ರೆಡಿಟ್ ಮಿತಿಯನ್ನು ಮೀರಿದ ಸಂದರ್ಭಗಳಲ್ಲಿ, ಅವಧಿ-ಮೀರಿದ ಶುಲ್ಕಗಳು ಅನ್ವಯವಾಗುತ್ತವೆ. ಹೊಸ ಅಪ್ಲಿಕೇಶನ್‌ನ ಪ್ರಕಾರ, ಗ್ರಾಹಕರ ಜನನ ಸಂಬಂಧಿತ ಮತ್ತು ವೈಯಕ್ತಿಕ ವಿವರಗಳನ್ನು, ಯಾವುದಾದರೂ ಇದ್ದರೆ, ಚಾಲ್ತಿಯಲ್ಲಿರುವ ಗ್ರಾಹಕರ ಕಾರ್ಡ್‌ಗೆ(ಗಳಿಗೆ) ನವೀಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.
ಗ್ರಾಹಕರಿಗೆ ನೀಡುವ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳ ಗರಿಷ್ಠ ಸಂಖ್ಯೆಯು ಬ್ಯಾಂಕಿನ ಆಂತರಿಕ ನೀತಿಗಳು ಮತ್ತು ವಿವೇಚನೆಗೆ ಒಳಪಟ್ಟಿರುತ್ತವೆ.

- ಗ್ರಾಹಕರು ಹೊಂದಿರುವ ಕ್ರೆಡಿಟ್ ಕಾರ್ಡ್‌ಗಳಾದ್ಯಂತ ಕ್ರೆಡಿಟ್ ಮಿತಿಗಳು ಚಾಲ್ತಿಯಲ್ಲಿರುವ ಆಂತರಿಕ ನೀತಿ ಮಾರ್ಗಸೂಚಿಗಳಿಗೆ ಮತ್ತು ಬ್ಯಾಂಕ್‌ನ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತದೆ. ಒಂದು ವೇಳೆ ಗ್ರಾಹಕರು ಬಹು ಸಂಖ್ಯೆಯ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಹೊಂದಿದ್ದರೆ, ಎಲ್ಲ ಕಾರ್ಡ್‌ಗಳಲ್ಲಿ ಮಿತಿಯನ್ನು ಹಂಚಿಕೊಳ್ಳಲಾಗುತ್ತದೆ ಮತ್ತು ಎಲ್ಲ ಕಾರ್ಡ್‌ಗಳಲ್ಲಿ ಮಿತಿ ಒಂದೇ ಆಗಿರುತ್ತದೆ. ಉದಾ. ಗ್ರಾಹಕರ ಕ್ರೆಡಿಟ್ ಮಿತಿಯು INR 1,00,000 ಆಗಿದ್ದು, ಗ್ರಾಹಕರು ಎಕ್ಸಿಸ್ ಬ್ಯಾಂಕ್‌ನ ಎರಡು ಕ್ರೆಡಿಟ್ ಕಾರ್ಡ್‌ಗಳನ್ನು ಹೊಂದಿದ್ದರೆ, ಪ್ರತಿ ಕಾರ್ಡ್‌ನಲ್ಲಿನ ವೈಯಕ್ತಿಕ ಮಿತಿಯು INR 1,00,000 ಆಗಿರುತ್ತದೆ ಮತ್ತು ಇದನ್ನು ಎರಡೂ ಕಾರ್ಡ್‌ಗಳಲ್ಲಿ ಹಂಚಲಾಗುತ್ತದೆ. ಗ್ರಾಹಕರು ಕಾರ್ಡ್ A ದಲ್ಲಿ INR 90,000 ಮೌಲ್ಯದ ವಹಿವಾಟುಗಳನ್ನು ಮಾಡಿದರೆ, ಕಾರ್ಡ್ B ನಲ್ಲಿ ಯಾವುದೇ ಖರ್ಚು ಮಾಡದಿದ್ದರೂ ಎರಡೂ ಕಾರ್ಡ್‌ಗಳಾದ್ಯಂತ ಬಳಸಲು ಲಭ್ಯವಿರುವ ಕ್ರೆಡಿಟ್ ಮಿತಿಯು INR 10,000 ಆಗಿರುತ್ತದೆ. ಈ ಸನ್ನಿವೇಶದಲ್ಲಿ ಒಟ್ಟು ಗ್ರಾಹಕರ ಮಿತಿ ಕಾರ್ಡ್ A ನಲ್ಲಿ 1,00,000 ಮತ್ತು ಕಾರ್ಡ್ B ನಲ್ಲಿ 1,00,000 ಆಗಿರುವುದಿಲ್ಲ.
- ಗ್ರಾಹಕರು ಎಕ್ಸಿಸ್ ಬ್ಯಾಂಕ್‌ನ ಒಂದು ಕಾರ್ಡ್ ಅನ್ನು ಹೊಂದಿದ್ದರೆ ಮತ್ತು ಬ್ಯಾಂಕ್‌ನಿಂದ ಇನ್ನೊಂದು ಕಾರ್ಡ್‌ಗೆ ಅರ್ಜಿ ಸಲ್ಲಿಸಿದರೆ, ಮೊದಲ ಕಾರ್ಡ್‌ಗೆ ಅನ್ವಯಿಸುವ ಮಿತಿಯೇ ಎರಡನೇ

ಕಾರ್ಡ್‌ಗೂ ಅನ್ವಯಿಸುತ್ತದೆ. ಆದರೂ, ಎರಡನೇ ಕಾರ್ಡ್‌ಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ, ಗ್ರಾಹಕರು ಹೆಚ್ಚಿನ ಮಿತಿಗಾಗಿ ಪರಿಶೀಲನೆಗೆ ಒಳಪಟ್ಟು, ಎರಡನೇ ಕಾರ್ಡ್ ಅರ್ಜಿಯ ಮೂಲಕ ಅದಕ್ಕೆ ಸಮ್ಮತಿಸಿದ್ದರೆ, ಪರಿಷ್ಕೃತ ಮಿತಿಯು ಎಲ್ಲ ಕಾರ್ಡ್‌ಗಳಿಗೆ ಅಂದರೆ ಗ್ರಾಹಕರಿಗೆ ನೀಡಲಾದ ಚಾಲ್ತಿಯಲ್ಲಿರುವ ಮತ್ತು ಹೊಸ ಕಾರ್ಡ್‌ಗೆ ಅನ್ವಯಿಸುತ್ತದೆ.

- ಎಕ್ಸಿಸ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಗ್ರಾಹಕರು ಹೊಂದಿರುವ ಕಾರ್ಡ್‌ಗೆ(ಗಳಿಗೆ) ನಿಯೋಜಿಸಲಾದ ಕ್ರೆಡಿಟ್ ಮಿತಿಯನ್ನು ಕಾಲಕಾಲಕ್ಕೆ ಪರಿಶೀಲಿಸಲು (ಹೆಚ್ಚಳ ಅಥವಾ ಕಡಿತವನ್ನು ಒಳಗೊಂಡಂತೆ) ಅರ್ಹತೆಯನ್ನು ಹೊಂದಿರುತ್ತದೆ. ಅಂತಹ ಪರಿಶೀಲನೆಯ ಆಧಾರದ ಮೇಲೆ, ಮಿತಿ ಹೆಚ್ಚಳದ ಕೊಡುಗೆಯನ್ನು (ನಿರ್ದಿಷ್ಟ ಮಾನ್ಯತೆಯ ಅವಧಿಯೊಂದಿಗೆ) ಗ್ರಾಹಕರಿಗೆ ನೀಡಲಾಗುವುದು ಮತ್ತು ಗ್ರಾಹಕರ ಸ್ಪಷ್ಟ ಸಮ್ಮತಿಯ ಆಧಾರದ ಮೇಲೆ, ಪರಿಷ್ಕರಣೆಯ ಸಮಯದಲ್ಲಿ ನೈಜ ಸಮಯದ ತಪಾಸಣೆಗೆ ಒಳಪಟ್ಟು, ಅಂತಹ ಹೆಚ್ಚಳವನ್ನು ಗ್ರಾಹಕರು ಹೊಂದಿರುವ ಎಲ್ಲ ಕ್ರೆಡಿಟ್ ಕಾರ್ಡ್‌ಗಳಲ್ಲಿ ಪ್ರಕ್ರಿಯೆಗೊಳಿಸಲಾಗುತ್ತದೆ. ಕ್ರೆಡಿಟ್ ಮಿತಿ ಹೆಚ್ಚಳವು ಕ್ರೆಡಿಟ್ ಕಾರ್ಡ್ ಖಾತೆಯು ವಿನಂತಿಗಾಗಿ ಕ್ರಮವನ್ನು ತೆಗೆದುಕೊಂಡ ದಿನಾಂಕದಂದು ಅರ್ಹತೆಗೆ ಒಳಪಟ್ಟಿರುತ್ತದೆ ಮತ್ತು ಅದನ್ನು 3 ಕೆಲಸದ ದಿನಗಳಲ್ಲಿ ಪ್ರಕ್ರಿಯೆಗೊಳಿಸಲಾಗುತ್ತದೆ.
- ಗ್ರಾಹಕರು ಬ್ಯಾಂಕ್‌ನಿಂದ ಯಾವುದೇ ಮಿತಿ ಹೆಚ್ಚಳದ ಕೊಡುಗೆಗೆ ಅರ್ಹತೆ ಹೊಂದಿಲ್ಲದಿದ್ದರೆ, ಚಾಲ್ತಿಯಲ್ಲಿರುವ ಕ್ರೆಡಿಟ್ ಮಿತಿಯ ಆಧಾರದ ಮೇಲೆ, ಗ್ರಾಹಕರು ಬ್ಯಾಂಕ್‌ಗೆ ಅಗತ್ಯವಿರುವ ದಾಖಲೆಗಳನ್ನು ಸಲ್ಲಿಸುವ ಮೂಲಕ ಪರಿಶೀಲನೆಗೆ ವಿನಂತಿಸಬಹುದು. ಅಂತಹ ಪರಿಶೀಲನೆ ಮತ್ತು ಹೆಚ್ಚಳವು (ಯಾವುದಾದರೂ ಇದ್ದರೆ) ಬ್ಯಾಂಕಿನ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತದೆ. ಅಂತಹ ವಿನಂತಿಗಳನ್ನು 7 ಕೆಲಸದ ದಿನಗಳಲ್ಲಿ ಪ್ರಕ್ರಿಯೆಗೊಳಿಸಲಾಗುತ್ತದೆ.

- **ಬಳಕೆಗೆ RBI ಮಾರ್ಗಸೂಚಿಗಳು**

  RBI ಮಾರ್ಗಸೂಚಿಗಳ ಪ್ರಕಾರ, ಎಲ್ಲಾ ಕಾರ್ಡ್‌ಗಳನ್ನು ಭಾರತದೊಳಗಿನ ಸಂಪರ್ಕ ಆಧಾರಿತ ಬಳಕೆಯ ಸ್ಥಳಗಳಲ್ಲಿ (ATM ಗಳು ಮತ್ತು POS ಅಂದರೆ ಪಾಯಿಂಟ್ ಆಫ್ ಸೇಲ್ ಸಾಧನಗಳು) ಮಾತ್ರ ಉಪಯೋಗಿಸಲು ಸಕ್ರಿಯಗೊಳಿಸಲಾಗುತ್ತದೆ. ಆಕ್ಸಿಸ್ ಮೊಬೈಲ್ ಆ್ಯಪ್, ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಸಂಪರ್ಕವಿಲ್ಲದ, ಅಂತಾರಾಷ್ಟ್ರೀಯ, ಆನ್‌ಲೈನ್ ವಹಿವಾಟುಗಳನ್ನು ಸಕ್ರಿಯಗೊಳಿಸುವ ಅಥವಾ ನಿಷ್ಕ್ರಿಯಗೊಳಿಸುವ ಮೂಲಕ ಅಥವಾ ಗ್ರಾಹಕರ ಸೇವಾ ಕೇಂದ್ರವನ್ನು ಸಂಪರ್ಕಿಸುವ/ಹತ್ತಿರದ ಶಾಖೆಗೆ ಭೇಟಿ ನೀಡುವ ಮೂಲಕ ನಿಮ್ಮ ಬಳಕೆಯ ಆದ್ಯತೆಯನ್ನು ನೀವು ನಿಗದಿಗೊಳಿಸಬಹುದು ಅಥವಾ ಬದಲಾಯಿಸಬಹುದು ಮತ್ತು ನಿಮ್ಮ ಕಾರ್ಡ್‌ನಲ್ಲಿ ವಹಿವಾಟು ಮಿತಿಗಳನ್ನು ನಿರ್ವಹಿಸಬಹುದು. ನಿಮ್ಮ ಕಾರ್ಡ್‌ನ ಮುಂಬದಿಯಲ್ಲಿರುವ ಸಂಪರ್ಕರಹಿತ ಚಿಹ್ನೆಯು ಸಂಪರ್ಕವಿಲ್ಲದ ಸ್ವೀಕಾರಕ್ಕೆ ಕಾರ್ಡ್ ಸಿದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ. ಮೇಲೆ ತಿಳಿಸಿದ ಯಾವುದೇ ವಹಿವಾಟುಗಳನ್ನು ನಿಮ್ಮ ಕಾರ್ಡ್ ಪ್ಲಾಸ್ಟಿಕ್ ಬೆಂಬಲಿಸದಿದ್ದರೆ, ಆದ್ಯತೆಗಳು/ಮಿತಿಗಳನ್ನು ಸಕ್ರಿಯಗೊಳಿಸಲು ಅಥವಾ ನಿಷ್ಕ್ರಿಯಗೊಳಿಸಲು ನಿಮಗೆ ಸಾಧ್ಯವಾಗುವುದಿಲ್ಲ, ದಯವಿಟ್ಟು ಗ್ರಾಹಕರ ಸೇವಾ ಕೇಂದ್ರಕ್ಕೆ ಕರೆ ಮಾಡಿ ಅಥವಾ ವಿನಂತಿಯನ್ನು ಸಲ್ಲಿಸಲು ಶಾಖೆಗೆ ಭೇಟಿ ನೀಡಿ.

## C) ಕ್ರೆಡಿಟ್ - ಮುಕ್ತ ಅವಧಿ

ವಹಿವಾಟಿನ ದಿನಾಂಕವನ್ನು ಅವಲಂಬಿಸಿ ಬಡ್ಡಿಯಿಲ್ಲದ ಗ್ರೇಸ್ ಅವಧಿಯು 20ರಿಂದ 50 ದಿನಗಳವರೆಗೆ ಇರುತ್ತದೆ. ಹಿಂದಿನ ತಿಂಗಳ ಬಿಲ್‌ನಲ್ಲಿ ಪಾವತಿಸಲು ಇನ್ನೂ ಯಾವುದಾದರೂ ಮೊತ್ತವು ಬಾಕಿಯಿದ್ದರೆ, ಬಡ್ಡಿ ರಹಿತ ಕ್ರೆಡಿಟ್ ಅವಧಿಯನ್ನು ರದ್ದುಗೊಳಿಸಲಾಗುತ್ತದೆ.

**ಗ್ರೇಸ್ ಅವಧಿಯ ಲೆಕ್ಕಾಚಾರಕ್ಕೆ ವಿವರಣಾತ್ಮಕ ಉದಾಹರಣೆ:**
ಜೂನ್ 20ರಿಂದ ಜುಲೈ 20ರ ನಡುವಿನ ಅವಧಿಯ ಸ್ಟೇಟ್‌ಮೆಂಟ್‌ಗೆ, ಪಾವತಿಯ ಕೊನೆಯ ದಿನಾಂಕವು ಆಗಸ್ಟ್ 10 ಆಗಿರುತ್ತದೆ. ಹಿಂದಿನ ತಿಂಗಳ ಸ್ಟೇಟ್‌ಮೆಂಟ್‌ನಲ್ಲಿ ಬಾಕಿ ಇದ್ದ ನಿಮ್ಮ ಪೂರ್ಣ ಮೊತ್ತವನ್ನು ನಿಗದಿತ ದಿನಾಂಕದಂದು ನೀವು ಪಾವತಿಸಿದ್ದೀರಿ ಎಂದು ಊಹಿಸಿದಾಗ, ಗ್ರೇಸ್ ಅವಧಿ ಹೀಗಿರುತ್ತದೆ:

1. ದಿನಾಂಕ ಜೂನ್ 24ರಂದು ಮಾಡಿದ ಖರೀದಿಗೆ ಬಡ್ಡಿ ರಹಿತ ಗ್ರೇಸ್ ಅವಧಿ ಜೂನ್ 24ರಿಂದ ಆಗಸ್ಟ್ 10ರವರೆಗೆ, ಅಂದರೆ, 47 ದಿನಗಳು ಇರುತ್ತದೆ.

2. ದಿನಾಂಕ ಜುಲೈ 14ರಂದು ಮಾಡಿದ ಖರೀದಿಗೆ, ಬಡ್ಡಿ ರಹಿತ ಗ್ರೇಸ್ ಅವಧಿಯು ಜುಲೈ 18ರಿಂದ ಆಗಸ್ಟ್ 10ರವರೆಗೆ, ಅಂದರೆ, 23 ದಿನಗಳು ಇರುತ್ತದೆ. ಹೀಗಾಗಿ, ಖರೀದಿಯ ದಿನಾಂಕವನ್ನು ಅವಲಂಬಿಸಿ ಗ್ರೇಸ್ ಅವಧಿಯು ಬದಲಾಗಬಹುದು. ಆದರೂ, ಹಿಂದಿನ ತಿಂಗಳ ಬಾಕಿಯಿರುವ ಒಟ್ಟು ಮೊತ್ತವನ್ನು ನಿಗದಿತ ದಿನಾಂಕದ ಒಳಗಾಗಿ ಪಾವತಿಸದಿದ್ದರೆ, ಉಚಿತ ಕ್ರೆಡಿಟ್ ಅವಧಿಯು ಕಳೆದುಹೋಗುತ್ತದೆ ಮತ್ತು ಬಡ್ಡಿಯಿಲ್ಲದ ಯಾವುದೇ ಅವಧಿಯು ಲಭ್ಯವಾಗುವುದಿಲ್ಲ. ನಗದು ಮುಂಗಡಗಳಿಗಾಗಿ, ವಹಿವಾಟಿನ ದಿನಾಂಕದಿಂದ ಪಾವತಿಯ ದಿನಾಂಕದವರೆಗೆ ಬಡ್ಡಿಯನ್ನು ವಿಧಿಸಲಾಗುತ್ತದೆ.

## D) ಬಿಲ್ಲಿಂಗ್ ಮತ್ತು ಸ್ಟೇಟ್‌ಮೆಂಟ್

i] ಬಿಲ್ಲಿಂಗ್ ಸ್ಟೇಟ್‌ಮೆಂಟ್ - ಆವರ್ತಕತೆ ಮತ್ತು ಕಳುಹಿಸುವ ವಿಧಾನ: ಕಾರ್ಡ್ ಖಾತೆಯಲ್ಲಿ ಯಾವುದಾದರೂ ವಹಿವಾಟು ನಡೆದಿದ್ದರೆ ಅಥವಾ ರೂ. 100ಕ್ಕಿಂತ ಹೆಚ್ಚಿನ ಮೊತ್ತ ಪಾವತಿಗೆ ಬಾಕಿ ಇದ್ದರೆ ಸ್ಟೇಟ್‌ಮೆಂಟ್/ಇ-ಸ್ಟೇಟ್‌ಮೆಂಟ್ ಅನ್ನು ತಿಂಗಳಿಗೆ ಒಂದು ಸಲ ಬ್ಯಾಂಕ್ ತನ್ನ ದಾಖಲೆಗಳ ಪ್ರಕಾರ ಇರುವ ನಿಮ್ಮ ಮೇಲಿಂಗ್ ವಿಳಾಸ / ಇ-ಮೇಲ್ ವಿಳಾಸಕ್ಕೆ ಕಳುಹಿಸುತ್ತದೆ. ಸ್ಟೇಟ್‌ಮಂಟ್ ಸ್ವೀಕರಿಸದೇ ಇರುವುದು ಈ ಒಪ್ಪಂದದ ಅಡಿಯಲ್ಲಿ ನಿಮ್ಮ ಜವಾಬ್ದಾರಿಗಳು ಮತ್ತು ಹೊಣೆಗಾರಿಕೆಗಳ ಮೇಲೆ ಪರಿಣಾಮ ಬೀರುವುದಿಲ್ಲ ಮತ್ತು ನಿಗದಿತ ದಿನಾಂಕದ ಒಳಗಾಗಿ ಕಾರ್ಡ್‌ನಲ್ಲಿ ಬಾಕಿ ಇರುವ ಮೊತ್ತವನ್ನು ಪಾವತಿಸಿ ಇತ್ಯರ್ಥಪಡಿಸುವ ಜವಾಬ್ದಾರಿಯನ್ನು ನೀವು ಹೊಂದಿರುತ್ತೀರಿ.

ii] ವ್ಯಾಪಾರಿ ಸಂಸ್ಥೆಗಳಿಂದ ಪಡೆದ ಎಲ್ಲ ಡೆಬಿಟ್‌ಗಳು ಮತ್ತು ಶುಲ್ಕಗಳನ್ನು ಕಾರ್ಡ್ ಖಾತೆಗೆ ಬ್ಯಾಂಕ್ ಡೆಬಿಟ್ ಮಾಡುತ್ತದೆ ಮತ್ತು ಕಾರ್ಡ್‌ದಾರರು ಅಥವಾ ಕಾರ್ಡ್‌ದಾರರ ಪರವಾಗಿ ಬ್ಯಾಂಕಿಗೆ ಮಾಡಿದ ಯಾವುದೇ ಮತ್ತು ಎಲ್ಲ ಪಾವತಿಗಳನ್ನು ಕಾರ್ಡ್ ಖಾತೆಗೆ ಕ್ರೆಡಿಟ್ ಮಾಡುತ್ತದೆ.

iii] ಕಾರ್ಡ್‌ದಾರರಿಗೆ ರಿವಾಲ್ವಿಂಗ್ ಕ್ರೆಡಿಟ್ ಸೌಲಭ್ಯವನ್ನು ಬ್ಯಾಂಕ್ ನೀಡಬಹುದು, ಇದರಲ್ಲಿ ಕಾರ್ಡ್‌ದಾರರು ಸ್ಟೇಟ್‌ಮೆಂಟ್‌ನಲ್ಲಿ ಸೂಚಿಸಿದಂತೆ ಕನಿಷ್ಠ ಮೊತ್ತವನ್ನು (MAD) ಮಾತ್ರ ಪಾವತಿಸಲು ಆಯ್ಕೆ ಮಾಡಬಹುದು. ಸ್ಟೇಟ್‌ಮೆಂಟ್‌ನಲ್ಲಿ ಸೂಚಿಸಿರುವಂತೆ, ಬಾಕಿ ಇರುವ ಒಟ್ಟು ಮೊತ್ತವನ್ನು (TAD) ಅಥವಾ MAD (ಕನಿಷ್ಠ ಮೊತ್ತವನ್ನು) ನಿಗದಿತ ದಿನಾಂಕದಂದು ಅಥವಾ ಮೊದಲು ಕಾರ್ಡ್‌ದಾರರು ಪಾವತಿಸಬೇಕು.

iv] ಪಾವತಿಯ ನಿಗದಿತ ದಿನಾಂಕದ ಒಳಗಾಗಿ MAD ಯನ್ನು ಪಾವತಿಸದಿದ್ದರೆ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನ ವಾಪಸಾತಿ ಅಥವಾ ರದ್ದತಿಯ (ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ) ಅಪಾಯಕ್ಕೆ ನೀವೇ ಹೊಣೆಗಾರರಾಗಿರುತ್ತೀರಿ. ಪಾವತಿ ಮಾಡದಿರುವ ಅಂತ ಮೊತ್ತಕ್ಕೂ ಶುಲ್ಕವನ್ನು ವಿಧಿಸಲಾಗುತ್ತದೆ. ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ಮಾನ್ಯ ಮಾಡದಂತೆ ಮತ್ತು/ಅಥವಾ ಕಾರ್ಡ್ ಅಸೋಸಿಯೇಷನ್ ವ್ಯವಸ್ಥೆಯಲ್ಲಿ ಕಾರ್ಡ್ ಸಂಖ್ಯೆಯನ್ನು ಹಾಟ್ ಲಿಸ್ಟ್ ಮಾಡುವ ಮೂಲಕ ಕಾರ್ಡ್ ಅನ್ನು ವಶಕ್ಕೆ ಪಡೆಯುವಂತೆ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ವ್ಯಾಪಾರಿ ಸಂಸ್ಥೆಗೆ ಸೂಚಿಸಬಹುದು.

v] ಪಾವತಿಗೆ ನಿಗದಿತ ದಿನಾಂಕದ ಮೊದಲು, ಬಿಲ್ಲಿಂಗ್ ಅವಧಿಯಲ್ಲಿ, ನೀವು ಒಂದಕ್ಕಿಂತ ಹೆಚ್ಚು ಸಲ, ಕನಿಷ್ಠ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಪಾವತಿಸಬಹುದು ಅಥವಾ ನಿಗದಿತ ದಿನಾಂಕದ ಮೊದಲು ಯಾವುದೇ ಸಮಯದಲ್ಲಿ ಕಾರ್ಡ್ ಖಾತೆಯಲ್ಲಿ ಬಾಕಿ ಇರುವ ಮೊತ್ತವನ್ನು ಪಾವತಿಸಬಹುದು.

vi] ನಿಮ್ಮ ಕಾರ್ಡ್ ಖಾತೆಗೆ ಮಾಡಿದ ಪಾವತಿಗಳನ್ನು ಈ ಕ್ರಮದಲ್ಲಿ ಹಂಚಿಕೆ ಮಾಡಲಾಗುತ್ತದೆ:

1. ತೆರಿಗೆಗಳು ಸೇರಿದಂತೆ ಫೀಗಳು ಮತ್ತು ಶುಲ್ಕಗಳು
2. ಬಡ್ಡಿ ದರಗಳು
3. ನಗದು ಮುಂಗಡಗಳು
4. ಡಯಲ್-ಎ-ಡ್ರಾಫ್ಟ್
5. EMI
6. ಶಿಲ್ಕು ವರ್ಗಾವಣೆ
7. ಖರೀದಿಗಳು

vii] ನೀವು ಹೊರಡಿಸಿದ ಯಾವುದೇ ಪಾವತಿ ಸೂಚನೆಯನ್ನು ತರುವಾಯ ಅಮಾನ್ಯಗೊಳಿಸಿದರೆ, ಕಾರ್ಡ್ ಸವಲತ್ತುಗಳನ್ನು ರದ್ದುಗೊಳಿಸಬಹುದು/ಕೊನೆಗೊಳಿಸಬಹುದು ಮತ್ತು ಶುಲ್ಕದ ತಪಶೀಲಿನಲ್ಲಿ ಉಲ್ಲೇಖಿಸಿರುವಂತೆ ಶುಲ್ಕವನ್ನು ಕಾರ್ಡ್ ಖಾತೆಗೆ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಬಹುದು. ಅಂತಹ ಶುಲ್ಕ ಮೊತ್ತವು ಬ್ಯಾಂಕಿನ ಸ್ವಂತ ವಿವೇಚನೆಯಿಂದ ಬದಲಾವಣೆಗೆ ಒಳಪಟ್ಟಿರುತ್ತದೆ. ಜೊತೆಗೆ, ಯಾವುದೇ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

viii] ನಕಲಿ ಮಾಸಿಕ ಖಾತೆ ಸ್ಟೇಟ್‌ಮೆಂಟ್‌ಗಳನ್ನು ನೀವು ವಿನಂತಿಸಿದರೆ ಮಾತ್ರ ಬ್ಯಾಂಕ್ ನಿಮಗೆ ಒದಗಿಸುತ್ತದೆ, ಅದು ಶುಲ್ಕಗಳ ತಪಶೀಲಿನಲ್ಲಿ ನಿರ್ದಿಷ್ಟಪಡಿಸಿದ ಸೇವಾ ಶುಲ್ಕದ ಪಾವತಿಗೆ ಒಳಪಟ್ಟಿರುತ್ತದೆ ಮತ್ತು ಅದನ್ನು ಬ್ಯಾಂಕ್ ತನ್ನ ವಿವೇಚನೆಯ ಅನುಸಾರ ಬದಲಾಯಿಸಬಹುದು.

ix] ನಿಮ್ಮ ಸಂವಹನ ವಿಳಾಸ / ಇ-ಮೇಲ್ ವಿಳಾಸದಲ್ಲಿ ಯಾವುದೇ ಬದಲಾವಣೆಯಾದಲ್ಲಿ, ನೀವು ನಿಯಮಿತವಾಗಿ ಮತ್ತು ಸಕಾಲದಲ್ಲಿ ಸ್ಟೇಟ್‌ಮೆಂಟ್‌ಗಳನ್ನು ಸ್ವೀಕರಿಸುತ್ತೀರೆಂದು ಖಚಿತಪಡಿಸಿಕೊಳ್ಳಲು ತಕ್ಷಣವೇ ಬ್ಯಾಂಕನ್ನು ಸಂಪರ್ಕಿಸಿ, ವಿವರಗಳನ್ನು ನವೀಕರಿಸುವಂತೆ ನಿಮಗೆ ಸೂಚಿಸಲಾಗುತ್ತದೆ.

x] ಬಿಲ್ಲಿಂಗ್ ತಗಾದೆಗಳು – ಯಾವುದೇ ವ್ಯತ್ಯಾಸಗಳಿದ್ದರೆ, ಸ್ಟೇಟ್‌ಮೆಂಟ್ ನೀಡಿದ 60 ದಿನಗಳ ಒಳಗೆ ಕಾರ್ಡ್‌ದಾರರು ಬ್ಯಾಂಕಿಗೆ ತಿಳಿಸದಿದ್ದರೆ ಸ್ಟೇಟ್‌ಮೆಂಟ್‌ನ(ಗಳ) ಎಲ್ಲ ವಿಷಯಗಳು ಸರಿಯಾಗಿವೆ ಮತ್ತು ಸ್ವೀಕಾರಾರ್ಹವಾಗಿವೆ ಎಂದು ಕಾರ್ಡ್‌ದಾರನು(ರು) ಒಪ್ಪಿದ್ದಾರೆಂದು ಪರಿಗಣಿಸಲಾಗುತ್ತದೆ. ಮೇಲೆ ತಿಳಿಸಿದ ವ್ಯತ್ಯಾಸಗಳು ಕಾನೂನುಬದ್ಧವೆಂದು ಬ್ಯಾಂಕ್ ಕಂಡುಕೊಂಡರೆ, ಬ್ಯಾಂಕ್ ಕೈಗೊಳ್ಳುವ ಎಲ್ಲ ತನಿಖೆಗಳು ತನಗೆ ಸಂಪೂರ್ಣ ತೃಪ್ತಿಕರವಾಗಿ ಪೂರ್ಣಗೊಳ್ಳುವ ತನಕ ತಾತ್ಕಾಲಿಕ ಆಧಾರದ ಮೇಲೆ ಬ್ಯಾಂಕ್ ಶುಲ್ಕವನ್ನು ಹಿಂತಿರುಗಿಸಬಹುದು. ಬ್ಯಾಂಕ್ ನಡೆಸಿದ ಈ ತನಿಖೆಗಳು ಅಂತಹ (ವ್ಯತ್ಯಾಸಗಳ) ಹೊಣೆಗಾರಿಕೆಯು ಹೇಳಿದ ಕಾರ್ಡ್‌ದಾರರಿಗೆ(ಗಳಿಗೆ) ಸೇರುತ್ತಿದೆ ಎಂದು ಸೂಚಿಸಿದರೆ, ಮುಂದಿನ ಸ್ಟೇಟ್‌ಮೆಂಟ್‌ನಲ್ಲಿ ಆ ಶುಲ್ಕವನ್ನು ಮರುಸ್ಥಾಪಿಸಲಾಗುತ್ತದೆ ಮತ್ತು ಶುಲ್ಕಗಳು / ವೆಚ್ಚಗಳನ್ನು ಶುಲ್ಕಗಳ ತಪಶೀಲಿನಲ್ಲಿ ಸೂಚಿಸಲಾದ ಶುಲ್ಕಗಳಿಗೆ ಅನುಗುಣವಾಗಿ ಬ್ಯಾಂಕ್ ಕ್ಲೈಮ್ ಮಾಡುತ್ತದೆ.

xi] EMI ಸೌಲಭ್ಯವನ್ನು ಪಡೆದುಕೊಂಡ ಮೇಲೆ, ಮೂಲ ವಹಿವಾಟಿನ ಮೇಲೆ ಸಂಚಿತವಾದ ಯಾವುದಾದರೂ ರಿವಾರ್ಡ್ ಪಾಯಿಂಟ್‌ಗಳನ್ನು ಹಿಂತಿರುಗಿಸಲಾಗುತ್ತದೆ.

**E) UPI ನಲ್ಲಿ ಎಕ್ಸಿಸ್ ಬ್ಯಾಂಕ್ ರುಪೇ (RuPay) ಕ್ರೆಡಿಟ್ ಕಾರ್ಡ್**

ಈ ನಿಯಮಗಳು ಮತ್ತು ಷರತ್ತುಗಳು ಬಳಕೆದಾರರು ಮತ್ತು ಎಕ್ಸಿಸ್ ಬ್ಯಾಂಕ್ ನಡುವಿನ ಒಪ್ಪಂದವನ್ನು ರೂಪಿಸುತ್ತವೆ ಮತ್ತು ಮೇಲ್ಗಡೆ ಪಟ್ಟಿ ಮಾಡಿರುವ ಕ್ರೆಡಿಟ್ ಕಾರ್ಡ್ MITC ಗೆ ಹೆಚ್ಚುವರಿಯಾಗಿರುತ್ತವೆ ಮತ್ತು ಅಸಂಗತವಾಗಿರುವುದಿಲ್ಲ.
ಈ ಸೌಲಭ್ಯವನ್ನು ಅರ್ಹತಾ ಮಾನದಂಡಗಳನ್ನು ಪೂರೈಸುವ ಬಳಕೆದಾರರಿಗೆ ಮಾತ್ರವೇ ಎಕ್ಸಿಸ್ ಬ್ಯಾಂಕ್‌ನ ಸ್ವಂತ ವಿವೇಚನೆಯಿಂದ ಲಭ್ಯಗೊಳಿಸುತ್ತದೆ ಮತ್ತು ಬಳಕೆದಾರರಿಗೆ ಮುನ್ಸೂಚನೆ ನೀಡಿ ಅಥವಾ ನೀಡದೆಯೂ ಯಾವುದೇ ಸಮಯದಲ್ಲಿ ಅದನ್ನು ಎಕ್ಸಿಸ್ ಬ್ಯಾಂಕ್ ಸ್ಥಗಿತಗೊಳಿಸಬಹುದು.

**ಸೇವಾ ನಿಯಮಗಳು**

UPI ಕ್ರೆಡಿಟ್ ಕಾರ್ಡ್‌ಗೆ ಸಂಬಂಧಿಸಿದ ಈ ನಿಯಮಗಳು ಮತ್ತು ಷರತ್ತುಗಳು ಎಕ್ಸಿಸ್ ಬ್ಯಾಂಕ್ ತನ್ನ ಗ್ರಾಹಕರಿಗೆ ಒದಗಿಸುವ ಯಾವುದೇ ಖಾತೆಯ ಅಥವಾ ಯಾವುದೇ ಇತರ ಸೌಲಭ್ಯಗಳ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳಿಗೆ ಹೆಚ್ಚುವರಿಯಾಗಿರುತ್ತವೆ.

1. ಬಳಕೆದಾರರ ಕೋರಿಕೆಯ ಮೇರೆಗೆ ಎಕ್ಸಿಸ್ ಬ್ಯಾಂಕ್ ರುಪೇ (RuPay) ಕ್ರೆಡಿಟ್ ಕಾರ್ಡ್‌ನ ಅನುಮೋದನೆಗೆ ಒಳಪಟ್ಟು ಈ ಸೌಲಭ್ಯವನ್ನು ಒದಗಿಸಲಾಗುವುದು
2. ಗ್ರಾಹಕರು ತಮ್ಮ ಎಕ್ಸಿಸ್ ಬ್ಯಾಂಕ್ ರುಪೇ (RuPay) ಕ್ರೆಡಿಟ್ ಕಾರ್ಡ್‌ಗೆ ಲಿಂಕ್ ಮಾಡಲಾದ ನೋಂದಾಯಿತ ಮೊಬೈಲ್ ಸಂಖ್ಯೆಯನ್ನು UPI ಆ್ಯಪ್ ಜೊತೆಗೆ ಲಿಂಕ್ ಮಾಡುವುದಕ್ಕೂ ಬಳಸಬೇಕಾಗುತ್ತದೆ.
3. ಎಕ್ಸಿಸ್ ಬ್ಯಾಂಕ್ ರುಪೇ (RuPay) ಕ್ರೆಡಿಟ್ ಕಾರ್ಡ್ ಸಕ್ರಿಯಗೊಳಿಸಲು ಮತ್ತು UPI ಆ್ಯಪ್ ಮೂಲಕ ಪಾವತಿ ವಹಿವಾಟುಗಳನ್ನು ದೃಢೀಕರಿಸಲು ಬಳಕೆದಾರರು 6-ಅಂಕಿಗಳ UPI ಪಿನ್ ಸೆಟ್ ಮಾಡಬೇಕಾಗುತ್ತದೆ. UPI ವಹಿವಾಟುಗಳ ದೃಢೀಕರಣಕ್ಕೆ 4-ಅಂಕಿಗಳ ಕ್ರೆಡಿಟ್ ಕಾರ್ಡ್ ಪಿನ್ ಪರಿಗಣಿಸಲಾಗುವುದಿಲ್ಲ.
4. UPI ಪಿನ್ ಸೆಟಪ್ ಅನ್ನು ಎಲ್ಲ ರೀತಿಯ ವಹಿವಾಟುಗಳಿಗೆ ಕ್ರೆಡಿಟ್ ಕಾರ್ಡ್ ಸಕ್ರಿಯಗೊಳಿಸಲು ಗ್ರಾಹಕರ ಒಪ್ಪಿಗೆಯಾಗಿ ಪರಿಗಣಿಸಲಾಗುತ್ತದೆ.
5. ಬಳಕೆದಾರರು ರುಪೇ (RuPay) ನೆಟ್ವರ್ಕ್‌ನಲ್ಲಿ ಅನುಮತಿಸಲಾದ P2M ವಹಿವಾಟುಗಳನ್ನಷ್ಟೇ ಮಾಡಬಹುದು
6. ನಿಮ್ಮ UPI ಆ್ಯಪ್‌ನಲ್ಲಿ ಅಂತಾರಾಷ್ಟ್ರೀಯ ವಹಿವಾಟುಗಳನ್ನು ಸಕ್ರಿಯಗೊಳಿಸಿದರೆ, UPI ವಹಿವಾಟಿನ ಮೇಲೆ CC ಯನ್ನೂ ಅನುಮತಿಸಲಾಗುವುದು
7. P2P, P2PM, ಡಿಜಿಟಲ್ ಖಾತೆ ತೆರೆಯುವಿಕೆ, ಸಾಲ ನೀಡುವ ವೇದಿಕೆ, ವ್ಯಾಪಾರಿ ಸಂಸ್ಥೆಯಲ್ಲಿ ನಗಡು ಹಿಂಪಡೆಯುವಿಕೆ, ATM, ERUPI, IPO ನಲ್ಲಿ ನಗದು ಹಿಂಪಡೆಯುವಿಕೆ, ವಿದೇಶಿ ಆಂತರಿಕ ರವಾನೆ, ಮ್ಯೂಚುವಲ್ ಫಂಡ್‌ಗಳು ಮತ್ತು ಎಕ್ಸಿಸ್ ಬ್ಯಾಂಕ್/RBI ನಿರ್ಬಂಧಿಸಿರುವ ಯಾವುದೇ ವರ್ಗಗಳ ವಹಿವಾಟುಗಳಿಗೆ ಅವಕಾಶವಿಲ್ಲ
8. ಗ್ರಾಹಕರಿಗೆ ಎಕ್ಸಿಸ್ ಬ್ಯಾಂಕ್ ಒದಗಿಸಿದ ಕ್ರೆಡಿಟ್ ಕಾರ್ಡ್ ಗರಿಷ್ಠ ಮಿತಿಗೆ, ಅಸ್ತಿತ್ವದಲ್ಲಿರುವ UPI ವಹಿವಾಟು ಮಿತಿಗಳೂ ಅನ್ವಯಿಸುತ್ತವೆ
9. ಕ್ರೆಡಿಟ್ ಕಾರ್ಡ್ ವಹಿವಾಟಿನ ಮೇಲೆ ಅನ್ವಯವಾಗುವ ಯಾವುದೇ ಶುಲ್ಕ, ಹಣಕಾಸು ಶುಲ್ಕಗಳು, ಸರ್ಚಾರ್ಜ್‌ಗಳು ಅಥವಾ ಮಾರ್ಕ್-ಅಪ್‌ಗಳು UPI ವಹಿವಾಟಿನ ಮೇಲಿನ CC ಗೆ ಅನ್ವಯವಾಗುತ್ತವೆ
10. UPI ವಹಿವಾಟಿನ ಮೇಲಿನ CC ಯಿಂದ ನಗದು ಹಿಂಪಡೆಯಲು ಅವಕಾಶವಿಲ್ಲ
11. UPI ನಲ್ಲಿ CC ಗೆ ವಿರುದ್ಧವಾಗಿ ಮಾಡಿದ ಯಾವುದೇ ವಹಿವಾಟನ್ನು ನಿಮ್ಮ ಹಾಲಿ ಕ್ರೆಡಿಟ್ ಕಾರ್ಡ್ ಮಿತಿಯಿಂದ ಕಡಿತಗೊಳಿಸಲಾಗುತ್ತದೆ.
12. ಎಕ್ಸಿಸ್ ಬ್ಯಾಂಕ್ ಅಥವಾ ವಹಿವಾಟು ಪೂರ್ಣಗೊಂಡ UPI ಆ್ಯಪ್ ಅನ್ನು ಸಂಪರ್ಕಿಸುವ ಮೂಲಕ ಚಾರ್ಜ್ ಬ್ಯಾಕ್ ಅಥವಾ ಮರುಪಾವತಿಯನ್ನು ಆರಂಭಿಸಬಹುದು.
13. ಇಂಧನ ಸರ್ಚಾರ್ಜ್ ವಿಧಿಸಿದ್ದರೆ, ಅದನ್ನು ಆಯ್ದ ಎಕ್ಸಿಸ್ ಬ್ಯಾಂಕ್ ರುಪೇ (RuPay) ಕ್ರೆಡಿಟ್ ಕಾರ್ಡ್‌ಗಳಿಗೆ ಸಂಬಂಧಿಸಿ ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮನ್ನಾ ಮಾಡಲಾಗುತ್ತದೆ
14. ಈ ಸೌಲಭ್ಯವು ಹಣವನ್ನು ಸ್ವೀಕರಿಸಲು ಎಕ್ಸಿಸ್ ಬ್ಯಾಂಕ್ ರುಪೇ (RuPay) ಕ್ರೆಡಿಟ್ ಕಾರ್ಡ್‌ಗೆ ಸ್ವಾಭಾವಿಕ ಆಯ್ಕೆಯಾಗಿ ಸ್ವೀಕರಿಸುವುದಿಲ್ಲ

15. ಎಕ್ಸಿಸ್ ಬ್ಯಾಂಕ್ ರುಪೇ (RuPay) ಕ್ರೆಡಿಟ್ ಕಾರ್ಡ್ ನವೀಕರಣದ ಸಂದರ್ಭದಲ್ಲಿ, ಬಳಕೆದಾರರು ನವೀಕರಿಸಿದ ಕ್ರೆಡಿಟ್ ಕಾರ್ಡ್ ವಿವರಗಳ ಜೊತೆಗೆ UPI ಆ್ಯಪ್‌ನಲ್ಲಿ ಮತ್ತೆ ನೋಂದಾಯಿಸಿಕೊಳ್ಳಬೇಕು

16. ಸಾಧನವನ್ನು ಬದಲಾಯಿಸಿದಲ್ಲಿ, ಬಳಕೆದಾರರು ಅದೇ ಸಿಮ್ ಮೂಲಕ UPI ಆ್ಯಪ್‌ನಲ್ಲಿ ಕ್ರೆಡಿಟ್ ಕಾರ್ಡ್‌ಗಾಗಿ ಪುನಃ ನೋಂದಾಯಿಸಿಕೊಳ್ಳಬೇಕು. ಆಗ ಹಿಂದಿನ ಸಾಧನದಲ್ಲಿ ಸ್ಥಾಪಿಸಲಾದ ಆ್ಯಪ್ ಅನ್ನು ಡಿ-ರಿಜಿಸ್ಟರ್ ಮಾಡಲಾಗುತ್ತದೆ.

17. MCC 6513 ಮೂಲಕ ಗುರುತಿಸಲಾದ ಪ್ರತಿ ಬಾಡಿಗೆ ಪಾವತಿಗೆ, UPI ವಹಿವಾಟಿನ ಮೊತ್ತದ CC ಯ ಮೇಲೆ ಪ್ರತಿ ವಹಿವಾಟಿಗೆ 1500 ರೂಪಾಯಿಗಳ ಬಾಡಿಗೆ ಸರ್ಚಾರ್ಜ್ ಅನ್ನು ವಿಧಿಸಲಾಗುತ್ತದೆ.

## F) ಕ್ರೆಡಿಟ್ ಕಾರ್ಡ್ ಬಳಕೆ

- ವೈಯಕ್ತಿಕ ವೆಚ್ಚಗಳು ಮತ್ತು ಉದ್ದೇಶಗಳಿಗಾಗಿ ಮಾತ್ರ ಕ್ರೆಡಿಟ್ ಕಾರ್ಡ್ ಅನ್ನು ವಿತರಿಸಲಾಗುತ್ತದೆ. ಯಾವುದೇ ಹಣಕಾಸಿನ ಪ್ರಯೋಜನಗಳನ್ನು ಪಡೆಯಲು, ವಾಣಿಜ್ಯ ಅಥವಾ ವ್ಯವಹಾರ ಉದ್ದೇಶಗಳಿಗಾಗಿ ಮತ್ತು ಮರು ಮಾರಾಟ ಮಾಡುವುದಕ್ಕಾಗಿ ಯಾವುದನ್ನೂ ಖರೀದಿಸಲು ಕಾರ್ಡ್‌ದಾರರು ತಮ್ಮ ಕ್ರೆಡಿಟ್ ಕಾರ್ಡ್ ಬಳಸಬಾರದು. ಕ್ರೆಡಿಟ್ ಕಾರ್ಡ್ ಅನ್ನು ಕಾನೂನುಬದ್ಧ, ಪ್ರಾಮಾಣಿಕ ಮತ್ತು ವೈಯಕ್ತಿಕ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕು ಮತ್ತು ಯಾವುದೇ ಅಕ್ರಮ ಹಣ ವರ್ಗಾವಣೆ, ಸಮಾಜ ವಿರೋಧಿ ಅಥವಾ ಊಹಾತ್ಮಕ ಚಟುವಟಿಕೆಗಳಿಗೆ ಬಳಸಬಾರದು ಅಥವಾ ವ್ಯವಹಾರದಲ್ಲಿ ವಾಣಿಜ್ಯಿಕವಾಗಿ (ಉದಾ. ಕಾರ್ಯವಾಗಿ ಬಂಡವಾಳದ ಉದ್ದೇಶಗಳಿಗೆ) ಬಳಸಬಾರದು.
- ಸೇರ್ಪಡೆ / ವಾರ್ಷಿಕ ಶುಲ್ಕ, ವಿದೇಶೀ ವಿನಿಮಯ ಮಾರ್ಕ್‌ಅಪ್, GST/VAT, DCC, ಇಂಧನ ಸರ್ಚಾರ್ಜ್, ವಿಳಂಬ ಪಾವತಿ ಶುಲ್ಕ, ಬಡ್ಡಿಯನ್ನು ಡೆಬಿಟ್ ಮಾಡುವುದು, ಬಾಡಿಗೆ ಸರ್ಚಾರ್ಜ್ ಶುಲ್ಕ, ಚೆಕ್ ಬೌನ್ಸ್ ಶುಲ್ಕವನ್ನು ಹೊರತುಪಡಿಸಿ ಎಲ್ಲ ಖರ್ಚುಗಳನ್ನು ಮೈಲಿಗಲ್ಲು ಖರ್ಚುಗಳಿಗಾಗಿ ಪರಿಗಣಿಸಲಾಗುತ್ತದೆ.
- ಕಾರ್ಡ್ ಸದಸ್ಯರು ತಮ್ಮ ಕ್ರೆಡಿಟ್ ಕಾರ್ಡ್‌ನಲ್ಲಿ ಹೆಚ್ಚುವರಿ ಪಾವತಿಯನ್ನು ಮಾಡುವುದಕ್ಕಾಗಿ ಮತ್ತು ಹೆಚ್ಚಿನ ಮೌಲ್ಯದ ವಹಿವಾಟುಗಳನ್ನು ಮಾನ್ಯ ಮಾಡುವುದಕ್ಕಾಗಿ ಮಂಜೂರಾದ ತಮ್ಮ ಕ್ರೆಡಿಟ್ ಮಿತಿಯನ್ನು ಕೃತಕವಾಗಿ ಹೆಚ್ಚಿಸಲು ಅನುಮತಿಯಿಲ್ಲ. ಅಗತ್ಯ ಬಿದ್ದರೆ ಕ್ರೆಡಿಟ್ ಮಿತಿಯನ್ನು ಹೆಚ್ಚಿಸಲು ಕಾರ್ಡ್‌ದಾರರು ಬ್ಯಾಂಕ್ ಅನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ.
- RBI ನಿರ್ದೇಶನದ ಪ್ರಕಾರ ನಿರ್ಬಂಧಿತ MCC ಕೋಡ್‌ಗಳಲ್ಲಿ ವಹಿವಾಟುಗಳನ್ನು ನಡೆಸಿರುವುದನ್ನು ಗಮನಿಸಿದರೆ, ಕ್ರೆಡಿಟ್ ಕಾರ್ಡ್ ಅನ್ನು ನಿರ್ಬಂಧಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ.
- ಕ್ರೆಡಿಟ್ ಕಾರ್ಡ್ ಅನ್ನು ನಿಯಂತ್ರಕ ಮಾರ್ಗಸೂಚಿಗಳು, ನಿಯಮಗಳು ಮತ್ತು ಷರತ್ತುಗಳು ಮತ್ತು ಅನ್ವಯವಾಗುವ ಬ್ಯಾಂಕಿನ ನೀತಿಗಳ ಪ್ರಕಾರ ಬಳಸಲಾಗುತ್ತಿದೆ ಎಂದು ಖಚಿತಪಡಿಸಿಕೊಳ್ಳಲು, ಒಂದು ಸ್ಟೇಟ್‌ಮೆಂಟ್ ಸೈಕಲ್‌ನಲ್ಲಿ ಮಂಜೂರಾದ ಮಿತಿಯನ್ನು ಮೀರಿ, ಮತ್ತೊಂದು ಕ್ರೆಡಿಟ್ ಕಾರ್ಡ್ ಮರುಪಾವತಿ ಮಾಡಲು ಕೆಲವು ಆಯ್ದ ವ್ಯಾಪಾರಿಗಳಲ್ಲಿ

ಅಸಾಮಾನ್ಯ ಅಥವಾ ಅತಿಯಾದ ಬಳಕೆ, ಸಾಲಗಳು, ಉಳಿತಾಯ ಖಾತೆಗೆ ಹಣವನ್ನು ವರ್ಗಾಯಿಸುವುದು, ವ್ಯಾಪಾರಿ ಮತ್ತು/ಅಥವಾ ವೈಯಕ್ತಿಕವಲ್ಲದ/ವ್ಯಾಪಾರ ಸಂಬಂಧಿತ ಅಗತ್ಯಗಳಿಗಾಗಿ ಸಂಭಾವ್ಯ ಒಡಂಬಡಿಕೆ, ಅತಿಯಾದ ಬಳಕೆ/ಅನವಶ್ಯಕ ರಿವಾರ್ಡ್ ಪಾಯಿಂಟ್‌ಗಳು/ಕೊಡುಗೆಗಳು/ಕಾರ್ಯಕ್ರಮಗಳ ದುರುಪಯೋಗ ಮುಂತಾದ ರೀತಿಗಳಲ್ಲಿ ಕ್ರೆಡಿಟ್ ಮಿತಿಯ ಅತಿಯಾದ ಬಳಕೆಯಾಗಿದೆಯೇ ಎಂದು ಗುರುತಿಸಲು ಕ್ರೆಡಿಟ್ ಕಾರ್ಡ್ ಬಳಕೆಯ ಮೇಲೆ ಆವರ್ತಕ ಪರಿಶೀಲನೆಗಳನ್ನು ನಡೆಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ. ಅಂತಹ ಸನ್ನಿವೇಶದಲ್ಲಿ, ಸಂಬಂಧಪಟ್ಟ ಕ್ರೆಡಿಟ್ ಕಾರ್ಡ್ ಮತ್ತು ಅದರ ಹೆಚ್ಚುವರಿ/ಆಡ್-ಆನ್ ಕಾರ್ಡ್‌ಗಳನ್ನು ರದ್ದುಗೊಳಿಸುವ ಹಕ್ಕನ್ನು ಎಕ್ಸಿಸ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಚಲಾಯಿಸಬಹುದು ಮತ್ತು ಗ್ರಾಹಕರ ಮಟ್ಟದಲ್ಲಿ ಗಳಿಸಿದ ಕ್ಯಾಶ್‌ಬ್ಯಾಕ್/ರಿವಾರ್ಡ್ ಪಾಯಿಂಟ್‌ಗಳನ್ನು ಕಾರ್ಡುದಾರರಿಗೆ ಯಾವುದೇ ಸೂಚನೆ ನೀಡದೆ ತಡೆಹಿಡಿಯಬಹುದು/ರದ್ದುಗೊಳಿಸಬಹುದು. ದೂರವಾಣಿ ಮೂಲಕ ಅಥವಾ ಔಪಚಾರಿಕ ಸಂವಹನದ ಯಾವುದೇ ಇತರ ವಿಧಾನಗಳ ಮೂಲಕ ಎಕ್ಸಿಸ್ ಬ್ಯಾಂಕ್ ನಿಮ್ಮನ್ನು ವಿಚಾರಿಸಿ, ಕ್ರೆಡಿಟ್ ಕಾರ್ಡ್ ವಹಿವಾಟುಗಳು, ಬಳಕೆಯ ಮಾದರಿ ಇತ್ಯಾದಿಗಳ ಬಗ್ಗೆ ವಿವರಗಳು, ಮಾಹಿತಿ, ಪುರಾವೆಗಳು ಇತ್ಯಾದಿಗಳನ್ನು ಪಡೆಯಬಹುದು. ಕಾರ್ಡ್‌ದಾರರು ತೃಪ್ತಿಕರವಲ್ಲದ ಪ್ರತಿಕ್ರಿಯೆಗಳನ್ನು ನೀಡಿದರೆ ಅಥವಾ ಯಾವುದೇ ಪ್ರತಿಕ್ರಿಯೆಗಳನ್ನು ನೀಡದಿದ್ದರೆ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ನಿರ್ಬಂಧಿಸಬಹುದು/ರದ್ದುಗೊಳಿಸಬಹುದು.

• ಕಾರ್ಡ್‌ದಾರರ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ಯಾವುದೇ ಕಾರಣಕ್ಕಾಗಿ ಯಾವುದೇ ಸಮಯದಲ್ಲಿ, ಪ್ರಾಥಮಿಕ ಕಾರ್ಡ್‌ದಾರ ಅಥವಾ ಬ್ಯಾಂಕ್ ರದ್ದುಗೊಳಿಸಿದರೆ, ಪ್ರತಿಫಲಗಳು/ ಕ್ಯಾಶ್‌ಬ್ಯಾಕ್ ಮತ್ತು ಬಳಕೆಯಾಗದೇ ಇರುವ ಎಲ್ಲ ಪ್ರತಿಫಲ/ ಕ್ಯಾಶ್‌ಬ್ಯಾಕ್‌ಗಳನ್ನು ಗಳಿಸುವುದರಿಂದ ಪ್ರಾಥಮಿಕ ಕಾರ್ಡ್‌ದಾರನು ತಕ್ಷಣವೇ ಅನರ್ಹನಾಗುತ್ತಾನೆ, ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ಸ್ವಯಂಪ್ರೇರಿತವಾಗಿ ಅಥವಾ ಅನೈಚ್ಛಿಕವಾಗಿ ರದ್ದುಗೊಳಿಸಿದ ತಕ್ಷಣ ಸಂಚಿತ ಸ್ವಯಂಚಾಲಿತವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

• ನಿಯಮಗಳು ಮತ್ತು ಷರತ್ತುಗಳ ಉಲ್ಲಂಘನೆಗಾಗಿ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ಬ್ಯಾಂಕ್ ರದ್ದುಗೊಳಿಸಿದ ಸಂದರ್ಭಗಳಲ್ಲಿ ಕಾರ್ಡ್‌ದಾರರಿಗೆ NOC ನೀಡಲಾಗುವುದಿಲ್ಲ.

• ಸಂಬಂಧಿತ ದಿನಾಂಕದಂದು, ಕಾರ್ಡ್ ವಾಪಸ್ ಪಡೆದಿದ್ದರೆ ಅಥವಾ ರದ್ದುಗೊಳಿಸಿದ್ದರೆ ಅಥವಾ ರದ್ದುಗೊಳಿಸಲು ಕಾರಣರಾಗಿದ್ದರೆ ಅಥವಾ ಕಾರ್ಡ್ ಸದಸ್ಯರ ಖಾತೆಯು ಅಪರಾಧ ಖಾತೆಯಾಗಿದ್ದರೆ ಪರಿವರ್ತನೆಯ ಮೂಲಕ ರಿವಾರ್ಡ್ ಪಾಯಿಂಟ್ಸ್ ಸಂಗ್ರಹಣೆ ಅಥವಾ ಬಳಕೆಯನ್ನು ಅನುಮತಿಸಲಾಗುವುದಿಲ್ಲ.

• ಬ್ಯಾಂಕ್, ಯಾವುದೇ ಸಮಯದಲ್ಲಿ ಮುನ್ಸೂಚನೆ ಇಲ್ಲದೆ, ಅಥವಾ ಯಾವುದೇ ಕಾರಣವನ್ನು ತಿಳಿಸದೆ, ವ್ಯಾಪಾರಿ ಸ್ಥಾಪನೆಯಲ್ಲಿ ಒಂದು ಖರ್ಚಿಗಾಗಿ ದೃಢೀಕರಣವನ್ನು ನಿರಾಕರಿಸಬಹುದು ಮತ್ತು / ಅಥವಾ ಕಾರ್ಡ್ ಬಳಸುವ ಕಾರ್ಡ್‌ದಾರ ಸದಸ್ಯನ ಸಾಮರ್ಥ್ಯವನ್ನು ನಿರ್ಬಂಧಿಸಬಹುದು ಅಥವಾ ಮುಂದೂಡಬಹುದು ಮತ್ತು/ಅಥವಾ ಕಾರ್ಡ್ ಅನ್ನು ಅಮಾನತು ಮಾಡಬಹುದು ಅಥವಾ ರದ್ದುಗೊಳಿಸಬಹುದು. ಸಾಲ ಅಥವಾ ವ್ಯವಹಾರದ ಅಪಾಯದ ಸರಿಯಾದ ನಿರ್ವಹಣೆಗಾಗಿ ಅಥವಾ ಕಾರ್ಡ್ ಅಥವಾ ಕಾರ್ಡ್ ಖಾತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರೆ ಅಥವಾ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಸಮಂಜಸವಾಗಿ ನಂಬಿದರೆ, ATM,

ವ್ಯಾಪಾರಿ ಸಂಸ್ಥೆಯ ಮೂಲಕ ಅಥವಾ ಸ್ವತಃ ಬ್ಯಾಂಕ್ ಕಾರ್ಡ್ ಅನ್ನು ಮತ್ತೆ ಸ್ವಾಧೀನಕ್ಕೆ ಪಡೆಯಬಹುದು/ತನ್ನಲ್ಲಿ ಉಳಿಸಿಕೊಳ್ಳಬಹುದು.

• ನಿಮಗೆ ಯಾವುದೇ ರೀತಿಯಲ್ಲಿ ಜವಾಬ್ದಾರರಾಗದೆ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಈ ಕಾರ್ಡ್ ಅನ್ನು ಅಮಾನತು ಮಾಡಬಹುದು / ಹಿಂಪಡೆಯಬಹುದು. ಕಾರ್ಡ್ ಮತ್ತು ಈ ಕಾರ್ಡ್‌ದಾರ ಸದಸ್ಯರ ಒಪ್ಪಂದದ ರದ್ದತಿಯು ಅದರೊಂದಿಗೆ ಲಗತ್ತಿಸಲಾದ ಸವಲತ್ತುಗಳು, ಪ್ರಯೋಜನಗಳು ಮತ್ತು ಸೌಲಭ್ಯಗಳನ್ನು ಸ್ವಯಂಚಾಲಿತವಾಗಿ ಮುಕ್ತಾಯಗೊಳಿಸುತ್ತದೆ.

**G) ಟರ್ನ್‌ಅರೌಂಡ್ ಟೈಮ್ (TAT) ನಲ್ಲಿ ಕ್ಲಿಯರಿಂಗ್ ಜೊತೆಗೆ ಪಾವತಿಯ ವಿಧಾನ**

ಕಾರ್ಡ್ ಖಾತೆಗೆ ಪಾವತಿಗಳನ್ನು ಈ ಕೆಳಗಿನ ಯಾವುದೇ ವಿಧಾನಗಳಲ್ಲಿ ಮಾಡಬಹುದು:

**1.** ನಗದು*: ಕಾರ್ಡುದಾರನು ಕಾರ್ಡ್ ಪಾವತಿಗೆ ಎಕ್ಸಿಸ್ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ ಹಣವನ್ನು ಠೇವಣಿ ಮಾಡಬಹುದು. ಶಾಖೆಗಳಲ್ಲಿ ಇಂತಹ ಪಾವತಿಗಳು ಪ್ರತಿಯೊಂದು ಪಾವತಿ ವಹಿವಾಟಿಗೆ ರೂ. 100 ಶುಲ್ಕವನ್ನು ಆಕರಿಸಬಹುದು.
ನಗದು ಪಾವತಿಯ ಕ್ಲಿಯರೆನ್ಸ್‌ಗಾಗಿ TAT – ಅದೇ ದಿನ.

**2.** ಚೆಕ್ / ಡ್ರಾಫ್ಟ್*: “Axis Bank Credit Card No. XXXXXXXXXXXXXXXX" ಹೆಸರಿನಲ್ಲಿ ಚೆಕ್ ಅಥವಾ ಡ್ರಾಫ್ಟ್ ಅನ್ನು ರಚಿಸಿ ಮತ್ತು ಅದನ್ನು MINC / SKYFIN ಬಾಕ್ಸ್‌ಗಳಂತಹ ಕಲೆಕ್ಷನ್ ಬಾಕ್ಸ್‌ಗಳಲ್ಲಿ ಹಾಕಿ/ ಎಕ್ಸಿಸ್ ಬ್ಯಾಂಕ್ ಶಾಖೆಗಳ ಕೌಂಟರ್‌ನಲ್ಲಿ ನೀಡಿ. ಪರಸ್ಥಳಗಳ ಚೆಕ್‌ಗಳು/ ಡ್ರಾಫ್ಟ್‌ಗಳು, ಅಂದರೆ ನಿರ್ದಿಷ್ಟ ನಗರಗಳನ್ನು ಹೊರತುಪಡಿಸಿ ಇತರ ನಗರಗಳಲ್ಲಿ ಪಾವತಿಸಬೇಕಾದ ಚೆಕ್‌ಗಳು / ಡ್ರಾಫ್ಟ್‌ಗಳಿಗೆ (ಕಾಲಕಾಲಕ್ಕೆ ಬ್ಯಾಂಕ್ ನಿರ್ಧರಿಸಿದಂತಹ ನಿರ್ದಿಷ್ಟ ನಗರಗಳ ಪಟ್ಟಿ, ವಿನಂತಿಯ ಮೇರೆಗೆ ಲಭ್ಯವಿದೆ) ಸಂಸ್ಕರಣಾ ಶುಲ್ಕವನ್ನು ವಿಧಿಸಬಹುದು.
ಎಕ್ಸಿಸ್ ಬ್ಯಾಂಕ್ ಚೆಕ್ ಕ್ಲಿಯರೆನ್ಸ್‌ಗಾಗಿ TAT – 1 ಕೆಲಸದ ದಿನ. ಬೇರೊಂದು ಬ್ಯಾಂಕ್‌ನ ಚೆಕ್ ಕ್ಲಿಯರೆನ್ಸ್‌ಗಾಗಿ TAT – ನಗದೀಕರಣದ ಆಧಾರದ ಮೇಲೆ 3-5 ಕೆಲಸದ ದಿನಗಳು (ಪರಸ್ಥಳದ ಚೆಕ್‌ಗಳ ಕ್ಲಿಯರೆನ್ಸ್‌ಗೆ ಹೆಚ್ಚುವರಿ ದಿನ ಬೇಕಾಗುತ್ತದೆ. ದಯವಿಟ್ಟು ಶಾಖೆಯಲ್ಲಿ ಪರಿಶೀಲಿಸಿ).

* ಒಂದು ವೇಳೆ ಕ್ರೆಡಿಟ್ ಕಾರ್ಡ್ ಪಾವತಿ ದಿನಾಂಕ 2 ಮತ್ತು 4ನೇ ಶನಿವಾರ ಅಥವಾ ಭಾನುವಾರದಂದು ಬರುತ್ತಿದ್ದರೆ, ಚೆಕ್/ ನಗದು ಪಾವತಿಯನ್ನು ಸ್ವೀಕರಿಸಲು ಶಾಖೆಗಳು ಮುಚ್ಚಿರುತ್ತವೆ.

**3. ಲಿಂಕ್ ಮಾಡಿರುವ ಎಕ್ಸಿಸ್ ಬ್ಯಾಂಕ್ ಉಳಿತಾಯ ಖಾತೆಯ ಮೂಲಕ ಇಂಟರ್ನೆಟ್ ಪಾವತಿ:** ಎಕ್ಸಿಸ್ ಬ್ಯಾಂಕ್ ವೆಬ್‌ಸೈಟ್ ಮೂಲಕ ಆನ್‌ಲೈನ್ ಪಾವತಿಯನ್ನು ಕಾರ್ಡ್‌ದಾರರು ಮಾಡಬಹುದು. ಲಾಗ್ ಆನ್ ಮಾಡಿ: www.axisbank.com. ಕ್ಲಿಯರೆನ್ಸ್‌ಗಾಗಿ TAT – 1 ಕೆಲಸದ ದಿನ.

**4. ಆಟೋ-ಡೆಬಿಟ್:** ಪ್ರತಿ ತಿಂಗಳು ಪಾವತಿಗೆ ನಿಗದಿಯಾಗಿರುವ ದಿನಾಂಕದಂದು ಅಂತಹ ಖಾತೆಗಳಿಂದ ಪಾವತಿಯನ್ನು ಡೆಬಿಟ್ ಮಾಡಲು ಲಿಖಿತ ಸೂಚನೆ ನೀಡುವ ಮೂಲಕ ಕಾರ್ಡ್‌ದಾರರು ಉಳಿತಾಯ ಖಾತೆಯಿಂದ ನೇರವಾಗಿ ಪಾವತಿಸಬಹುದು. ಒಂದು ವೇಳೆ ಪಾವತಿ ದಿನಾಂಕವು ಭಾನುವಾರವಾದರೆ,

ಮುಂದಿನ ಕೆಲಸದ ದಿನದಂದು ಖಾತೆಯಿಂದ ಆ ಮೊತ್ತವನ್ನು ಡೆಬಿಟ್ ಮಾಡಲಾಗುತ್ತದೆ. ಕ್ಲಿಯರೆನ್ಸ್‌ಗಾಗಿ TAT – 1 ಕೆಲಸದ ದಿನ.

5. **ಕ್ಲಿಕ್ ಟು ಪೇ/ NEFT / VMT:** ನಿಮ್ಮ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಾಕಿಗಳನ್ನು ನಿಮ್ಮ ಯಾವುದೇ ಇತರ ಬ್ಯಾಂಕ್ ಉಳಿತಾಯ ಖಾತೆಗಳಿಂದ ಕ್ಲಿಕ್ ಟು ಪೇ/NEFT/V\MT ವಿಧಾನಗಳನ್ನು ಬಳಸಿ ಪಾವತಿಸಿ.
   ಕ್ಲಿಕ್ ಟು ಪೇ ಕ್ಲಿಯರೆನ್ಸ್‌ಗೆ TAT - 3 ಕೆಲಸದ ದಿನಗಳು.
   NEFT ಕ್ಲಿಯರೆನ್ಸ್‌ಗೆ TAT – 1 ಕೆಲಸದ ದಿನ.
   VMT ಕ್ಲಿಯರೆನ್ಸ್‌ಗೆ TAT – 2 ಕೆಲಸದ ದಿನಗಳು.

6. **ATM ಮೂಲಕ ಪಾವತಿ:** ನಿಮ್ಮ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಾಕಿಯನ್ನು ಯಾವುದೇ ಎಕ್ಸಿಸ್ ಬ್ಯಾಂಕ್ ATM ನಲ್ಲಿ ನಿಮ್ಮ ಎಕ್ಸಿಸ್ ಬ್ಯಾಂಕ್ ಡೆಬಿಟ್ ಕಾರ್ಡ್ ಮೂಲಕ ಪಾವತಿಸಿ. ಕ್ಲಿಯರೆನ್ಸ್ ಗಾಗಿ TAT – 1 ಕೆಲಸದ ದಿನ.

7. **IMPS ಕ್ರೆಡಿಟ್ ಕಾರ್ಡ್ ಪಾವತಿ:** IMPS ಮೂಲಕ, ಕಾರ್ಡ್‌ದಾರರು ಯಾವುದೇ ಇತರ ಬ್ಯಾಂಕ್ ಮೊಬೈಲ್ ಆ್ಯಪ್‌ನಿಂದ ಯಾವುದೇ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗೆ ತಕ್ಷಣವೇ ಪಾವತಿ ಮಾಡಬಹುದು. ಮಲ್ಟಿಪಲ್ ಎಕ್ಸಿಸ್

   ಪಾವತಿಗಳನ್ನು ಮಾಡಲು ಕ್ರೆಡಿಟ್ ಕಾರ್ಡ್ ಖಾತೆಗಳನ್ನು ನಿಮ್ಮ ಮೊಬೈಲ್ ಆ್ಯಪ್‌ನಲ್ಲಿ ನೋಂದಾಯಿಸಬಹುದು. ಮತ್ತು ಯಾರು ಬೇಕಾದರೂ (ಸಹೋದ್ಯೋಗಿಗಳು / ಸ್ನೇಹಿತರು / ಸಂಗಾತಿ) ಈ ಸೌಲಭ್ಯದ ಮೂಲಕ ಯಾರದೇ ಕ್ರೆಡಿಕ್ ಕಾರ್ಡ್‌ಗೆ ಪಾವತಿಗಳನ್ನು ಮಾಡಬಹುದು.

   ಕ್ಲಿಯರೆನ್ಸ್‌ಗಾಗಿ TAT – ಅದೇ ದಿನ.

8. **ಮೂರನೇ ಪಕ್ಷದ ಚಾನೆಲ್‌ಗಳ ಮೂಲಕ ಪಾವತಿ:** ಮೇಲೆ ತಿಳಿಸಿದ ವಿಧಾನಗಳ ಮೂಲಕ ಕಾರ್ಡ್‌ದಾರರು ತಮ್ಮ ಕ್ರೆಡಿಟ್ ಕಾರ್ಡ್ ಬಾಕಿಗಳನ್ನು ಪಾವತಿಸುವಂತೆ ಎಕ್ಸಿಸ್ ಬ್ಯಾಂಕ್ ಶಿಫಾರಸು ಮಾಡುತ್ತದೆ. ಎಕ್ಸಿಸ್ ಬ್ಯಾಂಕ್ ಜೊತೆಗೆ ಸಂಬಂಧವಿಲ್ಲದ ಯಾವುದೇ 3ನೇ ಪಕ್ಷದ ಆ್ಯಪ್‌ಗಳು ಸೇರಿದಂತೆ ಇತರ ಚಾನಲ್‌ಗಳ ಮೂಲಕ ಮಾಡಿದ ಯಾವುದೇ ಕ್ರೆಡಿಟ್ ಕಾರ್ಡ್ ಪಾವತಿಯು ಕ್ಲಿಯರೆನ್ಸ್‌ಗೆ ಹೆಚ್ಚಿನ TAT ಹೊಂದಿರಬಹುದು. ನಿಗದಿತ ದಿನಾಂಕದೊಳಗೆ ಎಕ್ಸಿಸ್ ಬ್ಯಾಂಕ್‌ನಿಂದ ಹಣವನ್ನು ಸ್ವೀಕರಿಸದಿದ್ದರೆ ಕಾರ್ಡ್ ವಿಧದ ಮೇಲೆ ನಿಗದಿತ ದಂಡ ಶುಲ್ಕಗಳು ಅನ್ವಯವಾಗುತ್ತವೆ. ಅಂಗಸಂಸ್ಥೆಯಲ್ಲದ ಚಾನಲ್‌ಗಳ ಮೂಲಕ ಮಾಡಿದ ಪಾಲತಿಗಳು ಕಾರ್ಡ್‌ನಲ್ಲಿ ಪ್ರತಿಬಿಂಬಿಸದಿದ್ದರೆ/ಪ್ರತಿಬಿಂಬಿಸಲು ವಿಳಂಬವಾದರೆ ಅದರಿಂದ ಉಂಟಾಗುವ ಯಾವುದೇ ತಗಾದೆಗಳಿಗೆ, ಗ್ರಾಹಕರು ಆಯಾ ಚಾನೆಲ್‌ಗಳನ್ನು ನೇರವಾಗಿ ಸಂಪರ್ಕಿಸಬಹುದು.

9. **ಅನಿವಾಸಿ ಕ್ರೆಡಿಟ್ ಕಾರ್ಡ್ ಹೊಂದಿರುವವರಿಗೆ ಪಾವತಿ:** ಬ್ಯಾಂಕ್ ತನ್ನ ಅನಿವಾಸಿ ಕ್ರೆಡಿಟ್ ಕಾರ್ಡ್ ಹೊಂದಿರುವವರಿಗೆ ಅಂತಾರಾಷ್ಟ್ರೀಯ ಕ್ರೆಡಿಟ್ ಕಾರ್ಡ್‌ನ ಸೌಲಭ್ಯವನ್ನು ಒದಗಿಸುತ್ತದೆ ಮತ್ತು ಅಂತಹ ಕ್ರೆಡಿಟ್ ಕಾರ್ಡ್‌ಗಳಲ್ಲಿ ಎಕ್ಸಿಸ್ ಬ್ಯಾಂಕ್ NRE ಖಾತೆಯನ್ನು ಬಳಸಿಕೊಂಡು ಪಾವತಿಗಳನ್ನು

ಮಾಡುವುದನ್ನು ಕಡ್ಡಾಯಗೊಳಿಸುತ್ತದೆ. ಅನಿವಾಸಿ ಕ್ರೆಡಿಟ್ ಕಾರ್ಡ್ ಹೊಂದಿರುವವರಿಗೆ ಅಂತಹ ಎಕ್ಸಿಸ್ ಬ್ಯಾಂಕ್ NRE ಖಾತೆಯಿಂದ ಆಟೋ ಡೆಬಿಟ್ ಕಡ್ಡಾಯವಾಗಿದೆ. ಎಕ್ಸಿಸ್ ಬ್ಯಾಂಕ್ NRO ಖಾತೆಯಿಂದ ಪಾವತಿಸಬೇಕಿದ್ದರೆ, ನೀವು NRO ಖಾತೆಯಿಂದ ಪಾವತಿ ಮಾಡಲು ಬಯಸುವ ಪ್ರತಿ ಸಲವೂ ನಮೂನೆ 15 CA/CB ಮತ್ತು NRO ಬ್ಯಾಂಕ್ ಖಾತೆ ಚೆಕ್ ಸಹಿತ ನಿರ್ದಿಷ್ಟ ದಾಖಲೆಗಳ ಅಗತ್ಯವಿದೆ. ಅಗತ್ಯವಿರುವ ದಾಖಲೆಗಳನ್ನು ಸಲ್ಲಿಸದೆ NRE ಅಲ್ಲದ ಮೂಲದಿಂದ ಪಾವತಿ ಮಾಡಿದಲ್ಲಿ, ಅಂತಹ ಸಂದರ್ಭದಲ್ಲಿ BRE ಅಲ್ಲದ ಮೂಲವನ್ನು ಸ್ಥಾಪಿಸಲು ಬ್ಯಾಂಕ್‌ಗೆ ಸಾಧ್ಯವಾದರೆ ಅಥವಾ NRE ಅಲ್ಲದ ಮೂಲದಿಂದ ಬಂದಿದೆ ಎಂದು ನಂಬಲು ಕಾರಣವನ್ನು ಹೊಂದಿದ್ದರೆ, ಅಂತಹ ದಾಖಲೆಗಳು ಬ್ಯಾಂಕ್‌ಗೆ ಲಭ್ಯವಾಗುವವರೆಗೆ ಕಾರ್ಡ್‌ನಲ್ಲಿ ಅಂತಾರಾಷ್ಟ್ರೀಯ ಬಳಕೆಯನ್ನು ನಿಷ್ಕ್ರಿಯಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸುತ್ತದೆ. ಅಂತಹ ದಾಖಲೆಗಳು ಇಲ್ಲದಿದ್ದರೆ ಹಾಗೂ ನಿಗದಿತ ಸಮಯದೊಳಗೆ ಲಭ್ಯವಾಗುವಂತೆ ಮಾಡದಿದ್ದರೆ, 'ಮಾಸ್ಟರ್ ಡೈರೆಕ್ಷನ್ - ಕಾಂಪೌಂಡಿಂಗ್ ಆಫ್ ಕಾಂಟ್ರಾವೆನ್ಶನ್ಸ್ ಅಂಡರ್ ಫೆಮಾ (FEMA), 1999'(FED ಮಾಸ್ಟರ್ ಡೈರೆಕ್ಷನ್ ಸಂಖ್ಯೆ 4/2015-16 ದಿನಾಂಕ: ಜನವರಿ 01, 2016 ಮತ್ತು ನವೀಕರಿಸಿದ ದಿನಾಂಕ: ಜನವರಿ 04, 2021) ಇದರಲ್ಲಿ ಒಳಗೊಂಡಿರುವ ಕಾಂಪೌಂಡಿಂಗ್ ಅನ್ನು ಸಲ್ಲಿಸುವಂತೆ ಗ್ರಾಹಕರಿಗೆ ಬ್ಯಾಂಕ್ ಆದೇಶಿಸಬಹುದು. ಕಾಂಪೌಂಡಿಂಗ್ ಕುರಿತು ಇನ್ನಷ್ಟು ತಿಳಿದುಕೊಳ್ಳಲು ನೀವು ಕೆಳಗಿನ ಲಿಂಕ್ ಬಳಸಬಹುದು. https://m.rbi.org.in/SCRIPTs/FAQView.aspx?Id=80.

### H) ಕಾರ್ಡ್ ಸದಸ್ಯತ್ವ ಮುಕ್ತಾಯ / ಶರಣಾಗತಿ / ರದ್ದತಿ

ಕಾರ್ಡ್‌ದಾರರು ಯಾವುದೇ ಸಮಯದಲ್ಲಿ, ಯಾವುದೇ ಮುನ್ಸೂಚನೆ ನೀಡಿ ಅಥವಾ ನೀಡದೆಯೂ ಕಾರ್ಡ್ ಖಾತೆಯನ್ನು ಅಂತ್ಯಗೊಳಿಸಲು / ಶರಣಾಗತಿಗೊಳಿಸಲು ಆಯ್ಕೆ ಮಾಡಬಹುದು. ದುರುಪಯೋಗವನ್ನು ತಪ್ಪಿಸಲು, ಹೊಲೊಗ್ರಾಮ್ ಮತ್ತು ಮ್ಯಾಗ್ನೆಟಿಕ್ ಸ್ಟ್ರಿಪ್‌ಗಳನ್ನು ಶಾಶ್ವತವಾಗಿ ನಾಶ ಮಾಡಲು ಕ್ರೆಡಿಟ್ ಕಾರ್ಡ್ ಅನ್ನು ನಾಲ್ಕು ತುಂಡುಗಳಾಗಿ ಕತ್ತರಿಸಲು ಸೂಚಿಸಲಾಗುತ್ತದೆ. ಕಾರ್ಡ್ ಸಂಖ್ಯೆಯನ್ನು ಪೂರ್ಣವಾಗಿ ಸೂಚಿಸುವ ಮೂಲಕ ಅಥವಾ ಗ್ರಾಹಕರ ಸೇವಾ ಕೇಂದ್ರಕ್ಕೆ ಕರೆ ಮಾಡುವ ಮೂಲಕ ಅಥವಾ ಗ್ರಾಹಕ ಸೇವಾ ಇ-ಮೇಲ್ IDಗೆ ಬರೆಯುವ ಮೂಲಕ ಕಾರ್ಡ್‌ದಾರರು ಯಾವುದೇ ಸಮಯದಲ್ಲಿ ಕಾರ್ಡ್ ಸದಸ್ಯತ್ವವನ್ನು ಕೊನೆಗೊಳಿಸಬಹುದು. ಎಕ್ಸಿಸ್ ಬ್ಯಾಂಕ್ ಹೇಳಿದ ಕಾರ್ಡ್ ಖಾತೆಗೆ ಸಂಬಂಧಿಸಿದಂತೆ ಬಾಕಿ ಇರುವ ಮತ್ತು ಪಾವತಿಸಬೇಕಿರುವ ಪೂರ್ಣ ಮೊತ್ತವನ್ನು ಪಾವತಿಸಿದ ಮೇಲಷ್ಟೇ ಮುಕ್ತಾಯವು ಕಾರ್ಯರೂಪಕ್ಕೆ ಬರುತ್ತದೆ. ಕ್ರೆಡಿಟ್ ಕಾರ್ಡ್ ಪ್ರೋಗ್ರಾಂ ಮುಚ್ಚಿದ ಸಂದರ್ಭದಲ್ಲಿ ಅಥವಾ ಕ್ರೆಡಿಟ್ ಕಾರ್ಡ್ ನವೀಕರಣದ ಸಮಯದಲ್ಲಿ, ಕಾರ್ಡ್‌ದಾರರು ಸದ್ಯ ಹೊಂದಿರುವ ಕಾರ್ಡ್ ಪ್ರಕಾರಕ್ಕಿಂತ ಭಿನ್ನವಾದ ಕಾರ್ಡ್ ಪ್ರಕಾರವನ್ನು ತನ್ನ ಸ್ವಂತ ವಿವೇಚನೆಯಿಂದ ಒದಗಿಸುವ ಹಕ್ಕನ್ನು ಎಕ್ಸಿಸ್ ಬ್ಯಾಂಕ್ ಹೊಂದಿದೆ. ಯಾವುದೇ ಸಮಯದಲ್ಲಿ ಯಾವುದೇ ಕ್ರೆಡಿಟ್ ಕಾರ್ಡ್‌ನ ಕ್ರೆಡಿಟ್ ಮಿತಿಗಳು ಮತ್ತು ನಗದು ಮಿತಿಗಳು ಎಕ್ಸಿಸ್ ಬ್ಯಾಂಕ್‌ನ ಸ್ವಂತ ವಿವೇಚನೆಗೆ ಅನುಗುಣವಾಗಿರುತ್ತವೆ. ಮುಚ್ಚುವ / ನವೀಕರಿಸುವ ಸಮಯದಲ್ಲಿ ಒದಗಿಸಲಾದ ಯಾವುದೇ ಬದಲಿ ಕಾರ್ಡ್‌ಗೆ ಕಾರ್ಡ್ ಅಪ್ಲಿಕೇಶನ್ ಮಾನ್ಯವಾಗಿರುತ್ತದೆ.

ಒಂದು ವರ್ಷಕ್ಕಿಂತ ಹೆಚ್ಚು ಅವಧಿಗೆ ಬಳಸದಿದ್ದರೆ ಆ ಕ್ರೆಡಿಟ್ ಕಾರ್ಡ್ ಅನ್ನು ಮುಚ್ಚುವ ಪ್ರಕ್ರಿಯೆಯನ್ನು ಬ್ಯಾಂಕ್ ಪ್ರಾರಂಭಿಸುತ್ತದೆ. ಅಂತಹ ಸಂದರ್ಭಗಳಲ್ಲಿ, ಬ್ಯಾಂಕ್ ಗ್ರಾಹಕರನ್ನು ಸಂಪರ್ಕಿಸುತ್ತದೆ ಮತ್ತು ಸೂಚನೆಯಲ್ಲಿ ತಿಳಿಸಿದ ಅವಧಿಯೊಳಗೆ ಯಾವುದೇ ಉತ್ತರವನ್ನು ಸ್ವೀಕರಿಸದಿದ್ದರೆ, ಕಾರ್ಡ್‌ದಾರರು ಎಲ್ಲ ಬಾಕಿಗಳನ್ನು ಪಾವತಿಸುವುದಕ್ಕೆ ಒಳಪಟ್ಟು ಕಾರ್ಡ್ ಖಾತೆಯನ್ನು ಬ್ಯಾಂಕ್ ಮುಚ್ಚುತ್ತದೆ.

ಒಂದು ವೇಳೆ ಸ್ವಯಂಪ್ರೇರಿತ ಮುಚ್ಚುವಿಕೆಯ ಸಮಯದಲ್ಲಿ ಕಾರ್ಡ್‌ದಾರನು ನಕಾರಾತ್ಮಕ ರಿವಾರ್ಡ್ ಪಾಯಿಂಟ್‌ಗಳ ಶಿಲ್ಕು ಹೊಂದಿದ್ದರೆ, ಅಂತಹ ನಕಾರಾತ್ಮಕ ರಿವಾರ್ಡ್ ಪಾಯಿಂಟ್‌ಗಳಿಗೆ ಸಮಾನವಾದ ಮೌಲ್ಯವನ್ನು ಸ್ವಯಂಚಾಲಿತವಾಗಿ ಸ್ಟೇಟ್‌ಮೆಂಟ್ ಡೆಬಿಟ್ ಆಗಿ ಪರಿವರ್ತಿಸಲಾಗುತ್ತದೆ ಮತ್ತು ಅದನ್ನು ಯಾವುದೇ ಇತರ ಬಾಕಿಗಳ ಜೊತೆಗೆ ಕಾರ್ಡ್‌ದಾರನು ಪಾವತಿಸಬೇಕಾಗುತ್ತದೆ. ಕಾರ್ಡ್ ಖಾತೆಯಲ್ಲಿ ಬಾಕಿ ಇರುವ ಎಲ್ಲ ಮೊತ್ತವನ್ನು ಪಾವತಿಸಿದ ಮೇಲಷ್ಟೇ ಮುಕ್ತಾಯವು ಜಾರಿಗೆ ಬರುತ್ತದೆ. ವಾರ್ಷಿಕ, ಸೇರ್ಪಡೆ ಅಥವಾ ನವೀಕರಣ ಶುಲ್ಕಗಳನ್ನು ಪ್ರೊ-ರೇಟಾ ಆಧಾರದ ಮೇಲೆ ಮರುಪಾವತಿಸುವುದಿಲ್ಲ.

ಉದಾಹರಣೆ-ಮುಚ್ಚುವ ಸಮಯದಲ್ಲಿ ನಕಾರಾತ್ಮಕ ರಿವಾರ್ಡ್ ಪಾಯಿಂಟ್ಸ್ ಶಿಲ್ಕು: -1000

ಮುಚ್ಚುವ ಸಮಯದಲ್ಲಿ, -1000 ನಕಾರಾತ್ಮಕ ರಿವಾರ್ಡ್ ಪಾಯಿಂಟ್ ಶಿಲ್ಕನ್ನು 200 ರೂ.ಗಳ ಸ್ಟೇಟ್‌ಮೆಂಟ್ ಡೆಬಿಟ್ ಆಗಿ ಸ್ವಯಂಚಾಲಿತವಾಗಿ ಪರಿವರ್ತಿಸಲಾಗುತ್ತದೆ, ಅಂದರೆ, 1000 ನಕಾರಾತ್ಮಕ ರಿವಾರ್ಡ್ ಪಾಯಿಂಟ್‌ಗಳು X ಪ್ರತಿ ರಿವಾರ್ಡ್ ಪಾಯಿಂಟ್‌ಗೆ ರೂ 0.20 (ಈ ಪರಿವರ್ತನೆ ಮೌಲ್ಯವು ವಿಭಿನ್ನ ಕಾರ್ಡ್ ಪ್ರಕಾರಗಳಿಗೆ ಅನುಗುಣವಾಗಿ ಬದಲಾಗಬಹುದು). ಈ ಮೊತ್ತವನ್ನು ಕಾರ್ಡುದಾರರ ಖಾತೆಗೆ ವಿಧಿಸಲಾಗುತ್ತದೆ ಮತ್ತು ಯಾವುದೇ ಇತರ ಬಾಕಿಗಳೊಂದಿಗೆ ಕಾರ್ಡ್‌ದಾರನು ಅದನ್ನು ಪಾವತಿಸಬೇಕಾಗುತ್ತದೆ.

**I) ಕಾರ್ಡ್‌ಗಳು ಕಳೆದುಹೋಗುವುದು / ಕಳ್ಳತನ / ದುರುಪಯೋಗ**

ಕಾರ್ಡ್ ಕಳೆದುಹೋದರೆ, ಕಳ್ಳತನವಾದರೆ, ಬೇರೆಯವರಿಗೆ ನಿಮ್ಮ PIN ಅಥವಾ ಇತರ ಭದ್ರತಾ ಮಾಹಿತಿ ತಿಳಿದಿದ್ದರೆ ಅಥವಾ ಅದನ್ನು ನಿಮ್ಮ ಅನುಮತಿಯಿಲ್ಲದೆ ಬಳಸುತ್ತಿದ್ದರೆ ನೀವು ತಕ್ಷಣ ಬ್ಯಾಂಕ್‌ಗೆ ದೂರವಾಣಿ ಮೂಲಕ ತಿಳಿಸಬೇಕು.
ಈ ಕುರಿತು ತಕ್ಷಣವೇ ಹತ್ತಿರದ ಪೊಲೀಸ್ ಠಾಣೆಯಲ್ಲಿ ತಕ್ಷಣವೇ ಪೊಲೀಸರಿಗೆ ದೂರು/ಪ್ರಥಮ ಮಾಹಿತಿ ವರದಿ (FIR) ದಾಖಲಿಸಿ, ಅದರ ಪ್ರತಿಯನ್ನು ಬ್ಯಾಂಕಿಗೆ ಸಲ್ಲಿಸಬೇಕು. ದುರ್ಬಳಕೆಯಾದಲ್ಲಿ, ಬ್ಯಾಂಕಿನ ಹೊಣೆಗಾರಿಕೆಯು ಕಳೆದುಹೋದ ಕಾರ್ಡ್ ಹೊಣೆಗಾರಿಕೆಯ ಅಡಿಯಲ್ಲಿ ಒಳಗೊಂಡಿರುವ ಮೊತ್ತಕ್ಕೆ ಸೀಮಿತವಾಗಿರುತ್ತದೆ, ಪಾಲಿಸಿ ನಿಯಮಗಳು ಮತ್ತು ಷರತ್ತುಗಳ ನೆರವೇರಿಕೆಗೆ ಒಳಪಟ್ಟಿರುತ್ತದೆ. ATM ಅಥವಾ PIN/ಪಾಸ್‌ವರ್ಡ್/OTP/mPIN/CVV ಆಧಾರಿತ ವಹಿವಾಟುಗಳಿಗೆ ಕಾರ್ಡ್‌ಗಳು ದುರುಪಯೋಗವಾದರೆ ಅದಕ್ಕೆ ಕಾರ್ಡ್‌ದಾರರೇ ಜವಾಬ್ದಾರರಾಗಿರುತ್ತಾರೆ.

**J) PIN ಸುರಕ್ಷಿತವಾಗಿ ಇರಿಸುವ ಕುರಿತು ಸಂವಹನ**

ಕಾರ್ಡ್ ಜೊತೆಗೆ ಬಳಸಲು ಕಾರ್ಡ್‌ದಾರರಿಗೆ ನೀಡಲಾದ ವೈಯಕ್ತಿಕ ಗುರುತಿನ ಸಂಖ್ಯೆ (PIN) ಅಥವಾ ಕಾರ್ಡ್‌ದಾರನು PIN ಆಗಿ ಆಯ್ಕೆ ಮಾಡಿದ ಯಾವುದೇ ಸಂಖ್ಯೆಯು ಕಾರ್ಡ್‌ದಾರರಿಗೆ ಮಾತ್ರ ತಿಳಿದಿರಬೇಕು. ಇದು ಕಾರ್ಡ್‌ದಾರರ ವೈಯಕ್ತಿಕ ಬಳಕೆಗಾಗಿ ಮಾತ್ರವಿದ್ದು, ವರ್ಗಾಯಿಸುವಂತಿಲ್ಲ ಮತ್ತು ಕಟ್ಟುನಿಟ್ಟಾಗಿ ಗೌಪ್ಯವಾಗಿದೆ. PIN ಸಂಖ್ಯೆಯ ಲಿಖಿತ ದಾಖಲೆಯನ್ನು ಮೂರನೇ ವ್ಯಕ್ತಿಯ ಬಳಕೆಗೆ ಅನುಕೂಲವಾಗುವ ಯಾವುದೇ ರೂಪ, ಸ್ಥಳ ಅಥವಾ ರೀತಿಯಲ್ಲಿ ಇಡಬಾರದು. ಯಾವುದೇ ಮೂರನೇ ವ್ಯಕ್ತಿಗೆ, ಬ್ಯಾಂಕ್ ಸಿಬ್ಬಂದಿಗೆ ಅಥವಾ ವ್ಯಾಪಾರಿ ಸಂಸ್ಥೆಗಳಿಗೆ, ಯಾವುದೇ ಪರಿಸ್ಥಿತಿಯಲ್ಲಿ ಅಥವಾ ಯಾವುದೇ ವಿಧಾನದಿಂದ, ಸ್ವಯಂಪ್ರೇರಿತ ಅಥವಾ ಬೇರೆ ರೀತಿಯಲ್ಲಿ PIN ಬಹಿರಂಗಪಡಿಸಬಾರದು. ಕಾರ್ಡ್‌ದಾರರನ್ನು ಹೊರತುಪಡಿಸಿ ಕಾರ್ಡ್‌ದಾರರ PIN ನೀಡುವಾಗ ಬ್ಯಾಂಕ್ ಕಾಳಜಿ ವಹಿಸುತ್ತದೆ.

**ಕಾರ್ಡ್‌ದಾರರಿಗೆ ವಿಮಾ ರಕ್ಷಣೆ**

ಕಾರ್ಡ್ ಪ್ರಕಾರವನ್ನು ಅವಲಂಬಿಸಿ ಕೆಳಗೆ ತಿಳಿಸಲಾದ ವಿಮಾ ರಕ್ಷಣೆಗಳು ಅನ್ವಯವಾಗುತ್ತವೆ. ಅನ್ವಯವಾಗುವ ವಿಮಾ ರಕ್ಷಣೆಗಳಿಗಾಗಿ ದಯವಿಟ್ಟು ಸ್ವಾಗತ ಕಿರುಪುಸ್ತಕವನ್ನು ಓದಿಕೊಳ್ಳಿ.

**ವಿಮಾನ ಅಪಘಾತ ರಕ್ಷಣೆ:** ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ಘಟನೆಗೆ ಪೂರ್ವದಲ್ಲಿ ವ್ಯಾಪಾರಿ ಸ್ಥಾಪನೆಯಲ್ಲಿ ಅಥವಾ ATM ನಲ್ಲಿ ನಗದು ಹಿಂಪಡೆಯಲು ಕನಿಷ್ಠ 90 ದಿನಗಳ ಹಿಂದೆ ಬಳಸಿದ್ದರೆ ಮತ್ತು ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಳಸಿ ವಿಮಾನದ ಟಿಕೆಟ್ ಖರೀದಿಸಿದ್ದರೆ ಮಾತ್ರ ವಿಮಾನ ಅಪಘಾತದ ರಕ್ಷಣೆಯು ಮಾನ್ಯವಾಗಿರುತ್ತದೆ. ಎಕ್ಸಿಸ್ ಬ್ಯಾಂಕ್‌ನ ಎಲ್ಲ ಬಾಕಿಗಳನ್ನು ಇತ್ಯರ್ಥಪಡಿಸದ ಹೊರತು ಕಾರ್ಡ್‌ದಾರರ ನಾಮನಿರ್ದೇಶಿತರಿಗೆ ವಿಮಾನ ಅಪಘಾತ ವಿಮಾ ಪಾಲಿಸಿಯ ಅಡಿಯಲ್ಲಿ ಯಾವುದೇ ಮೊತ್ತವನ್ನು ಸ್ವೀಕರಿಸಲು ಅರ್ಹತೆ ಇರುವುದಿಲ್ಲ. ಬಾಕಿ ಮೊತ್ತವನ್ನು ಸರಿಹೊಂದಿಸಲು ವಿಮಾ ಮೊತ್ತದ ಮೇಲೆ ಎಕ್ಸಿಸ್ ಬ್ಯಾಂಕ್ ಮೊದಲ ಹಕ್ಕು/ಹೊಣೆಗಾರಿಕೆಯನ್ನು ಹೊಂದಿರುತ್ತದೆ.
**ಗಮನಿಸಿ: ವಿಮಾನ ಅಪಘಾತದ ವಿಮಾ ರಕ್ಷಣೆಯನ್ನು 31 ಅಕ್ಟೋಬರ್ 2022ರಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಲಾಗಿದೆ.**

**ಕಳೆದುಹೋದ ಕಾರ್ಡ್ ಮೇಲೆ ಶೂನ್ಯ ಹೊಣೆಗಾರಿಕೆ:** ವಂಚನೆಯ ಖರೀದಿ ವಹಿವಾಟುಗಳ ವಿರುದ್ಧ ರಕ್ಷಣೆಯು ಲಭ್ಯವಿದ್ದು, ಕಾರ್ಡ್ ಕಳೆದು ಹೋಗಿರುವ ಕುರಿತು ಕಾರ್ಡ್‌ದಾರರು ಎಕ್ಸಿಸ್ ಬ್ಯಾಂಕ್‌ಗೆ ವರದಿ ಮಾಡಿದ ಕ್ಷಣದಿಂದ ವರದಿ ಮಾಡುವ ಅವಧಿಗೆ 30 ದಿನಗಳ ಮೊದಲು ಒಳಗೊಂಡಿದೆ. ವಿಮಾ ರಕ್ಷಣೆಯು ವಂಚನೆಯಿಂದ ಕೂಡಿದ ಪಾವತಿ ವಹಿವಾಟುಗಳಿಗೆ ಮಾತ್ರ ಮಾನ್ಯವಾಗಿರುತ್ತದೆ ಮತ್ತು ಅದನ್ನು FIR ಮೂಲಕ ಬೆಂಬಲಿಸುವುದು ಕಡ್ಡಾಯವಾಗಿ ಅಗತ್ಯವಿರುತ್ತದೆ. ATM ಮತ್ತು PIN / ಪಾಸ್‌ವರ್ಡ್/OTP/mPin/CVV ಆಧಾರಿತ ವಹಿವಾಟುಗಳಿಗೆ ಈ ವಿಮೆಯು ಮಾನ್ಯವಾಗಿರುವುದಿಲ್ಲ.

**ಖರೀದಿ ರಕ್ಷಣೆ:** ಕ್ರೆಡಿಟ್ ಕಾರ್ಡ್ ಬಳಸಿ ಖರೀದಿಸಿದ 90 ದಿನಗಳಲ್ಲಿ ಬೆಂಕಿ ಅಥವಾ ಕಳ್ಳತನದ ವಿರುದ್ಧ ರಕ್ಷಣೆ, ಇದನ್ನು FIR ಮೂಲಕ ಬೆಂಬಲಿಸುವುದು ಕಡ್ಡಾಯವಾಗಿ ಅಗತ್ಯವಿರುತ್ತದೆ. ಗ್ರಾಹಕರ ಸಂಪೂರ್ಣ ನಿರ್ಲಕ್ಷ್ಯವು ನಷ್ಟಕ್ಕೆ ಕಾರಣವಾಗಿದ್ದರೆ, ವಿಮಾ ರಕ್ಷಣೆಯನ್ನು ನೀಡಲಾಗುವುದಿಲ್ಲ. ಆಭರಣಗಳು ಮತ್ತು ಇತರ ಹಾಳಾಗುವ ಉತ್ಪನ್ನಗಳಿಗೆ ವಿಮಾ ರಕ್ಷಣೆ ಇರುವುದಿಲ್ಲ.

**ಬೆಲೆ ರಕ್ಷಣೆ:**ವಸ್ತುವಿಗೆ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮೂಲಕ ಪಾವತಿಸಿದ ಬೆಲೆ ಮತ್ತು ಅದೇ ವಸ್ತುವಿಗೆ (ಅದೇ ಬ್ರ್ಯಾಂಡ್, ತಯಾರಿಕೆ, ಮಾದರಿ ಹೆಸರು ಮತ್ತು/ಅಥವಾ ಸಂಖ್ಯೆ) ಕಡಿಮೆ ಬೆಲೆಯನ್ನು ನಮೂದಿಸಿರುವ ಜಾಹೀರಾತು ಬೆಲೆಯ ನಡುವಿನ ವ್ಯತ್ಯಾಸದ ಮೊತ್ತಕ್ಕೆ ವಿಮಾ ರಕ್ಷಣೆಯು ಮರುಪಾವತಿ ಮಾಡುತ್ತದೆ. ಅಮೆಜಾನ್, ಫ್ಲಿಪ್‌ಕಾರ್ಟ್ ಅಥವಾ ಪ್ರತಿಷ್ಠಿತ ಆನ್‌ಲೈನ್ ಖರೀದಿ ಸೈಟ್‌ಗೆ ಮಾತ್ರ ವಿಮಾ ರಕ್ಷಣೆಯು ಅನ್ವಯಿಸುತ್ತದೆ ಮತ್ತು ಯಾವುದೇ ವಸ್ತುವಿಗೆ ಮೂಲ ಖರೀದಿ ಬೆಲೆ INR 2500 ಕ್ಕಿಂತ ಹೆಚ್ಚಿರಬೇಕು. ಕಡಿಮೆ ಬೆಲೆಯು ಅದೇ ಇ-ಕಾಮರ್ಸ್ ಕಂಪನಿಯಲ್ಲಿರಬೇಕು, ಮುದ್ರಿತ ಜಾಹೀರಾತನ್ನು ಖರೀದಿಸಿದ 3 ದಿನಗಳಲ್ಲಿ ಪ್ರಕಟಿಸಿರಬೇಕು ಮತ್ತು ಕ್ಲೈಮ್ ಸೂಚನೆಯು ಮುದ್ರಿತ ಜಾಹೀರಾತಿನ 7 ದಿನಗಳ ಒಳಗೆ ಇರಬೇಕು. (ಈ ವೈಶಿಷ್ಟ್ಯದ ಅಡಿಯಲ್ಲಿ ವಿಮಾ ರಕ್ಷಣೆ ಪಡೆದಿರುವ ವಸ್ತುಗಳಿಗಾಗಿ ಬ್ಯಾಂಕ್ ಅನ್ನು ಸಂಪರ್ಕಿಸಿ)

**ಕ್ರೆಡಿಟ್ ಶೀಲ್ಡ್:** ಆಕಸ್ಮಿಕ ಸಾವಿನ ಸಂದರ್ಭದಲ್ಲಿ ಕಾರ್ಡ್‌ನಲ್ಲಿ ನಿರ್ದಿಷ್ಟ ಮೊತ್ತದವರೆಗೆ ಬಾಕಿ ಇರುವ ಮೊತ್ತಕ್ಕೆ ವಿಮಾ ರಕ್ಷಣೆಗಳು ಲಭ್ಯವಿರುತ್ತವೆ.

**ಚೆಕ್-ಇನ್ ಬ್ಯಾಗೇಜ್‌ನಲ್ಲಿ ವಿಳಂಬ:** ಸಾಗರೋತ್ತರ ಪ್ರಯಾಣ ಮಾಡುವಾಗ ನಿಮ್ಮ ಬ್ಯಾಗೇಜ್ ಕೈಸೇರುವುದು 6 ಗಂಟೆಗಳಿಗಿಂತ ಹೆಚ್ಚು ಸಮಯ ವಿಳಂಬವಾದರೆ ಪ್ರಾಥಮಿಕ ಅಗತ್ಯಗಳಿಗಾಗಿ ಅಗತ್ಯ ವಸ್ತುಗಳ ವೆಚ್ಚವನ್ನು ಮರುಪಾವತಿಸುತ್ತದೆ. ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮೂಲಕ ವಿಮಾನ ಟಿಕೆಟ್ ಖರೀದಿಸಿದ್ದರೆ ಮಾತ್ರ ಇದು ಮಾನ್ಯವಾಗಿರುತ್ತದೆ. ಚೆಕ್ ಇನ್ ಮಾಡಿರುವ ಬ್ಯಾಗೇಜ್ ಎಂದರೆ ವಿಮಾದಾರ ವ್ಯಕ್ತಿಯಿಂದ ಹಸ್ತಾಂತರಿಸಾದ ಮತ್ತು ವಿಮಾದಾರನು ಪ್ರಯಾಣಿಸುವ ರೀತಿಯಲ್ಲಿಯೇ ಸಾಗಣೆಗಾಗಿ ಭಾರತದ ಹೊರಗಿನ ಅಂತರರಾಷ್ಟ್ರೀಯ ಏರ್‌ಲೈನ್ಸ್/ವಾಹಕದಿಂದ ಅಂಗೀಕರಿಸಲಾದ ಸಾಮಾನುಗಳು ಆಗಿರುತ್ತವೆ ಮತ್ತು ಇವುಗಳಿಗಾಗಿ ವಾಹಕವು ಬ್ಯಾಗೇಜ್ ರಶೀದಿಯನ್ನು ನೀಡಿರುತ್ತದೆ.

**ಚೆಕ್-ಇನ್ ಬ್ಯಾಗೇಜ್ ನಷ್ಟ:** ಸಾಗರೋತ್ತರ ಪ್ರಯಾಣದ ಸಂದರ್ಭದಲ್ಲಿ ಬ್ಯಾಗೇಜ್ ಕಳೆದು ಹೋದರೆ ಅಥವಾ ಬ್ಯಾಗೇಜ್‌ಗೆ ಹಾನಿಯಾದರೆ ಅದರ ನಷ್ಟವನ್ನು ಒಳಗೊಳ್ಳುತ್ತದೆ. ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮೂಲಕ ವಿಮಾನ ಟಿಕೆಟ್ ಖರೀದಿಸಿದ್ದರೆ ಮಾತ್ರ ಇದು ಮಾನ್ಯವಾಗಿರುತ್ತದೆ. ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮೂಲಕ ವಿಮಾನ ಟಿಕೆಟ್ ಖರೀದಿಸಿದ್ದರೆ ಮಾತ್ರ ಇದು ಮಾನ್ಯವಾಗಿರುತ್ತದೆ. ಚೆಕ್ ಇನ್ ಮಾಡಿರುವ ಬ್ಯಾಗೇಜ್ ಎಂದರೆ ವಿಮಾದಾರ ವ್ಯಕ್ತಿಯಿಂದ ಹಸ್ತಾಂತರಿಸಾದ ಮತ್ತು ವಿಮಾದಾರನು ಪ್ರಯಾಣಿಸುವ ರೀತಿಯಲ್ಲಿಯೇ ಸಾಗಣೆಗಾಗಿ ಭಾರತದ ಹೊರಗಿನ ಅಂತರರಾಷ್ಟ್ರೀಯ ಏರ್‌ಲೈನ್ಸ್/ವಾಹಕದಿಂದ ಅಂಗೀಕರಿಸಲಾದ ಸಾಮಾನುಗಳು ಆಗಿರುತ್ತವೆ ಮತ್ತು ಇವುಗಳಿಗಾಗಿ ವಾಹಕವು ಬ್ಯಾಗೇಜ್ ರಶೀದಿಯನ್ನು ನೀಡಿರುತ್ತದೆ.

**ಪ್ರಯಾಣ ದಾಖಲೆಗಳ ನಷ್ಟ:** ವಿದೇಶಕ್ಕೆ ಪ್ರಯಾಣಿಸುವಾಗ ಪಾಸ್‌ಪೋರ್ಟ್/ಇತರ ಪ್ರಯಾಣ ದಾಖಲೆಗಳು ಕಳೆದುಹೋದರೆ ಅರ್ಜಿ ಶುಲ್ಕ ಸೇರಿದಂತೆ ಪಾಸ್‌ಪೋರ್ಟ್ ಪುನಃ ಪಡೆಯುವಲ್ಲಿ ಉಂಟಾಗುವ ವೆಚ್ಚಗಳನ್ನು ಒಳಗೊಳ್ಳುತ್ತದೆ. ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮೂಲಕ ವಿಮಾನ ಟಿಕೆಟ್ ಖರೀದಿಸಿದ್ದರೆ ಮಾತ್ರ ಇದು ಮಾನ್ಯವಾಗಿರುತ್ತದೆ.

**K) ಡೀಫಾಲ್ಟ್ (ಬೇಪಾವತಿ)**

1) ಬೇಪಾವತಿ (ಡೀಫಾಲ್ಟ್) ಸಂದರ್ಭದಲ್ಲಿ, ಅಂದರೆ, ಪಾವತಿಗೆ ನಿಗದಿತ ದಿನಾಂಕದಂದು ಬಾಕಿ ಇರುವ ಕನಿಷ್ಠ ಮೊತ್ತವನ್ನು ಪಾವತಿಸದಿದ್ದರೆ ಅಥವಾ ಕಾರ್ಡ್ ಸದಸ್ಯ ಒಪ್ಪಂದದ ಯಾವುದೇ ಷರತ್ತಿನ ಉಲ್ಲಂಘನೆ ಮಾಡಿದ್ದರೆ, ಕಾಲಕಾಲಕ್ಕೆ ಅಂಚೆ, ಫ್ಯಾಕ್ಸ್, ದೂರವಾಣಿ, ಇ-ಮೇಲ್, SMS ಸಂದೇಶ ಕಳುಹಿಸುವುದು ಮತ್ತು / ಅಥವಾ ಬಾಕಿ ಸಂಗ್ರಹಿಸಲು ನೇಮಕಗೊಂಡ ಮೂರನೇ ವ್ಯಕ್ತಿಗಳ ಮೂಲಕ ಜ್ಞಾಪನೆಗಳನ್ನು ಕಾರ್ಡ್‌ದಾರರಿಗೆ ಕಳುಹಿಸಲಾಗುತ್ತದೆ. ಈ ರೀತಿ ನೇಮಕಗೊಂಡ ಯಾವುದೇ ಮೂರನೇ ವ್ಯಕ್ತಿಯು ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ (IBA) ಸಾಲ ವಸೂಲಾತಿ ಸಂಹಿತೆಗೆ ಬದ್ಧರಾಗಿರಬೇಕು.

2) ಪಾವತಿಗಳು ಅವಧಿ ಮೀರಿ ಬಾಕಿ ಇಲ್ಲದಿದ್ದರೆ ಗ್ರಾಹಕರಿಗೆ ತಮ್ಮ ಪಾವತಿಗಳನ್ನು ಮಾಡಲು ನಿಗದಿತ ದಿನಾಂಕದಿಂದ 3 ದಿನಗಳ ಗ್ರೇಸ್ ಅವಧಿಯನ್ನು ಅನುಮತಿಸಲಾಗುವುದು. ಪಾವತಿಗಳ ಪ್ರಕ್ರಿಯೆಯ ಸಮಯವನ್ನು ಗಮನದಲ್ಲಿಟ್ಟುಕೊಂಡು ಈ ಸೌಲಭ್ಯವನ್ನು ಒದಗಿಸಲಾಗಿದೆ. ಆದರೆ, ಕ್ರೆಡಿಟ್ ಕಾರ್ಡ್ ಸ್ಟೇಟ್‌ಮೆಂಟ್‌ನಲ್ಲಿ ಉಲ್ಲೇಖಿಸಲಾದ ಪಾವತಿ ದಿನಾಂಕದ ಮೊದಲು ಗ್ರಾಹಕರು ತಮ್ಮ ಬಾಕಿಗಳನ್ನು ತೀರಿಸಬೇಕು.

3) ಕ್ರೆಡಿಟ್ ಕಾರ್ಡ್ ಖಾತೆಯನ್ನು ಕ್ರೆಡಿಟ್ ಮಾಹಿತಿ ಕಂಪನಿಗಳಿಗೆ (CICಗಳು) 'ಹಿಂದಿನ ಬಾಕಿ' ಎಂದು ವರದಿ ಮಾಡಬೇಕು ಮತ್ತು ಕ್ರೆಡಿಟ್ ಕಾರ್ಡ್ ಖಾತೆಯು 3 ದಿನಗಳಿಗಿಂತ ಹೆಚ್ಚು ಕಾಲ 'ಹಿಂದಿನ ಬಾಕಿ' ಇರುವಾಗ ಪಾವತಿಯು ವಿಳಂಬವಾಗಿರುವುದಕ್ಕೆ ಶುಲ್ಕವನ್ನು ವಿಧಿಸಬೇಕು. ಆದರೂ, ಕ್ರೆಡಿಟ್ ಕಾರ್ಡ್ ಸ್ಟೇಟ್‌ಮೆಂಟ್‌ನಲ್ಲಿ ಉಲ್ಲೇಖಿಸಲಾದ ಪಾವತಿಗೆ ನಿಗದಿತ ದಿನಾಂಕವು 'ಮುಗಿದ ಮೇಲಿನ ದಿನಗಳ ಸಂಖ್ಯೆಯನ್ನು' ಮತ್ತು ವಿಳಂಬ ಪಾವತಿ ಶುಲ್ಕಗಳನ್ನು ಲೆಕ್ಕಹಾಕಲಾಗುತ್ತದೆ.

4) ಒಂದು ವೇಳೆ ಕಾರ್ಡ್‌ದಾರರು ಬೇಪಾವತಿ ಮಾಡಿದರೆ, ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ, ಇವುಗಳಿಗೆ ಅರ್ಹವಾಗಿರುತ್ತದೆ:

   a. ಕಾರ್ಡ್‌ದಾರನಿಗೆ ನೀಡಲಾದ ಎಲ್ಲ ಕ್ರೆಡಿಟ್ ಕಾರ್ಡ್ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳಲು.
   b. ಕಾರ್ಡ್‌ದಾರನು ತನ್ನ ಕಾರ್ಡ್‌ನಲ್ಲಿ ಬಾಕಿ ಉಳಿಸಿಕೊಂಡಿರುವ ಎಲ್ಲ ಪಾವತಿಗಳನ್ನು ತಕ್ಷಣವೇ ಪಾವತಿಸುವಂತೆ ಸೂಚಿಸಲು.
   c. ಬ್ಯಾಂಕ್‌ನ ಹಕ್ಕನ್ನು ಚಲಾಯಿಸಿ ಮತ್ತು ಬಾಕಿ ಇರುವ ಮೊತ್ತವನ್ನು ಬ್ಯಾಂಕ್‌ನಲ್ಲಿ ಕಾರ್ಡ್‌ದಾರರ ಹೆಸರಿನಲ್ಲಿ ನಿರ್ವಹಿಸುವ ಯಾವುದೇ ಹಣ / ಠೇವಣಿ / ಖಾತೆಗಳಿಂದ ಹೊಂದಿಸಿ.

5) ಬೇಪಾವತಿ ಸಂದರ್ಭದಲ್ಲಿ, ಬ್ಯಾಂಕ್ ಬೇಪಾವತಿ ವರದಿಯನ್ನು ಕ್ರೆಡಿಟ್ ಇನ್ಫಾರ್ಮೇಷನ್ ಬ್ಯೂರೋಗಳಿಗೆ ಅಥವಾ ಕಾನೂನು ಅನುಮೋದಿಸಿರುವ ಇತರ ಏಜೆನ್ಸಿಗಳಿಗೆ ರವಾನಿಸಬಹುದು. ಪಾವತಿಗೆ ನಿಗದಿತ ದಿನಾಂಕ ಮತ್ತು ಬಿಲ್ಲಿಂಗ್ ಸ್ಟೇಟ್‌ಮೆಂಟ್‌ನಲ್ಲಿ ಸೂಚಿಸಲಾದ ಬಿಲ್ಲಿಂಗ್ ದಿನಾಂಕದ ನಡುವಿನ ಅವಧಿಯನ್ನು ಕಾರ್ಡ್‌ದಾರರನ್ನು ಬೇಪಾವತಿದಾರರನ್ನಾಗಿ ವರದಿ ಮಾಡಲು ಸೂಚನೆ ಅವಧಿ ಎಂದು ಪರಿಗಣಿಸಲಾಗುತ್ತದೆ.

6) ಬೇಪಾವತಿ ವರದಿಯನ್ನು ಹಿಂತೆಗೆದುಕೊಳ್ಳುವ ವಿಧಾನ ಮತ್ತು ಬಾಕಿಗಳನ್ನು ತೀರಿಸಿದ ಮೇಲೆ ಬೇಪಾವತಿ ವರದಿಯನ್ನು ಹಿಂತೆಗೆದುಕೊಳ್ಳುವ ಅವಧಿ:

*ಕಾರ್ಡ್‌ದಾರರ ಡೇಟಾವನ್ನು ಬ್ಯಾಂಕ್ ಸಿಬಿಲ್ (CIBIL) - ಕ್ರೆಡಿಟ್ ಇನ್ಫಾರ್ಮೇಷನ್ ಬ್ಯೂರೋ (ಇಂಡಿಯಾ) ಲಿಮಿಟೆಡ್‌ಗೆ ಪ್ರತಿ ತಿಂಗಳು CIBIL ನಿಗದಿಪಡಿಸಿದ ಸ್ವರೂಪದಲ್ಲಿ ಸಲ್ಲಿಸುತ್ತದೆ. ಈ ಡೇಟಾವು ಎಲ್ಲ ಕಾರ್ಡ್‌ದಾರರ ಹಿಂದಿನ ತಿಂಗಳ ಮರುಪಾವತಿ ಸ್ಥಿತಿಯನ್ನು, ಡೀಫಾಲ್ಟ್ ಮತ್ತು ಪ್ರಸ್ತುತ ಎರಡೂ, ಒಳಗೊಂಡಿದೆ. ಸಲ್ಲಿಸಿದ ಡೇಟಾವನ್ನು ಮುಂದಿನ ಮೂವತ್ತು ದಿನಗಳಲ್ಲಿ CIBIL ತನ್ನ ಸರ್ವರ್‌ಗೆ ಅಪ್ಲೋಡ್ ಮಾಡುತ್ತದೆ.

5). ಕಾರ್ಡ್‌ದಾರನ ಮರಣ / ಶಾಶ್ವತ ಅಸಾಮರ್ಥ್ಯದ ಸಂದರ್ಭದಲ್ಲಿ ಬಾಕಿ ವಸೂಲಾತಿ: ಬಾಕಿ ಉಳಿದಿರುವ ಸಂಪೂರ್ಣ ಮೊತ್ತವು (ಬಿಲ್ ಮಾಡದ ವಹಿವಾಟುಗಳೂ ಒಳಗೊಂಡಂತೆ) ತಕ್ಷಣವೇ ತಕ್ಷಣವೇ ಪಾವತಿಸಬೇಕಾದ ಮೊತ್ತವಾಗುತ್ತದೆ ಮತ್ತು ಎಕ್ಸಿಸ್ ಬ್ಯಾಂಕ್‌ಗೆ ಪಾವತಿಸಬೇಕಾಗುತ್ತದೆ. ಕಾರ್ಡ್‌ದಾರನ ಎಸ್ಟೇಟ್‌ನಿಂದ ಬಾಕಿ ಇರುವ ಒಟ್ಟು ಮೊತ್ತವನ್ನು ವಸೂಲು ಮಾಡಲು ಎಕ್ಸಿಸ್ ಬ್ಯಾಂಕ್‌ಗೆ ಅರ್ಹತೆ ಇರುತ್ತದೆ. ಬ್ಯಾಂಕ್‌ನಲ್ಲಿ ಕಾರ್ಡ್‌ದಾರರ ಹೆಸರಿನಲ್ಲಿ ನಿರ್ವಹಿಸುವ ಹಣ / ಠೇವಣಿ / ಖಾತೆಗಳಿಂದ ಬಾಕಿ ಇರುವ ಒಟ್ಟು ಮೊತ್ತವನ್ನು ವಸೂಲು ಮಾಡಲು ಬ್ಯಾಂಕಿಗೆ ಅರ್ಹತೆ ಇರುತ್ತದೆ.

## L) ಬಹಿರಂಗಪಡಿಸುವಿಕೆ

ಎಕ್ಸಿಸ್ ಬ್ಯಾಂಕ್ RBI ನಿಂದ ಅಧಿಕೃತಗೊಳಿಸಲಾದ ಕ್ರೆಡಿಟ್ ಬ್ಯೂರೋಗಳೊಂದಿಗೆ ಸಂಬಂಧ ಹೊಂದಬಹುದು ಮತ್ತು ನಿಮ್ಮ ಪ್ರಸ್ತುತ ಬಾಕಿ, ಪಾವತಿ ಇತಿಹಾಸ, ಜನಸಂಖ್ಯಾ ವಿವರಗಳು ಇತ್ಯಾದಿಗಳನ್ನು ಒಳಗೊಂಡಂತೆ ಆದರೆ ಅಷ್ಟಕ್ಕೆ ಸೀಮಿತವಾಗಿಲ್ಲದ ಕ್ರೆಡಿಟ್ ಮಾಹಿತಿಯನ್ನು ಹಂಚಿಕೊಳ್ಳಬಹುದು. ಕ್ರೆಡಿಟ್ ಬ್ಯೂರೋಗಳು ಸಾಲ ನೀಡಬೇಕೆ ಅಥವಾ ಬೇಡವೇ ಎಂಬ ಬಗ್ಗೆ ಯಾವುದೇ ಅಭಿಪ್ರಾಯ, ಸೂಚನೆ ಅಥವಾ ಹೇಳಿಕೆಯನ್ನು ಒದಗಿಸುವುದಿಲ್ಲ. ಅಗತ್ಯ ಬಾಕಿಗಳನ್ನು ಸಕಾಲದಲ್ಲಿ ಪಾವತಿಸುವ ಮೂಲಕ ಉತ್ತಮ ಕ್ರೆಡಿಟ್ ಇತಿಹಾಸವನ್ನು ಕಾಪಾಡಿಕೊಳ್ಳುವುದು ನಿಮ್ಮ ಹಿತಾಸಕ್ತಿಗೆ ಉತ್ತಮವಾಗಿದೆ. ಕ್ರೆಡಿಟ್ ಬ್ಯೂರೋಗಳು ಇರುವುದರಿಂದ, ಜವಾಬ್ದಾರಿಯುತ ಗ್ರಾಹಕರು ಸಾಲ ನೀಡುವವರಿಂದ ಉತ್ತಮ ರೀತಿಯಲ್ಲಿ ವೇಗವಾಗಿ ಮತ್ತು ಹೆಚ್ಚು ಸ್ಪರ್ಧಾತ್ಮಕ ಸೇವೆಗಳನ್ನು ನಿರೀಕ್ಷಿಸಬಹುದು. ಗ್ರಾಹಕರ ಬೇಪಾವತಿ ವಿವರಗಳು ಕ್ರೆಡಿಟ್ ಬ್ಯೂರೋಗಳಲ್ಲಿ ಲಭ್ಯವಿರುತ್ತವೆ, ಇದು ಭವಿಷ್ಯದ ಅಗತ್ಯಗಳಿಗಾಗಿ ನಿಮ್ಮ ಕ್ರೆಡಿಟ್ ಯೋಗ್ಯತೆಯ ಮೇಲೆ ಪರಿಣಾಮ ಬೀರುತ್ತದೆ. ಎಕ್ಸಿಸ್ ಬ್ಯಾಂಕ್ ಗ್ರಾಹಕರ ಮಾಹಿತಿಯನ್ನು ಮಾಸಿಕ ಆಧಾರದ ಮೇಲೆ ಅಥವಾ ಬ್ಯಾಂಕ್ ಮತ್ತು ಕ್ರೆಡಿಟ್ ಬ್ಯೂರೋಗಳ ನಡುವೆ ಒಪ್ಪಿಕೊಳ್ಳಬಹುದಾದ ಇತರ ಅವಧಿಗೆ ಕ್ರೆಡಿಟ್ ಬ್ಯೂರೋಗಳಿಗೆ ವರದಿ ಮಾಡುತ್ತದೆ. ಎಕ್ಸಿಸ್ ಬ್ಯಾಂಕ್‌ಗೆ ಸೂಚಿಸಲಾದ ಯಾವುದೇ ಬಿಲ್ಲಿಂಗ್ ತಗಾದೆಯ ಸಂದರ್ಭದಲ್ಲಿ, ವಿವಾದವನ್ನು ಪರಿಹರಿಸುವವರೆಗೆ ಕ್ರೆಡಿಟ್ ಬ್ಯೂರೋಗಳಿಗೆ ವರದಿ ಮಾಡುವುದನ್ನು ಬ್ಯಾಂಕ್ ಸ್ಥಗಿತಗೊಳಿಸುತ್ತದೆ. ಎಕ್ಸಿಸ್ ಬ್ಯಾಂಕ್ ಸೂಕ್ತ ಮತ್ತು ಅಗತ್ಯವೆಂದು ಭಾವಿಸಬಹುದಾದಂತೆ, ಅವನ/ಅವಳ ಬಾಧ್ಯತೆಯ ನಿರ್ವಹಣೆಯಲ್ಲಿ ಕಾರ್ಡ್‌ದಾರರು ಮಾಡಿದ ಯಾವುದೇ ಬೇಪಾವತಿ (ಡೀಫಾಲ್ಟ್)ಗೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಂತೆ, ಕಾರ್ಡ್‌ದಾರ/ಆ್ಯಡ್-ಆನ್ ಕಾರ್ಡ್‌ದಾರನಿ(ರಿ)ಗೆ ಸಂಬಂಧಿಸಿದ

ಮಾಹಿತಿಯನ್ನು ಅಥವಾ ಕಾಲಕಾಲಕ್ಕೆ ಬ್ಯಾಂಕ್ ನಿರ್ಧರಿಸಿದಂತೆ ಮತ್ತಷ್ಟು ಕ್ರೆಡಿಟ್ ಬ್ಯೂರೋಗಳ ಜೊತೆ ಹಂಚಿಕೊಳ್ಳಲು ಕಾರ್ಡ್‌ದಾರರು ಒಪ್ಪಿಕೊಳ್ಳುತ್ತಾರೆ. ಅಂತೆಯೇ, ಅಂತಹ ಕ್ರೆಡಿಟ್ ಬ್ಯೂರೋಗಳಿಗೆ ಮಾಹಿತಿಯನ್ನು ಬಹಿರಂಗಪಡಿಸಲು ಆ್ಯಡ್-ಆನ್ ಕಾರ್ಡ್‌ದಾರನು(ರು) ಕೂಡ ಒಪ್ಪಿಗೆ ಸೂಚಿಸುತ್ತಾರೆ. ಅಂತಹ ಘಟಕಗಳು ಸಂಸ್ಕರಿಸಿದ ಮಾಹಿತಿ ಅಥವಾ ಡೇಟಾ ಅಥವಾ ಅದರ ಉತ್ಪನ್ನಗಳನ್ನು ಬ್ಯಾಂಕ್‌ಗಳು/ಹಣಕಾಸು ಸಂಸ್ಥೆಗಳು ಮತ್ತು ಇತರ ಸಾಲದಾತರಿಗೆ ಲಭ್ಯವಾಗುವಂತೆ ಮಾಡಬಹುದು. ಕ್ರೆಡಿಟ್ ಬ್ಯೂರೋಗಳು ಇವುಗಳನ್ನು ಒಳಗೊಂಡಿರುತ್ತವೆ: ಕ್ರೆಡಿಟ್ ಬ್ಯೂರೋಗಳು, ಕ್ರೆಡಿಟ್ ರೆಫರೆನ್ಸ್ ಏಜೆನ್ಸಿಗಳು, ಕ್ರೆಡಿಟ್ ಇನ್ಫಾರ್ಮೇಶನ್ ಕಂಪನಿಗಳು ಅಥವಾ ಸಾಲಗಾರರಿಗೆ ಸಂಬಂಧಿಸಿದ ಕ್ರೆಡಿಟ್ ಮಾಹಿತಿಯನ್ನು ಸಂಗ್ರಹಿಸುವ, ಒಟ್ಟುಗೂಡಿಸುವ ಮತ್ತು ಪ್ರಸಾರ ಮಾಡುವ ಉದ್ದೇಶಕ್ಕಾಗಿ RBI ರಚಿಸಿದ ಮತ್ತು ಅಧಿಕೃತಗೊಳಿಸಿದ ಯಾವುದೇ ಇತರ ಘಟಕಗಳು.

ಎಕ್ಸಿಸ್ ಬ್ಯಾಂಕ್/ಅದರ ಸಹವರ್ತಿಗಳು/ಅಂಗಸಂಸ್ಥೆಗಳು/ಏಜೆಂಟರಿಂದ ಯಾವುದೇ ನೇರ ಮಾರ್ಕೆಟಿಂಗ್ ಅಥವಾ ಟೆಲಿ ಕರೆ / ಟೆಲಿಸೇಲ್ಸ್ ಕರೆಗಳನ್ನು ಸ್ವೀಕರಿಸಲು ಕಾರ್ಡ್‌ದಾರರು ಬಯಸದಿದ್ದರೆ, 'ಟ್ರಾಯ್' ವೆಬ್‌ಸೈಟ್‌ನಲ್ಲಿ ಒದಗಿಸಲಾದ ವಿವರಗಳ ಪ್ರಕಾರ ಕಾರ್ಡ್‌ದಾರರು ಒದಗಿಸುವ 'ಗ್ರಾಹಕ ಆದ್ಯತೆ ನೋಂದಣಿ' (ಕಸ್ಟಮರ್ ಪ್ರಿಫರೆನ್ಸ್ ರಿಜಿಸ್ಟರ್) ಯಲ್ಲಿ ನೋಂದಾಯಿಸುವ ಮೂಲಕ ಹೊರಗುಳಿಯಬಹುದು.

ಎಕ್ಸಿಸ್ ಬ್ಯಾಂಕ್ ಇತರ ವ್ಯಾಪಾರಿ/ಕಾರ್ಪೊರೇಟ್‌ಗಳ ಸಹಯೋಗದಲ್ಲಿ ಜಂಟಿಯಾಗಿ ಕೊ-ಬ್ರಾಂಡ್ ಕ್ರೆಡಿಟ್ ಕಾರ್ಡ್‌ಗಳನ್ನು ನೀಡುತ್ತದೆ. ಈ ವ್ಯವಸ್ಥೆ ಅಡಿಯಲ್ಲಿ ಪಾಲುದಾರ ವ್ಯಾಪಾರಿ/ಕಾರ್ಪೊರೇಟ್‌ನೊಂದಿಗೆ ಆದಾಯ/ಶುಲ್ಕವನ್ನು ಬ್ಯಾಂಕ್ ಹಂಚಿಕೊಳ್ಳಬಹುದು. ನೋಂದಣಿ, ಕಾರ್ಡ್ ವೈಶಿಷ್ಟ್ಯಗಳ ನೆರವೇರಿಕೆ, ಮಾರ್ಕೆಟಿಂಗ್, ಪ್ರಚಾರ ಚಟುವಟಿಕೆಗಳು ಮತ್ತು ಲಾಭದ ರಿಡೆಮ್ಶನ್ ಉದ್ದೇಶಕ್ಕಾಗಿ ಬ್ಯಾಂಕಿನೊಂದಿಗೆ ಹಂಚಿಕೊಂಡ ಮಾಹಿತಿಯನ್ನು ಕೊ-ಬ್ರ್ಯಾಂಡ್ ಪಾಲುದಾರರಾಗಿ ಕಾರ್ಯನಿರ್ವಹಿಸುತ್ತಿರುವ ಮೈಲ್ಸ್ & ಮೋರ್, ವಿಸ್ತಾರಾ ಏರ್‌ಲೈನ್ಸ್, ಸ್ಯಾಮ್ಸಂಗ್, ಸ್ಪೈಸ್‌ಜೆಟ್ ಇವುಗಳೂ ಹಂಚಿಕೊಳ್ಳಲು ಮತ್ತು ಬಹಿರಂಗಪಡಿಸಲು ಗ್ರಾಹಕರು ಸ್ಪಷ್ಟವಾಗಿ ಒಪ್ಪುತ್ತಾರೆ. ಇದು ಕೊ-ಬ್ರ್ಯಾಂಡ್ ಕ್ರೆಡಿಟ್ ಕಾರ್ಡ್‌ಗಳಾದ ಎಕ್ಸಿಸ್ ಬ್ಯಾಂಕ್ ಮೈಲ್ಸ್ & ಮೋರ್ ವರ್ಲ್ಡ್ ಸೆಲೆಕ್ಟ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಮೈಲ್ಸ್ & ಮೋರ್ ವರ್ಲ್ಡ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ವಿಸ್ತಾರಾ ಇನ್‌ಫೈನೈಟ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ವಿಸ್ತಾರಾ ಸಿಗ್ನೇಚರ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ವಿಸ್ತಾರಾ ಪ್ಲಾಟಿನಂ ಕ್ರೆಡಿಟ್ ಕಾರ್ಡ್ಸ್, ಸ್ಯಾಮ್ಸಂಗ್ ಎಕ್ಸಿಸ್ ಬ್ಯಾಂಕ್ ಇನ್‌ಫೈನೈಟ್ ಕ್ರೆಡಿಟ್ ಕಾರ್ಡ್, ಸ್ಯಾಮ್ಸಂಗ್ ಎಕ್ಸಿಸ್ ಬ್ಯಾಂಕ್ ಸಿಗ್ನೇಚರ್ ಕ್ರೆಡಿಟ್ ಕಾರ್ಡ್, ಸ್ಪೈಸ್‌ಜೆಟ್ ಎಕ್ಸಿಸ್ ಬ್ಯಾಂಕ್ ವೋಯೇಜ್ ಬ್ಲ್ಯಾಕ್ ಕ್ರೆಡಿಟ್ ಕಾರ್ಡ್ ಮತ್ತು ಸ್ಪೈಸ್‌ಜೆಟ್ ಎಕ್ಸಿಸ್ ಬ್ಯಾಂಕ್ ವೋಯೇಜ್ ಕ್ರೆಡಿಟ್ ಕಾರ್ಡ್ ಮುಂತಾದವುಗಳಿಗೆ ಅನ್ವಯಿಸುತ್ತದೆ. ಕೊ-ಬ್ರ್ಯಾಂಡ್ ಪಾಲುದಾರರು ಮೈಲ್ಸ್ ಮತ್ತು ಮೋರ್, ವಿಸ್ತಾರಾ ಏರ್‌ಲೈನ್ಸ್, ಸ್ಯಾಮ್ಸಂಗ್, ಸ್ಪೈಸ್‌ಜೆಟ್.

ಎಕ್ಸಿಸ್ ಬ್ಯಾಂಕ್ ವಿವಿಧ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳೊಂದಿಗೆ ಕ್ರೆಡಿಟ್ ಕಾರ್ಡ್‌ಗಳನ್ನು ನೀಡುತ್ತದೆ. ಇದನ್ನು ಒದಗಿಸಲು, ಕಾರ್ಡ್ ರಕ್ಷಣೆ ಯೋಜನೆಗಳು, ಕ್ರೆಡಿಟ್ ಶೀಲ್ಡ್, ಆರೋಗ್ಯ ಯೋಜನೆಗಳು ಮುಂತಾದ ವೋಚರ್‌ಗಳು/ರಿಯಾಯಿತಿಗಳು/ಕ್ಯಾಶ್‌ಬ್ಯಾಕ್‌ಗಳು /ಸದಸ್ಯತ್ವಗಳು /ವಿಮಾ ಆಯ್ಕೆಗಳ ವಿಷಯದಲ್ಲಿ ಕಾರ್ಡುದಾರರಿಗೆ ಉತ್ಪನ್ನ ವೈಶಿಷ್ಟ್ಯಗಳು /ಪ್ರಯೋಜನಗಳು /ಇತರ

ಮೌಲ್ಯವರ್ಧಿತ ಸೇವೆಗಳನ್ನು ಒದಗಿಸಲು ವಿವಿಧ ಸೇವಾ ಪೂರೈಕೆದಾರರನ್ನು ಒಪ್ಪಂದದ ಆಧಾರದಲ್ಲಿ ಎಕ್ಸಿಸ್ ಬ್ಯಾಂಕ್ ನೇಮಿಸಿಕೊಳ್ಳುತ್ತದೆ. ದಾಖಲಾತಿ, ಕಾರ್ಡ್ ವೈಶಿಷ್ಟ್ಯಗಳ ನೆರವೇರಿಕೆ, ಮಾರ್ಕೆಟಿಂಗ್, ಪ್ರಚಾರ ಚಟುವಟಿಕೆಗಳು ಮತ್ತು ಲಾಭದ ರಿಡೆಮ್ಶನ್ ಉದ್ದೇಶಕ್ಕಾಗಿ ಎಕ್ಸಿಸ್ ಬ್ಯಾಂಕಿನ ಅಧಿಕೃತ ಸೇವಾ ಪೂರೈಕೆದಾರರೊಂದಿಗೆ ವೈಯಕ್ತಿಕ ಮಾಹಿತಿ ಮತ್ತು ಸೂಕ್ಷ್ಮ ವೈಯಕ್ತಿಕ ಮಾಹಿತಿ ("ವೈಯಕ್ತಿಕ ಡೇಟಾ") ಸೇರಿದಂತೆ ಕಾರ್ಡ್‌ದಾರರ ವೈಯಕ್ತಿಕ ಡೇಟಾವನ್ನು ಪಡೆಯಲು, ಸಂಗ್ರಹಿಸಲು, ಪ್ರಕ್ರಿಯೆಗೊಳಿಸಲು, ದಾಖಲಿಸಲು, ಹಂಚಿಕೊಳ್ಳಲು ಮತ್ತು ಬಹಿರಂಗಪಡಿಸಲು ಕಾರ್ಡ್‌ದಾರರು ಎಕ್ಸಿಸ್ ಬ್ಯಾಂಕ್‌ಗೆ ಸ್ಪಷ್ಟವಾಗಿ ಒಪ್ಪಿಗೆ ಮತ್ತು ಅಧಿಕಾರ ನೀಡಿದ್ದಾರೆ. ಅಂತಹ ಒಪ್ಪಿಗೆಯು ಎಕ್ಸಿಸ್ ಬ್ಯಾಂಕ್ ನಿಯೋ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಮೈ ಝೋನ್ ಕ್ರೆಡಿಟ್ ಕಾರ್ಡ್, ಇಂಡಿಯನ್ ಆಯಿಲ್ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ರಿವಾರ್ಡ್ಸ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಅಟ್ಲಾಸ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಸೆಲೆಕ್ಟ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಪ್ರಿವಿಲೇಜ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಇನ್‌ಫೈನೈಟ್ ರಿಸರ್ವ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಮ್ಯಾಗ್ನಸ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಪ್ರೈಡ್ ಕ್ರೆಡಿಟ್ ಕಾರ್ಡ್ಸ್, ಎಕ್ಸಿಸ್ ಬ್ಯಾಂಕ್ ಅಡ್ವಾಂಟೇಜ್ ಕ್ರೆಡಿಟ್ ಕಾರ್ಡ್, ಎಕ್ಸಿಸ್ ಬ್ಯಾಂಕ್ ಔರಾ ಕ್ರೆಡಿಟ್ ಕಾರ್ಡ್ ಮುಂತಾದ ಅನ್ವಯವಾಗುವ ಎಲ್ಲ ಕ್ರೆಡಿಟ್ ಕಾರ್ಡ್‌ಗಳಿಗೆ ಮಾನ್ಯವಾಗಿರುತ್ತದೆ ಎಂದು ಕಾರ್ಡ್‌ದಾರರು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಒಪ್ಪುತ್ತಾರೆ.

ಎಕ್ಸಿಸ್ ಬ್ಯಾಂಕ್, ವಿಮಾ ಕಂಪನಿಗಳ ಜೊತೆಗೆ ಸಹಯೋಗ ಹೊಂದಿದ್ದು, ಕಳೆದುಹೋದ ಕಾರ್ಡ್‌ಗಳು, ಕಾರ್ಡ್ ವಂಚನೆಗಳು ಇತ್ಯಾದಿಗಳಿಂದ ಉಂಟಾಗುವ ಹೊಣೆಗಾರಿಕೆಗಳ ಕಾಳಜಿ ವಹಿಸಲು ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಜೊತೆಗೆ ವಿಮಾ ರಕ್ಷಣೆಯನ್ನು ನೀಡುತ್ತದೆ ("ವಿಮಾ ರಕ್ಷಣೆ"). ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಜೊತೆಗೆ ಅಂತಹ ಯಾವುದೇ ವಿಮಾ ರಕ್ಷಣೆಯನ್ನು ಪಡೆಯಲು ಕಾರ್ಡ್‌ದಾರರು ಬಯಸಿದರೆ, ಅವರು ಈ ಕೆಳಗಿನ ನಿಯಮಗಳು ಮತ್ತು ಷರತ್ತುಗಳನ್ನು ಓದಿದ್ದಾರೆ, ಅರ್ಥಮಾಡಿಕೊಂಡಿದ್ದಾರೆ ಮತ್ತು ಒಪ್ಪಿಕೊಂಡಿದ್ದಾರೆ ಎಂದು ಕಾರ್ಡ್‌ದಾರರು ಖಚಿತಪಡಿಸುತ್ತಾರೆ:

i. ಕಾರ್ಡ್‌ದಾರನ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನಲ್ಲಿ ಸಂಬಂಧಿತ ವಿಮಾ ರಕ್ಷಣೆಯನ್ನು ನೀಡಲು ಕರೆ ಮಾಡುವ ಮತ್ತು ತಲುಪುವ ಉದ್ದೇಶಕ್ಕಾಗಿ ಎಕ್ಸಿಸ್ ಬ್ಯಾಂಕ್‌ನ ಅಧಿಕೃತ ಸೇವಾ ಪೂರೈಕೆದಾರರು ಮತ್ತು/ಅಥವಾ ಸಹಯೋಗಿ ವಿಮಾ ಕಂಪನಿಗಳೊಂದಿಗೆ ಅವನ/ಅವಳ ವೈಯಕ್ತಿಕ ಡೇಟಾವನ್ನು ಹಂಚಿಕೊಳ್ಳಲು ಮತ್ತು ಅಂತಹ ವಿಮಾ ರಕ್ಷಣೆಯನ್ನು ಪಡೆಯಲು ಕಾರ್ಡ್‌ದಾರನ ವೈಯಕ್ತಿಕ ಡೇಟಾವನ್ನು ಪ್ರಕ್ರಿಯೆಗೊಳಿಸಲು ("ಉದ್ದೇಶ") ಕಾರ್ಡ್‌ದಾರನು ಎಕ್ಸಿಸ್ ಬ್ಯಾಂಕ್‌ಗೆ ಸ್ಪಷ್ಟ ಒಪ್ಪಿಗೆಯನ್ನು ನೀಡುತ್ತಾನೆ.

ii. ಕಾರ್ಡ್‌ದಾರರ ಗೌಪ್ಯತೆಯನ್ನು ರಕ್ಷಿಸಲು ಎಕ್ಸಿಸ್ ಬ್ಯಾಂಕ್ ಬದ್ಧವಾಗಿದೆ ಮತ್ತು ಯಾವುದೇ ವೈಯಕ್ತಿಕ ಡೇಟಾವನ್ನು ಎಕ್ಸಿಸ್ ಬ್ಯಾಂಕ್‌ನ ಅಧಿಕೃತ ಸೇವಾ ಪೂರೈಕೆದಾರರು ಮತ್ತು/ಅಥವಾ ಅನ್ವಯವಾಗುವ ಡೇಟಾ ಸಂರಕ್ಷಣಾ ಕಾನೂನುಗಳು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಸಹಯೋಗಿ ವಿಮಾ ಕಂಪನಿಗಳೊಂದಿಗೆ ಮಾತ್ರ ಹಂಚಿಕೊಳ್ಳಲಾಗುತ್ತದೆ. ಈ ಉದ್ದೇಶಕ್ಕಾಗಿ ವೈಯಕ್ತಿಕ ಡೇಟಾವನ್ನು ಹಂಚಿಕೊಳ್ಳುವಾಗ ವೈಯಕ್ತಿಕ ಡೇಟಾವನ್ನು ರಕ್ಷಿಸಲು ಸಮಂಜಸವಾದ ಭದ್ರತಾ ಕ್ರಮಗಳನ್ನು ಎಕ್ಸಿಸ್ ಬ್ಯಾಂಕ್ ಮತ್ತು ಅದರ ಅಧಿಕೃತ ಸೇವಾ ಪೂರೈಕೆದಾರರು/ಸಹಯೋಗಿ ವಿಮಾ ಕಂಪನಿಗಳು ಜಾರಿಗೊಳಿಸಬೇಕು.

iii. ಈ ಉದ್ದೇಶಕ್ಕಾಗಿ ಅಂತಹ ಕರೆಗಳ ಆವರ್ತನವು ಸಮಂಜಸವಾಗಿದೆ ಮತ್ತು ಸಂಬಂಧಿತ ನಿಯಮಗಳಿಗೆ ಅನುಗುಣವಾಗಿರುತ್ತದೆ ಎಂದು ಎಕ್ಸಿಸ್ ಬ್ಯಾಂಕ್ ಖಚಿತಪಡಿಸುತ್ತದೆ. ಕಾರ್ಡ್‌ದಾರರಿಗೆ ಸಮಸ್ಯೆಯಾಗದಂತೆ ಅಮೂಲ್ಯವಾದ ಮಾಹಿತಿಯನ್ನು ಒದಗಿಸಲು ಎಕ್ಸಿಸ್ ಬ್ಯಾಂಕ್ ಶ್ರಮಿಸುತ್ತದೆ.

iv. ಈ ನಿಯಮಗಳು ಮತ್ತು ಷರತ್ತುಗಳನ್ನು ಮಾರ್ಪಡಿಸುವ ಹಕ್ಕನ್ನು ಎಕ್ಸಿಸ್ ಬ್ಯಾಂಕ್ ಹೊಂದಿದೆ. ಯಾವುದೇ ಬದಲಾವಣೆಗಳನ್ನು ಸೂಕ್ತ ವಿಧಾನಗಳ ಮೂಲಕ ಕಾರ್ಡ್‌ದಾರರಿಗೆ ತಿಳಿಸಲಾಗುತ್ತದೆ.

ಕ್ರೆಡಿಟ್ ಕಾರ್ಡ್ ಅನುಮೋದಿಸಲು ತೆಗೆದುಕೊಳ್ಳುವ ಸಮಯದಲ್ಲಿ ವ್ಯತ್ಯಾಸವಿರಬಹುದು, ಅರ್ಜಿ ಸಲ್ಲಿಸಿದ ದಿನಾಂಕದಿಂದ ಕ್ರೆಡಿಟ್ ಕಾರ್ಡ್ ವಿತರಣೆಯ TAT 14 ದಿನಗಳು ಎಂದು ಕಾರ್ಡ್‌ದಾರರಿಗೆ ಈ ಮೂಲಕ ತಿಳಿಸಲಾಗಿದೆ.

ಕ್ರೆಡಿಟ್ ಕಾರ್ಡ್ ಅರ್ಜಿಯಲ್ಲಿ ತಮ್ಮ ಹೆಸರಿನಲ್ಲಿ ನೋಂದಾಯಿಸಿರುವ ಮೊಬೈಲ್ ಸಂಖ್ಯೆಯನ್ನೇ ಒದಗಿಸಿರುವುದಾಗಿ ಕಾರ್ಡ್‌ದಾರರು ಒಪ್ಪಿಕೊಳ್ಳುತ್ತಾರೆ. ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಒದಗಿಸಲಾದ ಮೊಬೈಲ್ ಸಂಖ್ಯೆಯನ್ನು ಕಾರ್ಡ್‌ದಾರರ ಹೆಸರಿನಲ್ಲಿ ನೋಂದಾಯಿಸಿಲ್ಲ ಎಂದು ಕಂಡುಬಂದರೆ, ಕ್ರೆಡಿಟ್ ಕಾರ್ಡ್‌ನಲ್ಲಿರುವ ಮೊಬೈಲ್ ಸಂಖ್ಯೆಯ ಮೂಲಕ ಮಾಡಿದ ಯಾವುದೇ ಚಟುವಟಿಕೆ/ವಹಿವಾಟಿಗೆ ಅವರೇ ಹೊಣೆಗಾರರೂ ಜವಾಬ್ದಾರರೂ ಆಗಿರುತ್ತಾರೆ.

ಎಕ್ಸಿಸ್ ಬ್ಯಾಂಕ್ ಬ್ಯಾಂಕಿಂಗ್ ಕೋಡ್ಸ್ & ಸ್ಟ್ಯಾಂಡರ್ಡ್ಸ್ ಬೋರ್ಡ್ ಆಫ್ ಇಂಡಿಯಾ (BCSBI) ಸದಸ್ಯ ಸಂಸ್ಥೆಯಾಗಿದೆ. BCSBI ಕೋಡ್ ಅಡಿಯಲ್ಲಿ ನಮ್ಮ ಬದ್ಧತೆಗಳನ್ನು ವೀಕ್ಷಿಸಲು ದಯವಿಟ್ಟು ನಮ್ಮ ವೆಬ್‌ಸೈಟ್‌ನ ಮುಖಪುಟಕ್ಕೆ ಭೇಟಿ ನೀಡಿ.

## M) ಮಧ್ಯಸ್ಥಿಕೆ ಷರತ್ತು

ಈ ಪ್ರಸ್ತುತಿಗಳಿಂದ ಉದ್ಭವಿಸುವ ಎಲ್ಲ ತಗಾದೆಗಳು, ವ್ಯತ್ಯಾಸಗಳು ಮತ್ತು / ಅಥವಾ ಕ್ಲೇಮ್‌ಗಳು ಅಥವಾ ಪ್ರಶ್ನೆಗಳು, ಅಥವಾ ಯಾವುದೇ ರೀತಿಯಲ್ಲಿ ಸ್ಪರ್ಶಿಸುವ ಅಥವಾ ಅದರ ರಚನೆಗಳು, ಅರ್ಥ ಅಥವಾ ಪರಿಣಾಮ ಅಥವಾ ಇಲ್ಲಿರುವ ಪಕ್ಷಗಳ ಹಕ್ಕು, ಕಟ್ಟುಪಾಡುಗಳು ಮತ್ತು ಹೊಣೆಗಾರಿಕೆಗಳನ್ನು ಮಧ್ಯಸ್ಥಿಕೆ ಮತ್ತು ಸಂಧಾನ ಕಾಯ್ದೆ, 1996 ರ ನಿಬಂಧನೆಗಳಿಗೆ ಅನುಗುಣವಾಗಿ ಅಥವಾ ಅದರ ಯಾವುದೇ ಶಾಸನಬದ್ಧ ತಿದ್ದುಪಡಿಗಳಿಗೆ ಅನುಗುಣವಾಗಿ, ಸಾಲದಾತ / ಬ್ಯಾಂಕಿನಿಂದ ನಾಮನಿರ್ದೇಶನಗೊಳ್ಳುವ ಏಕೈಕ ಮಧ್ಯಸ್ಥಗಾರನ ಮಧ್ಯಸ್ಥಿಕೆಯ ಮೂಲಕ ಉಲ್ಲೇಖಿಸಲಾಗುತ್ತದೆ ಮತ್ತು ಇತ್ಯರ್ಥಪಡಿಸಲಾಗುತ್ತದೆ. ಆದ್ದರಿಂದ ಮಧ್ಯಸ್ಥಗಾರನಾಗಿ ಕಾರ್ಯನಿರ್ವಹಿಸಲು ನೇಮಕಗೊಂಡ ವ್ಯಕ್ತಿಯ ನಿರಾಕರಣೆ, ನಿರ್ಲಕ್ಷ್ಯ, ಅಶಕ್ತತೆ ಅಥವಾ ಅಸಮರ್ಥತೆ ಕಾರಣವಿದ್ದರೆ, ಸಾಲದಾತ / ಬ್ಯಾಂಕ್ ಹೊಸ ಮಧ್ಯಸ್ಥಗಾರನನ್ನು ಏಕೈಕ ಮಧ್ಯಸ್ಥಗಾರನಾಗಿ ನೇಮಿಸಬಹುದು. ತನ್ನ ತೀರ್ಪಿಗೆ ಯಾವುದೇ ಕಾರಣಗಳನ್ನು ಮಧ್ಯಸ್ಥಗಾರರು ನೀಡಬೇಕಿಲ್ಲ ಮತ್ತು ಮಧ್ಯಸ್ಥಗಾರನ ತೀರ್ಮಾನವು ಅಂತಿಮವಾಗಿರುತ್ತದೆ ಮತ್ತು ಸಂಬಂಧಪಟ್ಟ ಎಲ್ಲ ಪಕ್ಷಗಳು ಅದಕ್ಕೆ ಬದ್ಧವಾಗಿರುತ್ತವೆ. ಮಧ್ಯಸ್ಥಿಕೆ ವಿಚಾರಣೆ ಮುಂಬೈನಲ್ಲಿ ಮಾತ್ರ ನಡೆಯಲಿದೆ.

## N) ನಿಷೇಧ ಷರತ್ತು

ಲಾಟರಿ ಟಿಕೆಟ್‌ಗಳು, ನಿಷೇಧಿತ ಅಥವಾ ಬಹಿಷ್ಕೃತ ನಿಯತಕಾಲಿಕೆಗಳು, ಸ್ವೀಪ್‌ಸ್ಟೇಕ್‌ಗಳಲ್ಲಿ ಭಾಗವಹಿಸುವಿಕೆ, ಕಾಲ್ ಬ್ಯಾಕ್ ಸೇವೆಗಳಿಗೆ ಪಾವತಿ ಮತ್ತು / ಅಥವಾ ವಿದೇಶಿ ವಿನಿಮಯದ ಯಾವುದೇ

ಹಿಂಪಡೆಯುವಿಕೆಗೆ ಅನುಮತಿಸದಿರುವ ನಿಷೇಧಿತ ವಸ್ತುಗಳನ್ನು ಖರೀದಿಸಲು ಅಂತಾರಾಷ್ಟ್ರೀಯ ಕ್ರೆಡಿಟ್ ಕಾರ್ಡ್‌ಗಳನ್ನು ಅಂತರ್ಜಾಲದಲ್ಲಿ ಅಥವಾ ಬೇರೆ ರೀತಿಯಲ್ಲಿ ಬಳಸಲಾಗುವುದಿಲ್ಲ.

**O) ಫೆಮಾ (ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ - FEMA)**

i) ಭಾರತದ ಹೊರಗೆ ವಹಿವಾಟು ನಡೆಸಲು RBI ಯ ವಿನಿಮಯ ನಿಯಂತ್ರಣ ನಿಯಮಗಳು ಮತ್ತು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ, 1999 ಹಾಗೂ ಅನ್ವಯವಾಗುವ ಕಾನೂನಿಗೆ ಅನುಗುಣವಾಗಿ ಕಾರ್ಡ್ ಬಳಸಬೇಕು ಮತ್ತು ಹಾಗೆ ಮಾಡಲು ವಿಫಲವಾದರೆ, ನೀವು ದಂಡದ ಕ್ರಮಕ್ಕೆ ಒಳಗಾಗಬಹುದು.

ii) ಎಲೆಕ್ಟ್ರಾನಿಕ್/ಇಂಟರ್ನೆಟ್ ಟ್ರೇಡಿಂಗ್ ಪೋರ್ಟಲ್‌ಗಳ ಮೂಲಕ ಸಾಗರೋತ್ತರ ವಿದೇಶೀ ವಿನಿಮಯ ವ್ಯಾಪಾರಕ್ಕಾಗಿ ನೇರವಾಗಿ/ಪರೋಕ್ಷವಾಗಿ ಪಾವತಿಗಳನ್ನು ಮಾಡಲು ಕ್ರೆಡಿಟ್ ಕಾರ್ಡ್ ಬಳಸುವಂತಿಲ್ಲ. ನಿಯಂತ್ರಕ ಮಾರ್ಗಸೂಚಿಗಳ ಪ್ರಕಾರ ಇದನ್ನು ನಿಷೇಧಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ.

iii) ಈ ಕಾರ್ಡ್ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಬಳಸಲು ಮಾನ್ಯವಾಗಿದೆ. ಆದರೂ, ನೇಪಾಳ ಮತ್ತು ಭೂತಾನ್‌ನಲ್ಲಿ ವಿದೇಶಿ ಕರೆನ್ಸಿ ವಹಿವಾಟು ನಡೆಸಲು ಇದು ಮಾನ್ಯವಾಗಿಲ್ಲ.

iv) NRI ಗ್ರಾಹಕರು ಮಾತ್ರ ಎಕ್ಸಿಸ್ ಬ್ಯಾಂಕ್ NRE ಖಾತೆಯಿಂದ ಆಟೋ ಪೇ ಮೋಡ್ ಮೂಲಕವೇ 100% ಪಾವತಿಯನ್ನು ಕಡ್ಡಾಯವಾಗಿ ಮಾಡಬೇಕು.

v) NRI ಗ್ರಾಹಕರಿಂದ ನಗದು ಪಾವತಿಗಳನ್ನು ಸ್ವೀಕರಿಸುವುದಿಲ್ಲ.

**P) ಕಾರ್ಡ್ ಖಾತೆಯಲ್ಲಿ ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟುಗಳು**

1) ಮಾನ್ಯವಾಗಿರುವ ಮೊಬೈಲ್ ಸಂಖ್ಯೆಯನ್ನು ಒದಗಿಸದಿರುವ ಗ್ರಾಹಕರಿಗೆ ATM ನಗದು ಹಿಂಪಡೆಯುವಿಕೆಯನ್ನು ಹೊರತುಪಡಿಸಿ ಎಲೆಕ್ಟ್ರಾನಿಕ್ ವಹಿವಾಟಿನ ಸೌಲಭ್ಯವನ್ನು ಬ್ಯಾಂಕ್ ನೀಡುವುದಿಲ್ಲ.

2) ಗ್ರಾಹಕರಿಗೆ ಲಭ್ಯವಾಗುವಂತೆ ಮಾಡಿದ ಯಾವುದೇ ಸ್ಟೇಟ್‌ಮೆಂಟ್/ದಾಖಲೆಗಳ ಮೇಲಿನ ಶಿಲ್ಕಿನ ವಹಿವಾಟುಗಳು/ ವಿವರಗಳಲ್ಲಿ ಯಾವುದೇ ವ್ಯತ್ಯಾಸಗಳಿದ್ದರೆ, ಗ್ರಾಹಕರು ಏಳು (7) ದಿನಗಳೊಳಗೆ ಬ್ಯಾಂಕ್‌ಗೆ ಲಿಖಿತವಾಗಿ ತಿಳಿಸಬೇಕು.

3) ಏಳು (7) ಕೆಲಸದ ದಿನಗಳು ಕಳೆದ ಮೇಲೆ ಯಾವುದೇ ಮಾಹಿತಿಯನ್ನು ಬ್ಯಾಂಕ್ ಸ್ವೀಕರಿಸಿದರೆ, ಬ್ಯಾಂಕ್‌ಗಳ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಬ್ಯಾಂಕ್‌ಗಳ ಮಂಡಳಿಯ ಅನುಮೋದಿತ ನೀತಿಯ ಪ್ರಕಾರ ಗ್ರಾಹಕರ ಹೊಣೆಗಾರಿಕೆಯನ್ನು ನಿರ್ಧರಿಸಲಾಗುತ್ತದೆ.

4) ಬ್ಯಾಂಕ್‌ನಲ್ಲಿ ನಿರ್ವಹಿಸುವ ನಿಮ್ಮ ಸೂಚನೆಗಳ ಎಲ್ಲ ದಾಖಲೆಗಳು ಮತ್ತು ಅಂತಹ ಇತರ ವಿವರಗಳು (ಮಾಡಿದ ಅಥವಾ ಸ್ವೀಕರಿಸಿದ ಪಾವತಿಗಳನ್ನು ಒಳಗೊಂಡಂತೆ ಆದರೆ ಸೀಮಿತವಾಗಿಲ್ಲದೆ), ಇಲ್ಲಿರುವ ನಿಯಮಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಎಲೆಕ್ಟ್ರಾನಿಕ್ ಅಥವಾ ಸಾಕ್ಷ್ಯ ಚಿತ್ರ ರೂಪದಲ್ಲಿದ್ದರೆ, ನಿಮಗೆ

ವಿರುದ್ಧವಾಗಿ, ಅಂತಹ ಸೂಚನೆಗಳು ಮತ್ತು ಇತರ ವಿವರಗಳ ನಿರ್ಣಾಯಕ ಪುರಾವೆ ಎಂದು ಪರಿಗಣಿಸಲಾಗುತ್ತದೆ.s

5) ವರದಿ ಮಾಡುವ ಸಮಯ ಮತ್ತು/ಅಥವಾ ಖಾತೆಯಲ್ಲಿ ಮಾಡಿದ ವ್ಯವಹಾರಕ್ಕೆ/ಗಳಿಗೆ ಅಥವಾ ಹೇಳಿದ ಖಾತೆಗೆ ಸಂಬಂಧಿಸಿದಂತೆ ಯಾವುದೇ ಇತರ ವಿಷಯಕ್ಕೆ ಸಂಬಂಧಿಸಿ ಯಾವುದೇ ತಗಾದೆಗಳಿದ್ದ ಸಂದರ್ಭದಲ್ಲಿ, ಮೂರನೇ ವ್ಯಕ್ತಿಯ ವಂಚನೆಯ ಕಾರಣದಿಂದಾಗಿ ನಿಮ್ಮ ಕಾರ್ಡ್ ಖಾತೆಯಲ್ಲಿ ಅನಧಿಕೃತ ವಹಿವಾಟುಗಳ ಸಂದರ್ಭದಲ್ಲಿ ಅಥವಾ ನೀವು ವಂಚನೆಗೆ ಕೊಡುಗೆ ನೀಡದಿದ್ದಲ್ಲಿ ವಿವಾದಿತ ವಹಿವಾಟಿನ ಸಮಯ ಮತ್ತು/ಅಥವಾ ದೃಢೀಕರಣ ಮತ್ತು ನಿಮ್ಮ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸುತ್ತದೆ, "ಗ್ರಾಹಕರ ರಕ್ಷಣೆ- ಅನಧಿಕೃತ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಹಿವಾಟುಗಳಲ್ಲಿ ಗ್ರಾಹಕರ ಸೀಮಿತ ಹೊಣೆಗಾರಿಕೆ" ಕುರಿತು RBI ಸುತ್ತೋಲೆಯಲ್ಲಿ ನೀಡಲಾದ ಮಾರ್ಗಸೂಚಿಗಳ ಪ್ರಕಾರ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ನಿಯಮಗಳಲ್ಲಿ ಯಾವುದೇ ಬದಲಾವಣೆಗಳು ಅನ್ವಯವಾಗುತ್ತವೆ ಮತ್ತು ಆ ಸಮಯದಲ್ಲಿ ಬದ್ಧವಾಗಿರುತ್ತವೆ.

6) ಗ್ರಾಹಕ ಸೇವಾ ಕೇಂದ್ರ/ಗ್ರಾಹಕರ ದೂರು ಪರಿಹಾರದ ಸಂಪರ್ಕ ವಿವರಗಳಿಗಾಗಿ, ದಯವಿಟ್ಟು ನಮ್ಮ ವೆಬ್‌ಸೈಟ್ ಅನ್ನು ನೋಡಿ: **www.axisbank.com/support**

**Q) ಸುರಕ್ಷಿತ ಕ್ರೆಡಿಟ್ ಕಾರ್ಡ್‌ಗಳು**

1) ಸುರಕ್ಷಿತ ಕ್ರೆಡಿಟ್ ಕಾರ್ಡ್‌ಗಳು ಅಥವಾ ಬ್ಯಾಂಕ್‌ನಿಂದ ಮಂಜೂರಾದ ಯಾವುದೇ ಸೌಲಭ್ಯದ ಅಡಿಯಲ್ಲಿ ಗ್ರಾಹಕರಿಂದ ಬ್ಯಾಂಕಿಗೆ ಬಾಕಿ ಇರುವ ಎಲ್ಲ ಹಣದ ಅಂತಿಮ ಶಿಲ್ಕಿಗಾಗಿ ಸ್ಥಿರ ಠೇವಣಿ ನಿರಂತರ ಭದ್ರತೆಯಾಗಿ ಕಾರ್ಯನಿರ್ವಹಿಸುತ್ತದೆ.

2) ಬೇಪಾವತಿ (ಡೀಫಾಲ್ಟ್) ಆಗಿದ್ದರೆ ಅಥವಾ ಕ್ರೆಡಿಟ್ ಸೌಲಭ್ಯ ಅಥವಾ ಸೌಲಭ್ಯಗಳನ್ನು ಬೇಡಿಕೆಯ ಮೇರೆಗೆ ಮರುಪಾವತಿಸದಿದ್ದರೆ, ಬ್ಯಾಂಕ್ ನಿಗದಿತ/ಅವಧಿಯ ಠೇವಣಿಯನ್ನು ಅಕಾಲಿಕವಾಗಿ ಎನ್‌ಕ್ಯಾಶ್ ಮಾಡಲು ಅಥವಾ ಭದ್ರತೆಗಳು/ಸ್ಥಿರ ಅಥವಾ ಅವಧಿ ಠೇವಣಿಗಳನ್ನು ಹೊಂದಿಸಲು ಅಥವಾ ಉನ್ನತೀಕರಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬಹುದು ಅಥವಾ ಯಾವುದೇ ಸಮಯದಲ್ಲಿ ಅಥವಾ ಬ್ಯಾಂಕ್ ಸಮಂಜಸವೆಂದು ಪರಿಗಣಿಸಿದ ರೀತಿಯಲ್ಲಿ ವರ್ಗಾವಣೆ/ನಿಯೋಜನೆ ಅಥವಾ ಮರುಹಂಚಿಕೆ ಬ್ಯಾಂಕ್‌ನ ಯಾವುದೇ ಶಾಖೆಯ ಖಾತೆಯಲ್ಲಿ(ಗಳಲ್ಲಿ) ಗ್ರಾಹಕರ ಹೊಣೆಗಾರಿಕೆಗಳನ್ನು ವಿಸರ್ಜಿಸಲು ನಿವ್ವಳ ಮೊತ್ತವನ್ನು ಸೂಕ್ತವಾಗಿರುತ್ತದೆ.

3) ಗ್ರಾಹಕರ ಅರ್ಹತೆಯ ಆಧಾರದ ಮೇಲೆ ಸುರಕ್ಷಿತ ಕ್ರೆಡಿಟ್ ಕಾರ್ಡ್‌ಗೆ ಲಿಂಕ್ ಮಾಡಲಾದ ಸ್ಥಿರ ಠೇವಣಿಯಿಂದ ಹೊಣೆಗಾರಿಕೆಯನ್ನು ತನ್ನ ಸ್ವಂತ ವಿವೇಚನೆಯಿಂದ ತೆಗೆದುಹಾಕುವ ಹಕ್ಕನ್ನು ಬ್ಯಾಂಕ್ ಹೊಂದಿದೆ.

**R) ವಿಶೇಷ ಉಲ್ಲೇಖ ಖಾತೆ (SMA)ಮತ್ತು ಅನುತ್ಪಾದಕ ಆಸ್ತಿ (NPA) ಎಂಬುದಾಗಿ ವರ್ಗೀಕರಣ**

ಬೇಪಾವತಿ (ಡೀಫಾಲ್ಟ್) ಆದ ತಕ್ಷಣ, ಅವುಗಳನ್ನು ವಿಶೇಷ ಉಲ್ಲೇಖ ಖಾತೆಗಳು (SMA) ಎಂದು ವರ್ಗೀಕರಿಸುವ ಮೂಲಕ ನಿಯಂತ್ರಕ ಮಾರ್ಗಸೂಚಿಗಳ ನಿಬಂಧನೆಗಳಿಗೆ ಅನುಗುಣವಾಗಿ ಸಾಲದಾತರು ಸಾಲಗಾರರ ಖಾತೆಗಳಲ್ಲಿ ಆರಂಭಿಕ ಒತ್ತಡವನ್ನು ಗುರುತಿಸುವ ಅಗತ್ಯವಿದೆ. ಸಾಲಗಾರರ ಖಾತೆಗಳನ್ನು SMA ಮತ್ತು NPA ಎಂದು ವರ್ಗೀಕರಿಸುವುದನ್ನು ಸಂಬಂಧಿತ ದಿನಾಂಕದ ದಿನಾಂತ್ಯದ ಪ್ರಕ್ರಿಯೆಯ ಭಾಗವಾಗಿ ಮಾಡಲಾಗುತ್ತದೆ ಮತ್ತು SMA ಅಥವಾ NPA ವರ್ಗೀಕರಣ ದಿನಾಂಕವು ದಿನಾಂತ್ಯದ ಪ್ರಕ್ರಿಯೆಯನ್ನು ನಡೆಸುವ ಕ್ಯಾಲೆಂಡರ್ ದಿನಾಂಕವಾಗಿರುತ್ತದೆ. ಅಂತೆಯೇ, SMA/NPA ದಿನಾಂಕವು ಆ ಕ್ಯಾಲೆಂಡರ್ ದಿನಾಂಕದ ದಿನಾಂಂತ್ಯದಲ್ಲಿ ಖಾತೆಯ ಒಪ್ಪಿಗೆ ವರ್ಗೀಕರಣ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಅಂತಹ ವರ್ಗೀಕರಣದ ಒಂದು ವಿವರಣೆ ಈ ಕೆಳಗಿನಂತಿದೆ:

- **SMA 0 -** ಸಾಲದ ಖಾತೆಯ ಅಂತಿಮ ದಿನಾಂಕ ಮಾರ್ಚ್ 31, 2021 ಆಗಿದ್ದರೆ ಮತ್ತು ಈ ದಿನಾಂಕದಂದು ಬಾಕಿಗಳನ್ನು ಪೂರ್ಣವಾಗಿ ಸ್ವೀಕರಿಸದಿದ್ದರೆ, ಖಾತೆಯು ಮಾರ್ಚ್ 31, 2021ರಂದು ದಿನಾಂತ್ಯಕ್ಕೆ SMA 0 ಆಗಿರುತ್ತದೆ.
- **SMA 1 -** ಇದು ಅವದಿ ಮೀರಿ ಬಾಕಿ ಉಳಿದಿದ್ದರೆ, ಈ ಖಾತೆಯನ್ನು ನಿರಂತರವಾಗಿ ಅವಧಿ ಮೀರಿ 30 ದಿನಗಳು ಪೂರ್ಣಗೊಂಡ ಮೇಲೆ ಅಂದರೆ ಏಪ್ರಿಲ್ 30, 2021ರಂದು SMA -1 ಎಂದು ಟ್ಯಾಗ್ ಮಾಡಲಾಗುತ್ತದೆ.
- **SMA 2 -** ಖಾತೆಯು ಅವಧಿ ಮೀರಿ ಪಾವತಿಗೆ ಬಾಕಿಯಾಗಿಯೇ ಉಳಿಯುತ್ತಿದ್ದರೆ, ಅದನ್ನು ಮೇ 30, 2021ರಂದು SMA -2 ಎಂದು ಟ್ಯಾಗ್ ಮಾಡಲಾಗುತ್ತದೆ
- **NPA** – ಅವಧಿ ಮೀರಿಯೂ ಖಾತೆಯು ಇನ್ನೂ ಪಾವತಿಸದೇ ಇರುವ ಸ್ಥಿತಿಯಲ್ಲಿದ್ದರೆ, ಅದನ್ನು ಜೂನ್ 29, 2021ರಂದು NPA ಎಂದು ವರ್ಗೀಕರಿಸಲಾಗುತ್ತದೆ

RBI ಮಾರ್ಗಸೂಚಿಗಳ ಪ್ರಕಾರ, ಖಾತೆಗಳನ್ನು NPA ಎಂದು ಸಾಲಗಾರರ ಪ್ರಕಾರ ವರ್ಗೀಕರಿಸಲಾಗುತ್ತದೆ, ಸೌಲಭ್ಯದ ಪ್ರಕಾರ ಅಲ್ಲ, ಮತ್ತು ಆದ್ದರಿಂದ, ಬ್ಯಾಂಕಿನಿಂದ ಪಡೆದ ಯಾವುದೇ ಸೌಲಭ್ಯದ ಸಂದರ್ಭದಲ್ಲಿ ಗ್ರಾಹಕರು ಬಾಕಿ ಪಾವತಿಸದಿದ್ದಲ್ಲಿ ಮತ್ತು ಅದರ ಪರಿಣಾಮವಾಗಿ ಖಾತೆಯನ್ನು NPA ಎಂದು ವರ್ಗೀಕರಿಸಬೇಕು, ಬ್ಯಾಂಕಿನಲ್ಲಿರುವ ಎಲ್ಲ ಇತರ ಸಾಲ/ಕ್ರೆಡಿಟ್ ಕಾರ್ಡ್ ಮತ್ತು ಸಾಲಗಾರ/ಕಾರ್ಡ್ ಹೊಂದಿರುವವರ ಖಾತೆಗಳನ್ನೂ NPA ಎಂದು ವರ್ಗೀಕರಿಸಬೇಕು ಮತ್ತು ಅಂತಹ ಖಾತೆಗಳಲ್ಲಿ ನಿಯಮಿತ ಪಾವತಿಯನ್ನು ಲೆಕ್ಕಿಸದೆ ಬ್ಯಾಂಕಿನಿಂದ ಪಡೆದ ಎಲ್ಲ ಸಾಲಗಳು/ಕ್ರೆಡಿಟ್ ಕಾರ್ಡ್‌ಗಳು/ಸೌಲಭ್ಯಗಳನ್ನು ವಸೂಲಿ ಮಾಡಲು ಬ್ಯಾಂಕಿಗೆ ಅರ್ಹತೆ ನೀಡುತ್ತದೆ.

**S) ಪ್ರಾದೇಶಿಕ ಭಾಷೆಗಳಲ್ಲಿ ಪ್ರಮುಖ ನಿಯಮಗಳು ಮತ್ತು ಷರತ್ತುಗಳು**

ಪ್ರಾದೇಶಿಕ ಭಾಷೆಗಳಲ್ಲಿನ ಪ್ರಮುಖ ನಿಯಮಗಳು ಮತ್ತು ಷರತ್ತುಗಳ ಮಾಹಿತಿಗಾಗಿ, ದಯವಿಟ್ಟು ಭೇಟಿ ನೀಡಿ: www.axisbank.com; ಲಭ್ಯವಿರುವ ಆಯ್ಕೆಗಳು: 1) ಮರಾಠಿ 2) ಹಿಂದಿ 3) ಬಂಗಾಳಿ 4) ಗುಜರಾತಿ 5) ಮಲಯಾಳಂ 6) ತಮಿಳು 7) ತೆಲುಗು 8) ಕನ್ನಡ

ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿರುವ ಪ್ರಮುಖ ನಿಯಮಗಳು ಮತ್ತು ಷರತ್ತುಗಳನ್ನು ಕಾರ್ಡ್‌ದಾರರು ಈ ಮೂಲಕ ಒಪ್ಪುತ್ತಾರೆ ಮತ್ತು ಅಂಗೀಕರಿಸುತ್ತಾರೆ. www.axisbank.com ಪ್ರಮುಖ ನಿಯಮಗಳು ಮತ್ತು ಷರತ್ತುಗಳ ಇಂಗ್ಲಿಷ್ ಆವೃತ್ತಿಯ ಪ್ರತಿನಿಧಿ ಪಠ್ಯವಾಗಿದೆ.

ಪ್ರಮುಖ ನಿಯಮಗಳು ಮತ್ತು ಷರತ್ತುಗಳ ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಒದಗಿಸಲಾದ ಪಠ್ಯದ ನಡುವೆ ಯಾವುದೇ ಅಸಂಗತತೆ/ ವ್ಯತ್ಯಾಸದ ಸಂದರ್ಭದಲ್ಲಿ, ಅದರ ಇಂಗ್ಲಿಷ್ ಆವೃತ್ತಿಯೇ ಅಂತಿಮವಾಗಿರುತ್ತದೆ ಮತ್ತು ಕಾರ್ಡ್‌ದಾರರು ಅದಕ್ಕೆ ಬಾಧ್ಯಸ್ಥರಾಗಿದ್ದಾರೆ ಎಂದು ಕಾರ್ಡ್‌ದಾರರು ಈ ಮೂಲಕ ಒಪ್ಪುತ್ತಾರೆ ಮತ್ತು ಅಂಗೀಕರಿಸುತ್ತಾರೆ.

ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿರುವ MITC ಯ ಲಿಂಕ್‌ಗಳು:

Marathi - https://axisbank.com/docs/default-source/default-document-library/credit-cards/mitc/most-important-terms-and-conditions-for-axis-bank-credit-cards-marathi.pdf

Hindi - https://axisbank.com/docs/default-source/default-document-library/credit-cards/mitc/most-important-terms-and-conditions-for-axis-bank-credit-cards-hindi.pdf

Bengali - https://axisbank.com/docs/default-source/default-document-library/credit-cards/mitc/most-important-terms-and-conditions-for-axis-bank-credit-cards-bengali.pdf

Gujarati - https://axisbank.com/docs/default-source/default-document-library/credit-cards/mitc/most-important-terms-and-conditions-for-axis-bank-credit-cards-gujarati.pdf

Malayalam - https://axisbank.com/docs/default-source/default-document-library/credit-cards/mitc/most-important-terms-and-conditions-for-axis-bank-credit-cards-malayalam.pdf

Tamil - https://axisbank.com/docs/default-source/default-document-library/credit-cards/mitc/most-important-terms-and-conditions-for-axis-bank-credit-cards-tamil.pdf

Telugu - https://axisbank.com/docs/default-source/default-document-library/credit-cards/mitc/most-important-terms-and-conditions-for-axis-bank-credit-cards-telugu.pdf

Kannada - https://axisbank.com/docs/default-source/default-document-library/credit-cards/mitc/most-important-terms-and-conditions-for-axis-bank-credit-cards-kannada.pdf

**ಹಕ್ಕು ನಿರಾಕರಣೆ:**

ಆದಾಯ, ಲಾಭ, ವ್ಯಾಪಾರ, ಒಪ್ಪಂದಗಳು, ನಿರೀಕ್ಷಿತ ಉಳಿತಾಯ ಅಥವಾ ಸದ್ಭಾವನೆಯ ನಷ್ಟ, ಬಳಕೆದಾರ ಅಥವಾ ಯಾವುದೇ ವ್ಯಕ್ತಿಯಿಂದ ನಿರೀಕ್ಷಿಸಬಹುದಾದ ಅಥವಾ ನಿರೀಕ್ಷಿಸಲು ಸಾಧ್ಯವಿಲ್ಲದ ನಷ್ಟ, ಸಾಫ್ಟ್‌ವೇರ್ ಸೇರಿದಂತೆ ಯಾವುದೇ ಸಾಧನದ ಬಳಕೆ ಅಥವಾ ಮೌಲ್ಯದ ನಷ್ಟ, ಹೇಗಾದರೂ, ಯಾವುದೇ ವಿಳಂಬದಿಂದ ಉಂಟಾಗುವ ಅಥವಾ ಸಂಬಂಧಿಸಿದೆ, ವಿನಂತಿಯನ್ನು ಸ್ವೀಕರಿಸುವಲ್ಲಿ ಮತ್ತು ಪ್ರಕ್ರಿಯೆಗೊಳಿಸುವಲ್ಲಿ ಮತ್ತು ಪ್ರತಿಕ್ರಿಯೆಗಳನ್ನು ರೂಪಿಸುವಲ್ಲಿ ಮತ್ತು ಹಿಂದಿರುಗಿಸುವಲ್ಲಿ ಬ್ಯಾಂಕಿನ ಅಡಚಣೆ, ನಿಲಂಬನ, ನಿರ್ಣಯ ಅಥವಾ ದೋಷ ಅಥವಾ ದೂರಸಂಪರ್ಕ ಉಪಕರಣಗಳಿಗೆ ಮತ್ತು ಯಾವುದೇ ಮಾಹಿತಿ ಅಥವಾ ಸಂದೇಶವನ್ನು ರವಾನಿಸುವಲ್ಲಿ ಯಾವುದೇ ವೈಫಲ್ಯ, ವಿಳಂಬ, ಅಡಚಣೆ, ನಿಲಂಬನ, ನಿರ್ಬಂಧ ಅಥವಾ ದೋಷ, ಬಳಕೆದಾರರು ಮತ್ತು ಯಾವುದೇ ಸೇವಾ ಪೂರೈಕೆದಾರರ ನೆಟ್‌ವರ್ಕ್ ಮತ್ತು ಬ್ಯಾಂಕಿನ ವ್ಯವಸ್ಥೆ ಅಥವಾ ಬಳಕೆದಾರರ ದೂರಸಂಪರ್ಕ ಉಪಕರಣಗಳ ಯಾವುದೇ ಸ್ಥಗಿತ, ಅಡಚಣೆ, ನಿಲಂಬನ ಅಥವಾ ವೈಫಲ್ಯ, ಬ್ಯಾಂಕಿನ ವ್ಯವಸ್ಥೆ ಅಥವಾ ಯಾವುದೇ ಸೇವಾ ಪೂರೈಕೆದಾರರ ನೆಟ್‌ವರ್ಕ್ ಮತ್ತು / ಅಥವಾ ಅಂತಹ ಸೇವೆಗಳನ್ನು ಒದಗಿಸುವ ಯಾವುದೇ ಮೂರನೇ ವ್ಯಕ್ತಿ ಸೌಲಭ್ಯ ಒದಗಿಸಲು ಅಗತ್ಯವಾಗಿದೆ, ಇವುಗಳಿಂದ ಆಗುವ ಯಾವುದೇ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ ನೇರ, ಪರೋಕ್ಷ ಅಥವಾ ಪರಿಣಾಮವಾಗಿ, ಆದರೆ ಅಷ್ಟಕ್ಕೆ ಸೀಮಿತವಾಗಿರದೆ ಬ್ಯಾಂಕ್, ಅದರ ಉದ್ಯೋಗಿಗಳು, ಏಜೆಂಟ್‌ಗಳು ಅಥವಾ ಗುತ್ತಿಗೆದಾರರು ಜವಾಬ್ದಾರರಾಗಿರುವುದಿಲ್ಲ. ಮತ್ತು ಅದರ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಅಥವಾ ಬೇಕಾದಂತಹ ಬಾಹ್ಯ ಸೇವಾ ಪೂರೈಕೆದಾರನ/ರ ಅಥವಾ ಏಜೆಂಟನ/ರ ಸೇವೆಗಳನ್ನು ಎಕ್ಸಿಸ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ, ನಿಯಮಗಳ ಪ್ರಕಾರ ಬಳಸಬಹುದು.

• ಎಕ್ಸಿಸ್ ಬ್ಯಾಂಕ್ 21 ಕೆಲಸದ ದಿನಗಳಲ್ಲಿ ಅರ್ಜಿ ನಮೂನೆಯ ಸ್ಥಿತಿಯನ್ನು ತಿಳಿಸುತ್ತದೆ.
• ಯಾವುದೇ ಡೀಲ್‌ಗಳು, ಉಡುಗೊರೆಗಳು, ವೋಚರ್‌ಗಳು, ರಿವಾರ್ಡ್ ಪಾಯಿಂಟ್‌ಗಳ ರಿಡೆಂಪ್ಶನ್, ಕಾರ್ಡ್ ಸಕ್ರಿಯಗೊಳಿಸುವಿಕೆ ಅಥವಾ ರದ್ದತಿಯನ್ನು ನೀಡಲು ಎಕ್ಸಿಸ್ ಬ್ಯಾಂಕ್ ಎಂದಿಗೂ ಕಾರ್ಡ್ CVV, PIN, OTP ಅಥವಾ ಇಂಟರ್ನೆಟ್ ಪಾಸ್‌ವರ್ಡ್ ಕೇಳುವುದಿಲ್ಲ. ಕರೆ/ಇಮೇಲ್‌ನಲ್ಲಿ ಅಂತಹ ವಿನಂತಿಗಳನ್ನು ದಯವಿಟ್ಟು ನಿರ್ಲಕ್ಷಿಸಿ. ಯಾವುದೇ ಪತ್ರ ವ್ಯವಹಾರದ ಮೊದಲು ಅಧಿಕೃತ ವೆಬ್‌ಸೈಟ್‌ನಲ್ಲಿ ಎಕ್ಸಿಸ್ ಬ್ಯಾಂಕ್ ಸಂಪರ್ಕ ಸಂಖ್ಯೆಗಳನ್ನು ದೃಢೀಕರಿಸಿ.
• ಯಾವುದೇ ಆನ್‌ಲೈನ್ / ಇ-ಕಾಮ್ ವಹಿವಾಟುಗಳನ್ನು ಪ್ರಾರಂಭಿಸುವ ಮೊದಲು ದಯವಿಟ್ಟು ವೆಬ್‌ಸೈಟ್ ಮತ್ತು/ಅಥವಾ ಪೋರ್ಟಲ್‌ನ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಿ. ನಿಮ್ಮ ಹಣವನ್ನು ದೋಚುವ ನಕಲಿ ವೆಬ್‌ಸೈಟ್‌ಗಳ ಬಗ್ಗೆ ತಿಳಿದಿರಲಿ.
• ಬ್ಯಾಂಕ್ ನೀಡುವ ಕಾರ್ಡ್ ಗ್ರಾಹಕರ ವೈಯಕ್ತಿಕ ಬಳಕೆಗಾಗಿ ಮಾತ್ರವಿರುತ್ತದೆ. ಮೂರನೇ ವ್ಯಕ್ತಿಯ ಪರವಾಗಿ ಅಥವಾ ಲಾಭಕ್ಕಾಗಿ ಮಾಡಿದ ವಹಿವಾಟುಗಳನ್ನು ಬ್ಯಾಂಕ್ ಪ್ರೋತ್ಸಾಹಿಸುವುದಿಲ್ಲ ಅಥವಾ ಬೆಂಬಲಿಸುವುದಿಲ್ಲ.
• ಅಂತಾರಾಷ್ಟ್ರೀಯ ವಹಿವಾಟುಗಳಿಗೆ ವ್ಯಾಪಾರಿ ಮರುಪಾವತಿ/ತಗಾದೆಗಳ ಸಂದರ್ಭದಲ್ಲಿ, ಕರೆನ್ಸಿ ಏರಿಳಿತದಿಂದ ಉಂಟಾಗುವ ಯಾವುದೇ ದರ ವ್ಯತ್ಯಾಸವನ್ನು ಗ್ರಾಹಕರೇ ಭರಿಸುತ್ತಾರೆ.

**ಸಂಪರ್ಕ ಚಾನಲ್‌ಗಳು**

**ಗ್ರಾಹಕ ಸೇವೆಗಳು**

1860 500 5555 ಅಥವಾ 1860 419 5555 ಭಾರತದ ಯಾವುದೇ ಲ್ಯಾಂಡ್‌ಲೈನ್ ಅಥವಾ ಸೆಲ್ ಫೋನ್‌ನಿಂದ ಸಂಪರ್ಕಿಸಬಹುದು

ಏಸ್ (ACE) ಕ್ರೆಡಿಟ್ ಕಾರ್ಡ್‌ಗಳಿಗಾಗಿ: 1860 419 1919
ಬರ್ಗಂಡಿ ಪ್ರೈವೇಟ್ ಕಾರ್ಡ್‌ಗಳಿಗಾಗಿ: 1800 210 8888
ಪ್ರೀಮಿಯಂ ಕಾರ್ಡ್‌ಗಳಿಗಾಗಿ: ವಿಸ್ತಾರಾ ಇನ್‌ಫೈನೈಟ್, ರಿಸರ್ವ್, ಸೆಲೆಕ್ಟ್, ಅಟ್ಲಾಸ್, ಮೈಲ್ಸ್ & ಮೋರ್ ವರ್ಲ್ಡ್ ಸೆಲೆಕ್ಟ್ ಮತ್ತು ಇನ್‌ಫೈನೈಟ್, ದಯವಿಟ್ಟು ಸಂಪರ್ಕಿಸಿ: 1800 419 0065

ಭಾರತದ ಹೊರಗಿದ್ದರೆ ಸಂಪರ್ಕಿಸಿ: +91 - 22-27648000.

ಇ-ಮೇಲ್ ID: axisbank.com/support
ಏಸ್ (ACE) ಕ್ರೆಡಿಟ್ ಕಾರ್ಡ್‌ಗಳಿಗಾಗಿ ಇ-ಮೇಲ್ ID: service.acecard@axisbank.com

ಎಲ್ಐಸಿ (LIC) ಕಾರ್ಡ್‌ಗಳಿಗೆ: 1800 419 0064
ಇಮೇಲ್ ID: axisbank.com/support

**ಕುಂದುಕೊರತೆ ಪರಿಹಾರ /ದೂರು ಸಲ್ಲಿಕೆ**

ಇವರಿಗೆ,
ಶ್ರೀ ಅಶೋಕ್ ಸುನಾರ್, ನೋಡಲ್ ಅಧಿಕಾರಿ

ಎಕ್ಸಿಸ್ ಬ್ಯಾಂಕ್ ಲಿಮಿಟೆಡ್., NPC1, 5ನೇ ಮಹಡಿ, "ಗಿಗಾಪ್ಲೆಕ್ಸ್", ಪ್ಲಾಟ್ ಸಂಖ್ಯೆ. L.T. 5, MIDC, ಐರೋಲಿ ನಾಲೆಡ್ಜ್ ಪಾರ್ಕ್, ಐರೋಲಿ, ನವಿ ಮುಂಬೈ - 400 708. ಇ-ಮೇಲ್ ID: nodal.officer@axisbank.com, ದೂ. 91-080-61865200. ಸಮಯ: ಬೆಳಗ್ಗೆ 9: 30ರಿಂದ ಸಂಜೆ 5:30 ರವರೆಗೆ (ಸೋಮವಾರದಿಂದ ಶುಕ್ರವಾರದವರೆಗೆ)

ಬ್ಯಾಂಕಿಂಗ್ ರಜಾದಿನಗಳನ್ನು ಹೊರತುಪಡಿಸಿ ಬೆಳಗ್ಗೆ 9:30ರಿಂದ ಮಧ್ಯಾಹ್ನ 2:00 ರವರೆಗೆ (ಶನಿವಾರ)

ಯಾವುದೇ ಕುಂದುಕೊರತೆಗಳಲ್ಲಿ ಅನ್ವಯವಾಗುವ ಯಾವುದೇ ಪರಿಹಾರವನ್ನು ಲಭ್ಯವಿರುವ ಬ್ಯಾಂಕಿನ ಪರಿಹಾರ ನೀತಿಯ ಪ್ರಕಾರ ಒದಗಿಸಲಾಗುತ್ತದೆ: https://www.axisbank.com/docs/default-source/default-document-library/Customer-Compensation-Policy.pd